# ಕೇರಳ ಪಾಠಾವಳಿ

## KERALA READER

# ಕನ್ನಡ
# ಮುಂದುವರಿದ ಪಠ್ಯ

# KANNADA
# ADVANCED TEXT

**ತರಗತಿ**

**VI**

ಭಾಗ - 1

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಕರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - VI (Advanced Text)

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2025
Printed at : KBPS Kakkanad, Kochi
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಮಾಧ್ಯಮವಲ್ಲ. ಅದು ನಮ್ಮ ಕಣ್ಣಿಗೆ ಸರಿಸಮವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತವೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತವೆ, ಹಿತೈಷಿಗಳಂತೆ ಇರುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

## TEXT BOOK DEVELOPMENT COMMITTEE
## KANNADA VI

**Advisor**

| | |
|---|---|
| Shivashankara P. | Asst. Professor, GPM College, Manjeshwara. |

**Chairperson**

| | |
|---|---|
| Sri.Dr. Balakrishna B.M. | Associate Professor, Govt. College, Kasaragod |

**Experts**

| | |
|---|---|
| Sri. C.H. Rama Bhat | Professor of Kannada (Rtd), Govt. College, Kasaragod |
| Dr. Savitha B. | Associate Professor, Govt. College, Kasaragod |
| Sri. Ramanna D. | Rtd. HM, GVHSS Delampady |

**Participants**

| | |
|---|---|
| Sri. Shridhara Bhat B. | HM, GBLPS Heroor |
| Sri. Radhakrishna Bhat K. | UPST, SNHS Perla |
| Sri. Shrinivasa K.H. | UPST, AUPS Dharmathadka |
| Sri. Gopala P.K . | UPST, GHSS Padre |
| Smt. Jyothsna K. | UPST, NHSS Perdala |
| Sri. Praveen K. | UPST, GHSS Paivalike Nagar |
| Sri. Nayana Prasad H.T. | UPST, GHS Kadambar |
| Sri. Pradeep Kumar B.S. | UPST, BAUPS Katukukke |

**Artists**

| | |
|---|---|
| Sri. Divakara | Drawing Teacher (Rtd), GHSS Kumbale |
| Sri. Satheesh K. | Drawing Teacher, BRC Kumbale |

**Academic Co-ordinator**

**Dr. Sahaya Dhas D.**

Research Officer, SCERT, Thiruvananthapuram.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ, ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| ಕ್ರಮಸಂಖ್ಯೆ | ಘಟಕ | ಪುಟ ಸಂಖ್ಯೆ |
|---|---|---|
| **1.** | **ಹಸಿರಿರಲಿ ಉಸಿರಿಗೆ** | **7 - 28** |
| 1. | ಬಿಸಿ ಬಿಸಿ ರೊಟ್ಟಿ | ಅನುವಾದಿತ ಕೃತಿ ಸಂಗ್ರಹ |
| 2. | ಗಗನದಿ ಸಾಗಿವೆ | ಚೆನ್ನವೀರ ಕಣವಿ |
| 3. | ಬೇಸಿಗೆಯ ತಾಪಕ್ಕೆ ಬಿಸಿಯೇರುತ್ತಿದೆ ಭೂಮಿ | ಸುಧಾ ನಾಗೇಶ್ |
| 4. | ಅಜ್ಜಿಮನೆ | ವಾಣಿ ರಾಜ್ |
| **2.** | **ಸಿರಿ ಸಂಸ್ಕೃತಿ** | **29 - 55** |
| 1. | ಜನಪದ ಕಲೆಗಳು | ಫಕೀರ್ ಮಹಮ್ಮದ್ ಕಟ್ಪಾಡಿ, ಡಾ. ಡಿ.ವಿ.ಎಸ್. ಶರ್ಮ |
| 2. | ಬೀರು ಕಲ್ಕುಡ | ಅಮೃತ ಸೋಮೇಶ್ವರ |
| 3. | ನಮ್ಮ ಊರಿನ ರಸಿಕರು | ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ |
| **3.** | **ಸಹಬಾಳ್ವೆ** | **56 - 76** |
| 1. | ಕರುಣಾಳು ತಂದೆ | ಟೀಕಲ್ ಗೋಪಾಲಕೃಷ್ಣ |
| 2. | ಕತ್ತೆ ಮತ್ತು ಧರ್ಮ | ಡಾ. ಸಿದ್ಧಲಿಂಗಯ್ಯ |
| 3. | ಸ್ವಾಮಿ ವಿವೇಕಾನಂದ | ಆರ್ಯಾಂಬ ಪಟ್ಟಾಭಿ |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 1. ಹಸಿರಿರಲಿ ಉಸಿರಿಗೆ

ಕಾಲ ಋತುಗಳ ಬದಲಾವಣೆಗಳು ಪ್ರಕೃತಿಯ ವಿಸ್ಮಯಗಳಲ್ಲಿ ಒಂದು. ಬಿಸಿ ಏರಿ ಒಣಗಿದ ಭೂಮಿಯು ಮಳೆಯ ಆಗಮನದೊಂದಿಗೆ ತಂಪಾಗುತ್ತದೆ. ಮಳೆಗಾಲ ಮುಗಿದು ಬೆಳೆದು ನಿಂತ ಪೈರಿನ ಕ◌್ಯೊಲಿನ ಕಾಲಕ್ಕೆ ಚಳಿಗಾಲದ ಆಗಮನವಾಗುತ್ತದೆ. ಜನವರಿ ತಿಂಗಳು ಕಳೆದರೆ ಆರಂಭವಾಗುವುದು ಬೇಸಿಗೆ ಕಾಲ. ಜಾಗತಿಕ ತಾಪಮಾನದ ವ್ಯತ್ಯಾಸದಿಂದ ದಿನದಿಂದ ದಿನಕ್ಕೆ ಹವಾಮಾನದ ಉಷ್ಣತೆಯಲ್ಲಿ ಗಣನೀಯ ಹೆಚ್ಚಳ ಉಂಟಾಗಿರುವುದು ನಿಜಕ್ಕೂ ಆತಂಕಕಾರಿ. ಪ್ರಕೃತಿಯ ಸಮತೋಲನವನ್ನು ಕಾಪಾಡುವುದು ಜನರ ನೆಮ್ಮದಿಯ ಬದುಕಿಗೆ ಅನಿವಾರ್ಯ. ಪ್ರಕೃತಿಯ ಸೊಬಗು, ವೈಚಿತ್ರ್ಯ ಇಂದಿನ ಪರಿಸರದ ಜಾಗತಿಕ ಸಮಸ್ಯೆಗಳನ್ನು ಮನನ ಮಾಡಿಕೊಳ್ಳುವುದಕ್ಕೆ 'ಬಿಸಿ ಬಿಸಿ ರೊಟ್ಟಿ', 'ಗಗನದಿ ಸಾಗಿವೆ', 'ಬೇಸಿಗೆಯ ತಾಪಕ್ಕೆ ಬಿಸಿಯೇರುತಿದೆ ಭೂಮಿ' ಮತ್ತು 'ಅಜ್ಜಿಮನೆ' ಪಾಠಭಾಗಗಳನ್ನು ಈ ಘಟಕದಲ್ಲಿ ಕೊಡಲಾಗಿದೆ.



## ಪ್ರವೇಶ ಚಟುವಟಿಕೆ

ನೋಡು ನೋಡು ಕುಳಿರ ಬೀಡು ಮಾಗಿ ಬರುತಿದೆ
ಹಲ್ಲ ಕಡಿದು ಮುಷ್ಟಿ ಹಿಡಿದು ಸೆಟೆದು ನಿಂತಿದೆ
ಚಿತ್ರ ಐಕಿಲದರ ತಲೆಯ ತಿರುಳು
ಕೊರೆಯುವ ಚಳಿಯದರ ಕರುಳು
ಬೆರೆತ ಮುಗಿಲೆ ನೆರೆತ ಕರುಳು
ಮಾಗಿ ಬರುತಿದೇ

ಕುಳಿರು - ತಂಪು
ಸೆಡೆಯು - ತಲ್ಲಣ
ಐಕಿಲ - ಹೇಮಂತ ಋತು

ಮೇಲೆ ಹೇಳಿದ ಪದ್ಯವು ಒಂದು ಋತು(ಕಾಲ)ವಿಗೆ ಸಂಬಂಧಿಸಿದ ಹಾಡಾಗಿದೆ. ಯಾವ ಕಾಲಕ್ಕೆ ಸಂಬಂಧಿಸಿದ ಹಾಡು ಇದಾಗಿದೆ. ಚಳಿಗಾಲಕ್ಕೆ ಸಂಬಂಧಿಸಿದ ನಿಮ್ಮ ಅನುಭವಗಳು ಒಳಗೊಂಡಿರುವ ಒಂದು ಕಿರುಟಿಪ್ಪಣಿ ಬರೆದು ಮಂಡಿಸಿರಿ.



# ಬಿಸಿ ಬಿಸಿ ರೊಟ್ಟಿ

ಚಳಿಗಾಲದ ದಿನಗಳು. ಸ್ಕೂಲಿನ ಮೇಟ್ರನ್ ಅನ್ನಾ ಒಂದು ದಿನ ಸ್ಕೂಲಿನಲ್ಲಿ ಔತಣಕೂಟವೊಂದನ್ನು ಏರ್ಪಡಿಸಿದ್ದಳು. ಬಹಳಷ್ಟು ಜನರು ಬಂದಿದ್ದರು. ಅದೇ ಸ್ಕೂಲಿನ ಒಬ್ಬ ಬಡ ಹುಡುಗ ಮಾಲ್ಯೂಶ್ ಔತಣಕೂಟದ ಮುನ್ನಾ ದಿನವೇ ಬಂದು ಅನ್ನಾಳ ಕೆಲಸಕಾರ್ಯಗಳಲ್ಲಿ ಸಹಾಯಮಾಡುತ್ತಿದ್ದ. ಬಿಸಿಬಿಸಿ ರೊಟ್ಟಿಗಳನ್ನು ಬಡಿಸಲಾಗುತ್ತಿತ್ತು. ಅನ್ನಾ ಬಿಸಿಬಿಸಿ ರೊಟ್ಟಿ ಮಾಡುವುದನ್ನು ನೋಡಿದಾಗ ಹುಡುಗನಿಗೆ ತನ್ನ ತಾಯಿಯ ನೆನಪಾಯಿತು. ಅವಳು ಬಿಸಿ ರೊಟ್ಟಿ ತಿಂದು ಎಷ್ಟೋ ದಿನಗಳಾಗಿತ್ತು. ಅವಳಿಗೆ ಬಿಸಿ ರೊಟ್ಟಿಗಳೆಂದರೆ ತುಂಬ ಇಷ್ಟ.

ಔತಣಕೂಟ ಆರಂಭವಾಗುವ ಮೊದಲು ಹುಡುಗ ಅನ್ನಾಳ ಬಳಿ ಬಂದು ಕೇಳಿದ "ಆಂಟಿ.... ನನ್ನ ಅಮ್ಮನಿಗೆ ಬಿಸಿ ರೊಟ್ಟಿಗಳೆಂದರೆ ಪ್ರಾಣ, ಅವಳಿಗಾಗಿ ಒಂದಿಷ್ಟು ರೊಟ್ಟಿಗಳನ್ನು ತೆಗೆದುಕೊಂಡು ಹೋಗಲೇ?" 'ಅಕಸ್ಮಾತ್ ರೊಟ್ಟಿಗಳು ಮುಗಿದು ಹೋಗಬಹುದು' ಎಂದು ಅವನ ಯೋಚನೆಯಾಗಿತ್ತು.

"ಖಂಡಿತ ತೆಗೆದುಕೊಂಡು ಹೋಗು" ಮೇಟ್ರನ್ ಅವನ ಬೆನ್ನು ತಟ್ಟಿದಳು. "ಅದಕ್ಕೆ ಮೊದಲು ನೀನು ತಿನ್ನು" ಎಂದಳು. ಔತಣಕೂಟ ಮುಗಿಯಿತು. ಮಾಲ್ಯೂಶ್ ಮನೆಗೆ ಹೋಗುವ ಆತುರದಲ್ಲಿದ್ದ. ಆದರೆ ಹೊರಗೆ ಮಂಜು ಸುರಿಯುತ್ತಿತ್ತು. ಇನ್ನೂ ಬೆಳಕು ಇರುವಾಗಲೇ ಎಲ್ಲೆಡೆ ಕತ್ತಲು ಕವಿದಂತಾಗಿತ್ತು. ವಾತಾವರಣ ಹದಗೆಟ್ಟಿತ್ತು. ಅನ್ನಾಗೆ ಗಾಬರಿಯಾಯ್ತು. "ಓಹ್! ಮಾಲ್ಯೂಶ್.... ಹೊರಗೆ ವಿಪರೀತ ಮಂಜು ಬೀಳುತ್ತಿದೆ..... ಈ ವೇಳೆಯಲ್ಲಿ ನೀನು ಮನೆಗೆ ಹೋಗುವುದಾದರೂ ಹೇಗೆ?" ಕೇಳಿದಳು.

ಹುಡುಗ ಕಿಟಿಕಿಯಿಂದ ಹೊರಗೆ ನೋಡಿದ. ಅವನಿಗೆ ನಿರಾಸೆಯಾಯಿತು. ಆದರೆ ತನ್ನ ತಾಯಿಗೆ ರೊಟ್ಟಿಗಳನ್ನು ತೆಗೆದುಕೊಂಡು ಹೋಗಲು ಅವನ ಮನಸ್ಸು ಚಡಪಡಿಸುತ್ತಿತ್ತು. "ಆಂಟೀ.... ನೀವು ಯೋಚಿಸಬೇಡಿ. ನಾನು ಬೇಗ ಬೇಗ ನಡೆದು ಮನೆ ಸೇರಿಕೊಳ್ಳುತ್ತೇನೆ." ಉತ್ಸಾಹದಿಂದ ಹೇಳಿದ.

ಅನ್ನಾಗೆ ಅವನ ಮನಸ್ಸು ತಿಳಿಯಿತು. ಹೆಚ್ಚು ವಿರೋಧಿಸಲಿಲ್ಲ. ಮಾಲ್ಯೂಶ್ ಮನೆಗೆ ಹೋಗಲು ಒಪ್ಪಿದಳು. ಅವನಿಗೆ ಬೆಚ್ಚನೆಯ ಉಡುಪು ಹಾಕಿದಳು. ತಲೆಗೆ ಕರವಸ್ತ್ರ ಕಟ್ಟಿದಳು. ಅವನ ತಾಯಿಗಾಗಿ ಬಿಸಿ ಬಿಸಿ ರೊಟ್ಟಿ ಕಟ್ಟಿಕೊಟ್ಟಳು.

ಮಾಲ್ಯೂಶ್ ಮನೆಯ ಕಡೆ ಹೊರಟಾಗ ಕಪ್ಪು ಬಣ್ಣದ ನಾಯಿ ಬ್ಲಾಕಿ ಅವನ ಜೊತೆ ಹೊರಟಿತು. ಇಬ್ಬರಿಗೂ ತುಂಬ ಸ್ನೇಹವಿತ್ತು. 'ಹೊರಗೆ ವಾತಾವರಣ ತುಂಬ ಭಯಾನಕವಾಗಿದೆ' ಎನಿಸಿ ಅನ್ನಾ ಚಿಂತಿತಳಾದಳು. ಮಾಲ್ಯೂಶ್ ಹೋದ ಮೇಲೆ ಅನ್ನಾ ತನ್ನ ಕೊಠಡಿಗೆ ಬಂದಳು. ಕಿಟಕಿಯ ಬಳಿ ಬಂದು ಹೊರಗೆ ಇಣುಕಿದಳು. ಹೊರಗೆ ಮಂಜು ಒಂದೇ ಸಮನೆ ಸುರಿಯುತ್ತಿತ್ತು. ಅನ್ನಾ ಒಂದು ಕ್ಷಣ ಯೋಚಿಸಿ ಬೇಗ ಬೇಗ ಬೆಚ್ಚನೆಯ ಉಡುಪು ಧರಿಸಿ ಪಕ್ಕದ ಗಲ್ಲಿಯಲ್ಲಿ ನಡೆದಳು.

ಒಬ್ಬಳೇ ಹೋಗಲು ಧೈರ್ಯವಾಗಲಿಲ್ಲ. ನೆರೆಮನೆಯ ಹುಡುಗ ಇವಾನ್‌ನನ್ನೂ ಜೊತೆಯಲ್ಲಿ ಕರೆದುಕೊಂಡು, ಹೊರಟಳು. ಇವಾನ್ ತಾನು ತಂದಿದ್ದ ಕೋಲಿನಿಂದ ಮಂಜುಗಡ್ಡೆಯನ್ನು ಪಕ್ಕಕ್ಕೆ ಸರಿಸುತ್ತಾ ದಾರಿ ಮಾಡುತ್ತಿದ್ದನು. ಅನ್ನಾ ಅವನ ಹಿಂದೆ ಸರಸರನೆ ನಡೆಯುತ್ತಿದ್ದಳು. ಕೊನೆಗೆ ಅವರು ಮಾಲ್ಯೂಶ್‌ನ ಮನೆಗೆ ಬಂದರು.

ಬಾಗಿಲು ಬಡಿದರು. ಮಾಲ್ಯೂಶ್‌ನ ತಾಯಿ ಫೆಡೋಶಿಯಾ ಬಾಗಿಲು ತೆರೆದಳು. ಅನ್ನಾಳ ಜೊತೆ ತನ್ನ ಮಗ ಇರಲಿಲ್ಲ. ಬೇರೆ ಹುಡುಗ ಇದ್ದ. ಅವಳಿಗೆ ಸೋಜಿಗ ಎನಿಸಿತು. "ಮಾಲ್ಯೂಶ್ ಎಲ್ಲಿ? ನಿನ್ನೆ ಸ್ಕೂಲಿಗೆ ಹೋದವನು ಇದುವರೆಗೆ ಬಂದಿಲ್ಲ....." ಫೆಡೋಶಿಯಾ ಗಾಬರಿಯಿಂದ ಹೇಳಿದಳು.

ಅವಳ ಮಾತು ಕೇಳಿ ಅನ್ನಾಗೆ ಜಂಘಾಬಲವೇ ಉಡುಗಿದಂತಾಯಿತು. ಅವಳು ನಿಲ್ಲಲು ಶಕ್ತಿ ಇಲ್ಲದವಳಂತೆ ಕುರ್ಚಿಯ ಮೇಲೆ ಧಡಂ ಎಂದು ಕುಳಿತಳು. ಫೆಡೋಶಿಯಾಗೆ ಭಯವಾಯಿತು. "ಇವಾನ್..... ಅಕ್ಕಪಕ್ಕದವರನ್ನೂ ಕರೆದುಕೊಂಡು ಬಾ........ ಎಲ್ಲರೂ ಮಾಲ್ಯೂಶ್‌ನನ್ನು ಹುಡುಕೋಣ." ಅನ್ನಾ ಧೈರ್ಯ ತಂದುಕೊಂಡು ಹೇಳಿದಳು.

ಇವಾನ್ ಹೊರಗೆ ಓಡಿದ. ನೆರೆಹೊರೆಯವರು ಫೆಡೋಶಿಯಾಳ ಮನೆಯ ಮುಂದೆ ಸೇರಿದರು. ಎಲ್ಲರಿಗೂ ಮಾಲ್ಯೂಶ್‌ನ ಬಗ್ಗೆ ಚಿಂತೆಯಾಯಿತು. ಹೊರಗಿನ ಕೆಟ್ಟ ವಾತಾವರಣದಿಂದ ಎಲ್ಲರೂ ದಿಗಿಲುಗೊಂಡಿದ್ದರು.

ಅಷ್ಟರಲ್ಲಿ ಒಬ್ಬ ಹುಡುಗ ಓಡುತ್ತಾ ಬಂದ. ಅವನು ಮೇಲುಸಿರು ಬಿಡುತ್ತಿದ್ದ. "ಆ ಚಿಕ್ಕ ಪರ್ವತದ ಹಿಂದೆ, ಹಿಮರಾಶಿಯ ಬಳಿ, ಒಂದು ನಾಯಿ ಒಂದೇ ಸಮನೆ ಬೊಗಳುತ್ತಿದೆ. ಈ ಚಳಿಗೆ ಹೆದರಿ ಎಲ್ಲ ಪ್ರಾಣಿಗಳು ಅಡಗಿ ಕುಳಿತಿರುವಾಗ ನಾಯಿ ಬೊಗಳುತ್ತಿರುವುದು ನನಗೆ ಆಶ್ಚರ್ಯ ಎನಿಸಿತು! ಬಹುಶ: ಆ ನಾಯಿ ಏನನ್ನೋ ಹೇಳಲು ಪ್ರಯತ್ನಿಸುತ್ತಿದೆ" ಎಂದು ಆತುರದಿಂದ ಹೇಳಿದ.

ತನ್ನ ಮನೆಯಿಂದ ಹೊರಟಾಗ ಬ್ಲಾಕಿ ನಾಯಿ ಮಾಲ್ಯೂಶ್‌ನ ಸಂಗಡ ಇದ್ದದ್ದು ಅನ್ನಾಗೆ ನೆನಪಾಯಿತು. "ನಡೆಯಿರಿ.... ಇನ್ನು ತಡಮಾಡಬಾರದು. ಮಾಲ್ಯೂಶ್ನನ್ನು ಹುಡುಕೋಣ." ಜನರು ಗುದ್ದಲಿ, ಪಿಕಾಸಿ ಮತ್ತು ಕಂದೀಲು ಹಿಡಿದು ಹೊರಟರು. ಬ್ಲಾಕಿ ಬೊಗಳುತ್ತಿದ್ದ ಸದ್ದು ಕೇಳಿಸಿತು. ಅದರ ಧ್ವನಿಯಲ್ಲಿ ನೋವಿರುವುದನ್ನು ಅನ್ನಾ ಕೂಡಲೇ ಗುರುತಿಸಿದಳು. "ಬ್ಲಾಕಿ... ಬ್ಲಾಕಿ" ಅನ್ನಾ ಕೂಗಿದಳು. ಬ್ಲಾಕಿ ತನ್ನೆಲ್ಲಾ ಶಕ್ತಿಯನ್ನುಪಯೋಗಿಸಿ ಅನ್ನಾಳ ಬಳಿ ಬಂತು. ಅವಳ ಕಾಲು ಉಜ್ಜುತ್ತಾ ಮೂರ್ನಾಲ್ಕು ಬಾರಿ ಅವಳನ್ನು ಸುತ್ತಿತು. ಅನ್ನಾ ಅದನ್ನು ಹಿಡಿದು ಮುದ್ದಿಸಿದಳು. ಆದು ಒಮ್ಮೆಲೇ ಓಡಿತು. ಮಂಜಿನ ರಾಶಿಯ ಬಳಿ ನಿಂತು ತನ್ನ ಕಾಲುಗಳಿಂದ ಕೆರೆಯತೊಡಗಿತು. ಜನರು ಕೂಡಲೇ ಗುದ್ದಲಿ, ಪಿಕಾಸಿಯಿಂದ ಮಂಜುಗಡ್ಡೆಯನ್ನು ಅಗೆಯತೊಡಗಿದರು. ಮಂಜುರಾಶಿಯಲ್ಲಿ ಮಾಲ್ಯೂಶ್ ಇರುವುದು ಕಂಡಿತು.



ಫೆಡೋಶಿಯಾ ಮಗನನ್ನು ಆ ಅವಸ್ಥೆಯಲ್ಲಿ ಕಂಡು ಜೋರಾಗಿ ಅಳತೊಡಗಿದಳು. ಆದರೆ ಅನ್ನಾ ಧೈರ್ಯದಿಂದ ಪರಿಸ್ಥಿತಿ ನಿಭಾಯಿಸಿದಳು. ವಿಪರೀತ ಚಳಿಯ ಕಾರಣದಿಂದ ಮಾಲ್ಯೂಶ್‌ನ ದೇಹ ಸೆಟೆದುಕೊಂಡಿತ್ತು. ಅವನ ನಾಡಿ ಹಿಡಿದು ನೋಡಿದಳು. ಕ್ಷೀಣವಾಗಿ ನಾಡಿ ಮಿಡಿಯುತ್ತಿತ್ತು. ಈಗ ಅನ್ನಾ ನೆಮ್ಮದಿಯ ಉಸಿರು ಬಿಟ್ಟಳು.

ಜನರ ಸಹಾಯದಿಂದ ಅವನನ್ನು ಮೇಲಕ್ಕೆ ಎತ್ತಿ ಮನೆಗೆ ಕರೆತಂದರು. ಅನ್ನಾ ಅವನ ಬಟ್ಟೆಗಳನ್ನು ಕಳಚಿದಳು. ಪಕ್ಕದಲ್ಲಿ ಬೆಂಕಿ ಉರಿಸಿದಳು. ಮಾಲ್ಯೂಶ್‌ನ ದೇಹಕ್ಕೆ ಶಾಖಕೊಟ್ಟಳು. ಇವಾನ್ ಅವಳ ಈ ಎಲ್ಲ ಕೆಲಸದಲ್ಲಿ ಸಹಾಯ ಮಾಡುತ್ತಿದ್ದ.

ಸ್ವಲ್ಪಹೊತ್ತು ಕಳೆಯಿತು. ಮಾಲ್ಯೂಶ್‌ನ ದೇಹದಲ್ಲಿ ಜೀವಸಂಚಾರವಾದಂತಾಯಿತು. ಸೆಟೆದುಕೊಂಡಿದ್ದ ಅವನ ಶರೀರ ಈಗ ಸಡಿಲವಾಯಿತು. ಅದನ್ನು ಕಂಡು ಅಲ್ಲಿದ್ದವರ ಮುಖದಲ್ಲಿ ಸಂತೋಷ ಚಿಮ್ಮಿತು. ಮಾಲ್ಯೂಶ್‌ನ ತಮ್ಮ, ತಂಗಿಯರ ಕಣ್ಣುಗಳಲ್ಲಿ ಆನಂದಭಾಷ್ಪವಿತ್ತು... ಮಾಲ್ಯೂಶ್ ನಿಧಾನವಾಗಿ ಕಣ್ಣು ತೆರೆದ....... ಆಶ್ಚರ್ಯದಿಂದ ಸುತ್ತಲೂ ನೋಡಿದ.... ಇಷ್ಟೊಂದು ಜನರು ಇಲ್ಲೇಕೆ ಸೇರಿದ್ದಾರೆಂದು ಅವನಿಗೆ ತಿಳಿಯಲಿಲ್ಲ. ಅವನು ತಾಯಿಯನ್ನು ನೋಡಿದ. ಅವಳ ಕಣ್ಣುಗಳಲ್ಲಿ ಖುಷಿ ಇತ್ತು.

ಮಾಲ್ಯೂಶ್ ಎದ್ದು ಕುಳಿತ. “ಅಳಬೇಡ ಅಮ್ಮಾ... ನಿನಗಾಗಿ ನನ್ನ ಮೇಟ್ರನ್ ಮನೆಯಿಂದ ಬಿಸಿ ಬಿಸಿ ರೊಟ್ಟಿಗಳನ್ನು ತಂದಿದ್ದೇನೆ.” ಕೈಯಲ್ಲಿದ್ದ ಪ್ಯಾಕೆಟನ್ನು ಮುಂದೆ ಚಾಚಿದ.

ತಾಯಿ ಅವನನ್ನು ಅಪ್ಪಿಕೊಂಡು ಮುದ್ದಾಡಿದಳು. ಬಿಕ್ಕಿ ಬಿಕ್ಕಿ ಅತ್ತಳು. ಅನ್ನಾ ಮುಂದೆ ಬಂದು ಅವನ ತಲೆಗೂದಲಿನ ಮೇಲೆ ಪ್ರೀತಿಯಿಂದ ಕೈ ಆಡಿಸಿದಳು. ಕೋಡಿ ಹರಿಯುತ್ತಿದ್ದ ಕಣ್ಣೀರನ್ನು ತುಂಬಾ ಕಷ್ಟದಿಂದಲೇ ತಡೆದುಕೊಂಡಳು.

ಅಲ್ಲಿ ನೆರೆದಿದ್ದವರ ಸ್ಥಿತಿ ಇದಕ್ಕಿಂತ ಬೇರೆಯಾಗಿರಲಿಲ್ಲ.

**ಸಂಗ್ರಹ : ಸದಸ್ಯರು, ಪಠ್ಯ ಪುಸ್ತಕ ಸಮಿತಿ**

(ಇಂಗ್ಲಿಷ್ ಸಾಹಿತ್ಯದಿಂದ ಅನುವಾದಿತ ಕೃತಿ)

## ಚಟುವಟಿಕೆಗಳು

### ಉತ್ತರಿಸಿರಿ

1. ಔತಣಕೂಟ ಆರಂಭವಾಗುವ ಮೊದಲು ಹುಡುಗ ಮಾಲ್ಯೂಶ್ ಅನ್ನಾಳ ಬಳಿ ಬಂದು ಏನೆಂದು ಕೇಳಿದ?
2. ಮನೆಯ ಕಡೆ ಹೊರಟಾಗ ಅವನ ಜೊತೆ ಹೊರಟವರು ಯಾರು?
3. ಹುಡುಗ ಓಡೋಡಿ ಬಂದು ಆತುರದಿಂದ ಹೇಳಿದ ವಿಷಯ ಏನಾಗಿತ್ತು?

### ಸಂಭಾಷಣೆ ಬರೆದು ಅಭಿನಯಿಸಿರಿ

ಮಾಲ್ಯೂಶ್ ಮತ್ತು ಅನ್ನಾಳೊಳಗೆ ನಡೆದಿರಬಹುದಾದ ಸಂಭಾಷಣೆ ಬರೆದು ಅಭಿನಯಿಸಿರಿ.

### ಶೀರ್ಷಿಕೆ ಬರೆಯಿರಿ

'ಬಿಸಿ ಬಿಸಿ ರೊಟ್ಟಿ' ಕಥೆಗೆ ಈ ಶೀರ್ಷಿಕೆಯು ಸೂಕ್ತವಾಗಿದೆಯೇ? ಯಾಕೆ? ಈ ಶೀರ್ಷಿಕೆಗೆ ಬದಲಾಗಿ ನೀವು ಸೂಚಿಸುವ ಕೆಲವು ಶೀರ್ಷಿಕೆಗಳನ್ನು ಬರೆಯಿರಿ.

### ಕಿರುಲೇಖನ ಬರೆಯಿರಿ

'ಬಿಸಿ ಬಿಸಿ ರೊಟ್ಟಿ' ಎಂಬ ಕಥೆಯು ಯುರೋಪಿನ ಶೀತಕಾಲದ ಭಯಾನಕ ಚಿತ್ರಣವನ್ನು ನಮ್ಮ ಮುಂದಿಡುತ್ತದೆ. ಭಾರತದಲ್ಲಿ ಚಳಿಗಾಲವು ಅಷ್ಟು ತೀವ್ರವಲ್ಲ. ಇಲ್ಲಿ ಆ ಕಾಲವನ್ನು ಶಿಶಿರಕಾಲ / ಮಾಗಿ ಕಾಲವೆಂದು ಕರೆಯುತ್ತೇವೆ. ಎಲೆ ಉದುರುವುದು, ಮಂಜು ಸುರಿಯುವುದು ಮುಂತಾದ ಪ್ರಾಕೃತಿಕ ಸೌಂದರ್ಯವನ್ನು ಅನಾವರಣಗೊಳಿಸುವ ಅನೇಕ ವಿಸ್ಮಯಗಳು ಈ ಕಾಲದಲ್ಲಿ ನಡೆಯುತ್ತವೆ. ನಿಮ್ಮ ಊರಿನ ಚಳಿಗಾಲದ ವಿಶೇಷತೆ, ಚಳಿಗಾಲದಲ್ಲಿ ಜನರ ದೈನಂದಿನ ಚಟುವಟಿಕೆ (ಕೃಷಿ, ಕೆಲಸ) ಇತ್ಯಾದಿಗಳನ್ನು ಒಳಗೊಂಡ ಕಿರುಲೇಖನ ತಯಾರಿಸಿರಿ.

## ಊಹಿಸಿ ಟಿಪ್ಪಣಿ ಬರೆಯಿರಿ

ನಿಮ್ಮ ಊರಿನಲ್ಲಿ ಅತಿಯಾದ ಚಳಿ (- ಡಿಗ್ರಿ) ಇದೆಯೆಂದು ಊಹಿಸಿರಿ. ಚಳಿಯಿಂದ ರಕ್ಷಣೆ ಪಡೆಯಲು ತೆಗೆದುಕೊಳ್ಳಬೇಕಾದ ಮುಂಜಾಗ್ರತೆಗಳನ್ನು, ಮಾಲ್ಯೂಶ್‌ನಂತೆ ಮಂಜುಗಡ್ಡೆಯಲ್ಲಿ ಸಿಲುಕಿದವರ ರಕ್ಷಣೆಯನ್ನು ಮಾಡಬೇಕಾದ ಸಂದರ್ಭಗಳಲ್ಲಿ ನಡೆಸುವ ಪ್ರಾಥಮಿಕ ಶುಶ್ರೂಷೆ ಇತ್ಯಾದಿಗಳ ಕುರಿತು ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ಟಿಪ್ಪಣಿ ಬರೆಯಿರಿ.

## ಅಭಿಪ್ರಾಯ ಟಿಪ್ಪಣಿ ಬರೆಯಿರಿ

“ಮಾಲ್ಯೂಶ್ ಎದ್ದು ಕುಳಿತ ...... ಅಳಬೇಡಮ್ಮಾ ಅಳಬೇಡ. ನಿನಗಾಗಿ ಮೇಟ್ರನ್ ಮನೆಯಿಂದ ಬಿಸಿ ಬಿಸಿ ರೊಟ್ಟಿ ತಂದಿದ್ದೇನೆ.” ಈ ಮಾತಿನ ಹಿನ್ನಲೆಯಲ್ಲಿ ತಾಯಿಗೆ ಮಕ್ಕಳಲ್ಲಿರುವ ಮಮತೆ, ಕಾಳಜಿ ಇತ್ಯಾದಿಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

## ಕಥೆ ಮುಂದುವರಿಸಿರಿ

............. ಅಷ್ಟರಲ್ಲಿ ಒಬ್ಬ ಹುಡುಗ ಓಡುತ್ತಾ ಬಂದ ಅವ ಮೇಲುಸಿರು ಬಿಡುತ್ತಿದ್ದ ಆ ಚಿಕ್ಕ ಪರ್ವತದ ಹಿಂದೆ ಹಿಮ ರಾಶಿಯ ಬಳಿ ಒಂದು ನಾಯಿ, ಒಂದೇ ಸಮನೆ ಬೊಗಳುತ್ತಿದೆ ......... ಎಂದು ಆತುರದಿಂದ ಹೇಳಿದ ಹುಡುಗನು ಈ ನಾಯಿಯನ್ನು ಗಮನಿಸದೇ ಇರುತ್ತಿದ್ದರೆ ......... ಕಥೆಯನ್ನು ಮುಂದುವರಿಸಿ ಬರೆಯಿರಿ.

## ವಾಕ್ಯದಲ್ಲಿ ಪ್ರಯೋಗಿಸಿರಿ

ಕೆಳಗಿನ ಪದಗಳನ್ನು ಉಪಯೋಗಿಸಿ ಸ್ವಂತವಾಕ್ಯಗಳನ್ನು ರಚಿಸಿರಿ.

- ಜಂಘಾಬಲ
- ನಿಭಾಯಿಸು
- ಬೆನ್ನುತಟ್ಟು
- ನಿರಾಸೆಯಾಗು

## ದ್ವಿರುಕ್ತಿ ಪದಗಳು

**ಬಿಸಿ ಬಿಸಿ**

ಈ ರೀತಿ ಪದಗಳು ಪುನರಾವರ್ತನೆಯಾಗಿ ಬರುವುದನ್ನು ದ್ವಿರುಕ್ತಿ ಪದಗಳು ಎಂದು ಕರೆಯುತ್ತಾರೆ. ದ್ವಿರುಕ್ತಿ ಪದಗಳನ್ನು ಪಾಠಭಾಗದಿಂದಲೂ ಇತರ ಮೂಲಗಳಿಂದಲೂ ಸಂಗ್ರಹಿಸಿ ಬರೆಯಿರಿ.

# ಗಗನದಿ ಸಾಗಿವೆ

ಗಗನದಿ ಸಾಗಿವೆ, ಬಾಗಿವೆ ಮೋಡ
ಹೋಗಿವೆ ನೀರನು ಸುರಿದು;
ಬರುವವು ಬಂದೇ ಬರುವವು ನೋಡ,
ತುಂಬಿಸಿ, ತುಳುಕಿಸಿ ಹರಿದು

ಇಳೆಗೂ ಬಾನಿಗು ಮಳೆ ಜೋಕಾಲಿ
ತೂಗಿದೆ, ತಂಗಿದೆ ಚೆಲುವು;
ಹಸುರೇ ಹಬ್ಬಿದೆ, ಹಸುರೇ ತಬ್ಬಿದೆ
ಹೆಸರಿಗು ಕಾಣದ ನೆಲವು

ನಸುಕೋ, ಸಂಜೆಯೋ, ಮಿಸುಕದು ಬೆಳಕು
ತಾಯಿಯ ಮೊಲೆಗಿದೆ ಕೂಸು;
ಇರುಳೇ ಹೊರಳಿತು, ಹಗಲೇ ಮರಳಿತು
ಚಿಗುರೆಲೆ ಹೂವಿಗೆ ಹಾಸು.

ಬೇಸಗೆ ಬಣಬಣ, ಚಳಿಗೋ ಒಣಒಣ
ಶ್ರಾವಣ ತಣ್ಣಗೆ ನಡುವೆ;
ಎಲ್ಲಿದೆ ಬೆಂಕಿ? ಎಲ್ಲಿದೆ ಬೆಳಕು?
ಬೀಸುವ ಗಾಳಿಗೆ ಬಿಡುವೆ?

ನೀರೇ ಹರಿದಿದೆ, ನೀರೇ ಬೆರೆದಿದೆ
ನೀರೇ ಕರೆದಿದೆ ಮೊರೆದು
ಯಾರೆ? ಎಂದರು, ನೀರೇ ಬರುವುದು
ಬೆನ್ನಿನ ಹಿಂದೆಯೇ ಸರಿದು

ಬೆಚ್ಚಗೆ ಒಳಗೆ, ಹಚ್ಚಗೆ ಹೊರಗೆ
ಹುಚ್ಚನು ಬಿಡಿಸಿದೆ ಮಳೆಯು;
ಎಚ್ಚರು ಎಚ್ಚರು ಎನ್ನುತ ಹರಿದಿದೆ.
ತುಂಬಿದ ಬಾಳಿನ ಹೊಳೆಯು

**ಚೆನ್ನವೀರ ಕಣವಿ**







## ಕವಿ ಪರಿಚಯ

### ಚೆನ್ನವೀರ ಕಣವಿ



ಕನ್ನಡ ಭಾಷೆಯ ಕವಿ ಮತ್ತು ಲೇಖಕ. ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಹೊಂಬಾಳ ಎಂಬಲ್ಲಿ 1928ರಲ್ಲಿ ಜನಿಸಿದರು. ಅನೇಕ ಕವನ ಸಂಕಲನಗಳನ್ನು ರಚಿಸಿದರು. 'ಜೀವಧ್ವನಿ', 'ಕಾವ್ಯಾಕ್ಷಿ', 'ಭಾವಜೀವಿ', 'ಮಧುಚಂದ್ರ', 'ನೆಲ ಮುಗಿಲು' ಎಂಬಿವುಗಳು ಇವರ ಕೃತಿಗಳಲ್ಲಿ ಗಮನಾರ್ಹವಾದುದು. ಇವರು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಅಲ್ಲದೆ ರಾಜ್ಯೋತ್ಸವ ಹಾಗೂ ಪಂಪ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸೌಜನ್ಯದ ಕವಿ, ಸಮನ್ವಯದ ಕವಿ ಎಂದೆನಿಸಿಕೊಂಡ ಇವರು 2022 ಫೆಬ್ರವರಿ 16 ರಂದು ನಿಧನ ಹೊಂದಿದರು.

## ಚಟುವಟಿಕೆಗಳು

### ರಾಗವಾಗಿ ಹಾಡಿರಿ

ಈ ಪದ್ಯವನ್ನು ರಾಗವಾಗಿ ಹಾಡಿರಿ

### ಆಶಯ ಬರೆಯಿರಿ

'ಗಗನದಿ ಸಾಗಿವೆ' ಪದ್ಯವನ್ನು ಓದಿ ಅದರ ಆಶಯವನ್ನು ಬರೆಯಿರಿ.

### ಪ್ರಬಂಧ ಬರೆಯಿರಿ

ಬೆಚ್ಚಗೆ ಒಳಗೆ ಹಚ್ಚಗೆ ಹೊರಗೆ
ಹುಚ್ಚನು ಬಿಡಿಸಿದೆ ಮಳೆಯು
ಎಚ್ಚರು ಎಚ್ಚರು ಎನ್ನುತ ಹರಿದಿದೆ
.........................................

ಈ ಸಾಲುಗಳಲ್ಲಿ ಮಳೆಯ ಅನಾಹುತಗಳು ಮತ್ತು ಮಳೆಯಿಂದುಂಟಾಗುವ ದುರಂತಗಳ ಬಗ್ಗೆ ಎಚ್ಚರಿಕೆಯನ್ನು ನೀಡಲಾಗಿದೆ. ಭೀಕರ ಮಳೆಯ ಸಂದರ್ಭಗಳಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಪ್ರಬಂಧ ಬರೆಯಿರಿ.

## ಆಸ್ವಾದನ ಟಿಪ್ಪಣಿ ಬರೆಯಿರಿ

ಇಳೆಗೂ ಬಾನಿಗೂ ಮಳೆ ಜೋಕಾಲಿ
ತೂಗಿದೆ, ತಂಗಿದೆ ಚೆಲುವು
ಹಸುರೇ ಹಬ್ಬಿದೆ, ಹಸುರೇ ತಬ್ಬಿದೆ
ಹೆಸರಿಗು ಕಾಣದ ನೆಲವು

ಮಳೆಗಾಲದ ಮಳೆಯ ಸೌಂದರ್ಯ, ಪ್ರಕೃತಿಯ ರಮಣೀಯತೆಯೇ ಮೊದಲಾದ ಅಂಶಗಳನ್ನು ಗುರುತಿಸಿ ಆಸ್ವಾದನ ಟಿಪ್ಪಣಿ ಬರೆಯಿರಿ.

## ಹೋಲಿಕಾ ಟಿಪ್ಪಣಿ ಬರೆಯಿರಿ

**ಒಂದು ಸುವ್ವಿ ಹಾಡು**

ಮಳೆ ಬಿದ್ದ ನೆಲದಾಗ ಬದುಕೆಲ್ಲ ಅರಳ್ಯಾವ
ದನಿಯೆತ್ತಿ ಹಾಡಕ ನನಗೆಣತಿ | ಸುವ್ವಿಽಽ
ದನಿಯೆತ್ತಿ ಹಾಡಾಕ ಕೋಗಿಲ ಕಂಠಿಲ್ಲ
ಹಾದಿಯ ತುಂಬಾ ಬರಿಕೆಸರು | ಸುವ್ವಿಽಽ
ಹೊಸ ನೀರು ಹರಿದಾವ ಕೆಸರೆಲ್ಲಾ ಕಳೆದಾವ
ಹೊಸ ಹಾಡು ನೀನು ಹಾಡುವ | ಸುವ್ವಿಽಽ
ಆಲದ ಮುದಿಮರ ಮುಂದು ಬಿದ್ದೋದರೂ
ಬೇರ ಚಾಚೈತಿ ಮೈತುಂಬ | ಸುವ್ವಿಽಽ
ಹಳೆ ಬೇರ ಕಿತ್ತೋಣ ಹೊಸ ಚಿಗುರ ಬಿತ್ತೋಣ
ಹಸಿರು ತುಂಬೋಣ ಮನದಾಗ | ಸುವ್ವಿಽಽ

'ಗಗನದಿ ಸಾಗಿವೆ' ಪದ್ಯ ಮತ್ತು 'ಸುವ್ವಿ ಹಾಡು'ಗಳನ್ನು ಓದಿ ಹೋಲಿಸಿ, ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಗುರುತಿಸಿ ಹೋಲಿಕಾ ಟಿಪ್ಪಣಿ ಬರೆಯಿರಿ.

## ಪದ್ಯ ಪೂರ್ತಿಗೊಳಿಸಿರಿ

ಮಳೆಗೆ ಸಂಬಂಧಿಸಿದ ಈ ಕೆಳಗಿನ ಪದ್ಯಕ್ಕೆ ಸಾಲುಗಳನ್ನು ಸೇರಿಸಿ ಪದ್ಯವನ್ನು ಪೂರ್ತಿಗೊಳಿಸಿರಿ.

ಹನಿಹನಿಯಾಗಿ ಸುರಿದಿವೆ ನೋಡಿ

ಕಣಕಣವಾಗಿ ನೀರಿನ ಕೋಡಿ

…………………………………..

…………………………………..

## ಸಮಾನಾರ್ಥ ಬರೆಯಿರಿ

- ಗಗನ - ಆಕಾಶ, ಬಾನು
- ಗಾಳಿ - ………………………………
- ಭೂಮಿ - ………………………………
- ನೀರು - ………………………………

## ಪ್ರಾಸಪದ ಬರೆಯಿರಿ

ಮಾದರಿ : ನೀರೇ ಹರಿದಿದೆ
ನೀರೇ ಕರೆದಿದೆ

………………………………

………………………………

ಪದ್ಯದ ಆರಂಭದ ಮೊದಲ ಎರಡು ಸ್ವರಗಳ ನಡುವೆ ಬರುವ ವ್ಯಂಜನಾಕ್ಷರಗಳು ಪ್ರಾಸಾಕ್ಷರಗಳು ಎನಿಸುತ್ತವೆ. ಪ್ರಾಸಾಕ್ಷರಗಳು ಪದ್ಯದ ನಾಲ್ಕು ಅಥವಾ ಆರೂ ಪಾದಗಳಲ್ಲಿ ಒಂದೇ ಇರಬೇಕು. ಇದನ್ನು ಆದಿ ಪ್ರಾಸ ಎನ್ನುತ್ತೇವೆ.

ಪದ್ಯದ ಪ್ರತಿ ಪಾದಗಳ ಕೊನೆಯಲ್ಲಿ ಬರುವ ವ್ಯಂಜನವು ಒಂದೇ ಆಗಿದ್ದರೆ, ಅದನ್ನು ಅಂತ್ಯಪ್ರಾಸ ಎನ್ನುತ್ತಾರೆ. ಅಂತ್ಯ ಪ್ರಾಸದ ಕೊನೆಯ ಸ್ವರವು ಒಂದೇ ಆಗಿರುತ್ತದೆ. 'ಗಗನದಿ ಸಾಗಿವೆ' ಪದ್ಯದಲ್ಲಿ ಬರುವ ಆದಿಪ್ರಾಸ ಪದಗಳು ಮತ್ತು ಅಂತ್ಯಪ್ರಾಸ ಪದಗಳನ್ನು ಬರೆಯಿರಿ.

# ಬೇಸಿಗೆಯ ತಾಪಕ್ಕೆ
# ಬಿಸಿಯೇರುತ್ತಿದೆ ಭೂಮಿ

ಇಂದು ನಾವು ದಿನ ಬೆಳಗಾದರೆ ಎಲ್ಲಾ ಮಾಧ್ಯಮಗಳಲ್ಲಿ ನೋಡುತ್ತಿರುವ, ಓದುತ್ತಿರುವ ವಿಷಯ ಭೂಮಿಯ ತಾಪಮಾನದ ವೈಪರೀತ್ಯಗಳು, ಕಷ್ಟನಷ್ಟಗಳು ಇತ್ಯಾದಿ. ಕೆಲವು ಪತ್ರಿಕೆಗಳಂತೂ ಭವಿಷ್ಯದಲ್ಲಿ ಭೂಮಿಯ ಮೇಲೆ ಅತಿ ದೊಡ್ಡ ಪ್ರಳಯವಾಗಲಿದೆ ಎಂಬುದನ್ನು ವೈಭವೀಕರಿಸಿ ಬರೆಯುತ್ತಿವೆ. ಹಾಗಾದರೆ ಏನೀ ತಾಪಮಾನ? ಏಕೆ ಹೀಗಾಗುತ್ತಿದೆ? ಮೇಲ್ನೋಟಕ್ಕೆ ರಮಣೀಯವಾಗಿರುವ ವಸುಂಧರೆ ಒಡಲೊಳಗೆ ಏಕೆ ಹಬೆಯಾಡುತ್ತಿದ್ದಾಳೆ? ಎಂಬ ಪ್ರಶ್ನೆಗಳು ಬೆಳೆಯುತ್ತಾ ಹೋಗುತ್ತದೆ. ಜಾಗತಿಕ ತಾಪಮಾನವು ಖಂಡಿತವಾಗಿಯೂ ಭೂಮಿಯು ಎದುರಿಸುತ್ತಿರುವ ಏಕೈಕ ದೊಡ್ಡ ಪರಿಸರದ ಸಮಸ್ಯೆಯಾಗಿದೆ, ಸವಾಲಾಗಿದೆ.









ನಮ್ಮ ಭೂಮಿಯು ಮುಕ್ಕಾಲು ಭಾಗ ನೀರಿನಿಂದ ಕೂಡಿದ್ದು, ಕಾಲು ಭಾಗ ಮಾತ್ರ ಭೂಮಿಯಿಂದ ಕೂಡಿದೆ. ಭೂಮಿ ಎಂಬ ಈ ಬೆರಗು ಹುಟ್ಟಿದ್ದು ಸುಮಾರು 450 ಕೋಟಿ ವರ್ಷಗಳ ಹಿಂದೆ. ಬ್ರಹ್ಮಾಂಡದಲ್ಲೆಲ್ಲಾ 'ನೆಬ್ಯುಲ' ಎಂಬ ಅಗ್ನಿಗೋಳ ಕೊತಕೊತನೆ ಕುದಿದು, ಮಹಾ ಸ್ಫೋಟವಾದಾಗ (ಬಿಗ್ ಬ್ಯಾಂಗ್) ಸಿಡಿದ ಬೆಂಕಿಯ ತುಂಡುಗಳಲ್ಲಿ ಒಂದು ದೊಡ್ಡ ತುಂಡು ಸೂರ್ಯನಾಗಿ, ಚಿಕ್ಕ ತುಂಡು ಭೂಮಿಯಾಗಿ, ತನ್ನ ಸುತ್ತ ತಾನೇ ತಿರುಗಿ ತಣ್ಣಗಾಯಿತು. ಈ ಭೂಮಿ ಹುಟ್ಟಿದ್ದು ಹೀಗೆ... ಎಂದು ಹಿರಿಯರು ಹೇಳುವುದನ್ನು ಕೇಳಿದ್ದೇವೆ.

ಪೃಥ್ವಿಯ ಹೊರಮೈ ಇಂದು ತಣಿದಿದೆಯಾದರೂ, ಅದರ ಆಂತರಿಕ ಗರ್ಭದಲ್ಲಿ ಇನ್ನೂ ಶಾಖವಿದೆ, ಅಶಾಂತಿ ಇದೆ, ಅಗಾಧ ಒತ್ತಡವಿದೆ. ಅದು ಕುದಿಯುವ ನೀರಿನ ಉಷ್ಣತೆಗಿಂತ 100 ಪಟ್ಟು ಜಾಸ್ತಿ ಉಷ್ಣತೆಯನ್ನು ಹೊಂದಿದೆ. ನಮ್ಮ ಭೂಮಿಯ ಮೇಲೆ ಕಣ್ಣಿಗೆ ಕಾಣದ ಬೇರೆ ಬೇರೆ ಅನಿಲ ಪದರಗಳಿವೆ. ಇವುಗಳು ನಮ್ಮ ಭೂಮಿಯ ಹವಾಮಾನದ ಮೇಲೆ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಸುಮಾರು 50 ವರ್ಷಗಳಿಂದ ಈಚೆ ನಮ್ಮ ತಂತ್ರಜ್ಞಾನವು ಶರವೇಗದಲ್ಲಿ ಮುಂದುವರಿಯುತ್ತಿದೆ. ಇದು ಒಳ್ಳೆಯದೇ.. ಆದರೆ ಇದರಿಂದ ನಮಗೆ ಗೊತ್ತಾಗದ ಹಾಗೆ, ನಮ್ಮ ಪ್ರಕೃತಿಗೆ, ವಾತಾವರಣಕ್ಕೆ ಹಾನಿ ಉಂಟಾಗುತಿದೆ ಎಂಬುದಂತೂ ಸತ್ಯ. ನಮ್ಮ ವಾತಾವರಣದಲ್ಲಿ ನೈಸರ್ಗಿಕವಾಗಿ ಹಸಿರು ಮನೆಯ (ಗ್ರೀನ್ ಹೌಸ್) ವಾತಾವರಣದಂತಹ ಪದರವಿದೆ. ಇದು ಭೂಮಿಯ ಉಷ್ಣತೆಯಲ್ಲಿ ಏರುಪೇರಾಗದೆ ಸಮತೋಲನದಲ್ಲಿರುವಂತೆ ಕಾಪಾಡಿಕೊಂಡು ಬಂದಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ವಾಹನಗಳ ದಟ್ಟ ಹೊಗೆ, ಕಾರ್ಖಾನೆಗಳ ವಿಷಾನಿಲಗಳಿಂದ ಅಧಿಕ ಪ್ರಮಾಣದ ಇಂಗಾಲದ ಡೈಓಕ್ಸೈಡ್ ವಾತಾವರಣಕ್ಕೆ ಬಿಡುಗಡೆಯಾಗಿ ಭೂಮಿಯ ಮೇಲಿನ ಉಷ್ಣತೆಯಲ್ಲಿ ಏರಿಕೆ ಕಂಡು ಬಂದಿದೆ.

ನಮ್ಮ ಭೂಮಿಯ ರಕ್ಷಾ ಕವಚವೆಂದರೆ ಓಜೋನ್ ಪದರ. ಈ ಪದರವು ಭೂಮಿಗೆ ಸೂರ್ಯರಶ್ಮಿಯ ನೇರಳಾತೀತ ಕಿರಣ (ಆಲ್ಟ್ರಾ ವಯಲೆಟ್ ಕಿರಣ) ತಲುಪದಂತೆ

ತಡೆಯುತ್ತದೆ. ಆದರೆ ಈಗ ಓಝೋನ್ ಪದರದಲ್ಲಿ ಸಣ್ಣ ಸಣ್ಣ ತೂತುಗಳಾಗಿವೆ. ಇದು ಕೂಡ ನಮ್ಮ ತಾಪಮಾನ ಏರಲು ಸ್ವಲ್ಪಮಟ್ಟಿಗೆ ಕಾರಣವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಅರಣ್ಯ ನಾಶ ಮತ್ತು ಪಳೆಯುಳಿಕೆ ಇಂಧನಗಳ ಮಿತಿಮೀರಿದ ಬಳಕೆಯಿಂದ ವಾಯು ಮಾಲಿನ್ಯ ಹೆಚ್ಚಾಗಿದೆ. ಪ್ಲಾಸ್ಟಿಕ್ ಸುಡುವುದರಿಂದ ಹಲವು ಬಗೆಯ ವಿಷಾನಿಲಗಳು ವಾತಾವರಣಕ್ಕೆ ಬಿಡುಗಡೆಯಾಗುತ್ತವೆ. ಈ ವಿಷಾನಿಲಗಳು ನೈಟ್ರೋಜನ್, ಓಕ್ಸಿಜನ್‌ಗಳ ಜೊತೆಗೆ ದ್ಯುತಿ ರಾಸಾಯನಿಕ ಕ್ರಿಯೆಗೆ ಒಳಗಾಗಿ 'ಸ್ಮೋಗ್'ನ್ನು ಉತ್ಪತ್ತಿ ಮಾಡುತ್ತದೆ. ಇದು ಆಮ್ಲ ಮಳೆಯ ರೂಪದಲ್ಲಿ ಹರಿಯುತ್ತದೆ. ಇದರಿಂದಾಗಿ ಭೂಮಿಯು ತಂಪಾಗುವ ಬದಲು ಬಿಸಿಯೇರುತ್ತಿದೆ.

ಈ ಎಲ್ಲಾ ಬಿಸಿ ಏರುವಿಕೆಯಿಂದಾಗಿ ಭೂಮಿಯ ತಾಪಮಾನ ಇನ್ನೂ ಐದು ಡಿಗ್ರಿ ಸೆಂಟಿಗ್ರೇಡ್ ಗಳಷ್ಟು ಏರಿದಲ್ಲಿ ಅದು ಧ್ರುವ ಪ್ರದೇಶಗಳ ಮಂಜುಗಡ್ಡೆ ಕರಗುವುದಕ್ಕೆ ಕಾರಣವಾಗಬಹುದು. ಇವುಗಳು ಕರಗಿ ನೀರಾಗಿ ಸಮುದ್ರ ಸೇರಿ ಸಮುದ್ರಮಟ್ಟ ಮೇಲೇರಿ, ತ್ಸುನಾಮಿ, ಚಂಡಮಾರುತ ಇತ್ಯಾದಿಗಳು ಸಂಭವಿಸಬಹುದು. ಆಗ ತಗ್ಗು ಪ್ರದೇಶಗಳು ಮುಳುಗಡೆಯಾಗುವ ಸಾಧ್ಯತೆ ಇದೆ ಎಂದು ವಿಜ್ಞಾನಿಗಳು ಎಚ್ಚರಿಕೆಯ ಗಂಟೆ ಬಾರಿಸಿದ್ದಾರೆ. ನಾವು ಇನ್ನಾದರೂ ಎಚ್ಚೆತ್ತುಕೊಳ್ಳದಿದ್ದರೆ ಹೆಚ್ಚು ಗಂಡಾಂತರವನ್ನು ಎದುರಿಸಬೇಕಾಗುತ್ತದೆ. ಅದಕ್ಕಾಗಿ ನಮ್ಮ ಕೈಲಾದ ಪ್ರಯತ್ನ ಮಾಡೋಣ. ಜಾಗತಿಕ ತಾಪಮಾನವನ್ನು ಹತೋಟಿಯಲ್ಲಿಟ್ಟುಕೊಳ್ಳಲು ನಮ್ಮೆಲ್ಲರ ಸಹಾಯ ಅಗತ್ಯ. ಆದಷ್ಟು ವಾಹನಗಳ ಬಳಕೆಯನ್ನು ಕಡಿಮೆ ಮಾಡೋಣ. ನಡಿಗೆ ಆರೋಗ್ಯಕ್ಕೆ ಉತ್ತಮ ಎನ್ನುವುದನ್ನು ನೆನಪಿನಲ್ಲಿಟ್ಟುಕೊಂಡು ಹತ್ತಿರದ ಸ್ಥಳಗಳಿಗೆ ಕಾಲು ನಡಿಗೆಯಲ್ಲಿ ಹೋಗೋಣ. ಸಸ್ಯಗಳು ಆಮ್ಲಜನಕದ ಮೂಲವಾಗಿದೆ. ಹಾಗಾಗಿ ಪರಿಸರ ಸಮತೋಲನ ಕಾಪಾಡಲು ಸಾಧ್ಯವಾದಷ್ಟು ಕೈತೋಟಗಳನ್ನು ಬೆಳೆಸೋಣ. ಹವಾನಿಯಂತ್ರಣ ಮತ್ತು ರೆಫ್ರಿಜರೇಟರ್‌ಗಳ ಬಳಕೆಯನ್ನು ಕಡಿಮೆ ಮಾಡೋಣ.

**ಸುಧಾ ನಾಗೇಶ್**

(ಹೊಂಬೆಳಕು - ಚಿಂತನಾ ಬರಹಗಳ ಸಂಗ್ರಹ)

## ಲೇಖಕರ ಪರಿಚಯ



ಸುಧಾ ನಾಗೇಶ ಅವರು ಮಂಗಳೂರಿನ ಕದ್ರಿಯವರು. ಅವರು ಜನಪ್ರಿಯ ಲೇಖಕಿ ಹಾಗೂ ಕವಯಿತ್ರಿ. ಅಧ್ಯಾಪಕಿಯಾಗಿರುವ ಇವರು ಕನ್ನಡ ಭಾಷೆಯಲ್ಲಿ ಕವನ ಸಂಕಲನಗಳನ್ನಲ್ಲದೆ, ಲೇಖನ, ಹಾಸ್ಯ ಲೇಖನ, ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಪುಸ್ತಕಗಳನ್ನು ಕೂಡಾ ರಚಿಸಿ ಪ್ರಕಟಿಸಿದ್ದಾರೆ. ಕನ್ನಡ ಭಾಷೆಯಷ್ಟೇ ಸುಂದರವಾಗಿ ತುಳು ಭಾಷೆಯಲ್ಲಿ ಕೂಡಾ ಬರೆಯಬಲ್ಲ ಲೇಖಕಿ ಇವರು. ಇವರ ಸಾಧನೆಗಾಗಿ ಸಹಜವಾಗಿಯೇ ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

## ಚಟುವಟಿಕೆಗಳು

### ಉತ್ತರಿಸಿರಿ

1. ಈ ಲೇಖನದ ಪ್ರಕಾರ ಭೂಮಿಯು ಎದುರಿಸುತ್ತಿರುವ ಏಕೈಕ ಸಮಸ್ಯೆ ಯಾವುದು?
2. ಹಿರಿಯರು ಹೇಳುವ ಪ್ರಕಾರ ಈ ಭೂಮಿ ಹೇಗೆ ಉಂಟಾಯಿತು?
3. ಭೂಮಿಯ ಉಷ್ಣತೆಯಲ್ಲಿ ಏರುಪೇರಾದಾಗ ಸಮತೋಲನದಲ್ಲಿ ಇರುವಂತೆ ಕಾಪಾಡಿಕೊಂಡು ಬರುವುದು ಯಾವುದು?
4. ಓಜೋನ್ ಪದರ ನಮ್ಮ ಭೂಮಿಯ ರಕ್ಷಾ ಕವಚವಾಗಿದೆ ಹೇಗೆ?
5. ಪ್ಲಾಸ್ಟಿಕ್ ಸುಡುವುದರಿಂದ ಭೂಮಿ ಹೇಗೆ ಬಿಸಿಯೇರುತ್ತದೆ?

### ಕಿರುಭಾಷಣ ತಯಾರಿಸಿರಿ

‘ಜಾಗತಿಕ ತಾಪಮಾನವನ್ನು ನಿಯಂತ್ರಿಸುವುದು ನಮ್ಮೆಲ್ಲರ ಕರ್ತವ್ಯ’ ಎಂಬ ವಿಷಯದಲ್ಲಿ ‘ವಿಶ್ವ ಓಜೋನ್ ದಿನ’ದಂದು ಭಾಷಣ ಮಾಡಲು ಪಾಠಭಾಗದ ಆಧಾರದಲ್ಲಿ ಭಾಷಣವೊಂದನ್ನು ತಯಾರಿಸಿರಿ.

## ದಿನಚರಿ ಬರೆಯಿರಿ

ವಿಶ್ವ ಪರಿಸರ ದಿನವಾದ ಜೂನ್ 5ರಂದು ನಿಮಗೆ ಶಾಲೆಯಿಂದ ಸಿಕ್ಕಿದ ಗಿಡವನ್ನು ನೆಟ್ಟು ಪೋಷಿಸಿದ ವಿಚಾರವನ್ನು ನಿಮ್ಮ ದಿನಚರಿಯಲ್ಲಿ ದಾಖಲಿಸಿರಿ.

## ಭಿತ್ತಿಪತ್ರ ತಯಾರಿಸಿರಿ

ಶಾಲಾ ಪರಿಸರ ಮಾಲಿನ್ಯಮುಕ್ತವಾಗಿಸುವಂತೆ ಕರೆನೀಡುವ ಒಂದು ಭಿತ್ತಿಪತ್ರ ತಯಾರಿಸಿರಿ.

## ಅನ್ಯದೇಶಿಯ ಪದಗಳು

- ನೆಬ್ಯೂಲ
- ಬಿಗ್ ಬೇಂಗ್

ಈ ರೀತಿಯ ಅನ್ಯಭಾಷೆಗಳಿಂದ ತೆಗೆದುಕೊಂಡ ಪದಗಳನ್ನು ಅನ್ಯದೇಶಿಯ ಪದಗಳು ಎನ್ನುತ್ತಾರೆ. ಪಾಠದಲ್ಲಿರುವ ಮತ್ತು ನಿಮಗೆ ತಿಳಿದಿರುವ ಅನ್ಯದೇಶಿಯ ಪದಗಳನ್ನು ಸಂಗ್ರಹಿಸಿ ಅದರ ಅರ್ಥವನ್ನು ಬರೆಯಿರಿ.

# ಅಜ್ಜಿಮನೆ

ಏಪ್ರಿಲ್, ಮೇ ಅಂದ ತಕ್ಷಣ ನೆನಪಾಗುವುದು, ಶಾಲೆಗೆ ಎರಡು ತಿಂಗಳ ರಜೆ.... ಪಾಠ ಓದುವ ಬರೆಯುವ ಯೋಚನೆ ಇಲ್ಲ....

ಹಾಗೆ ನೆನಪಿನಂಗಳಕ್ಕೆ ಜಾರಿದರೆ...

ಶಾಲೆಯಲ್ಲಿ ಆ ವರ್ಷದ ಕೊನೆಯ ಪರೀಕ್ಷೆ ಮುಗಿಸಿ ಒಂದು ನಿರಾಳ ಭಾವದೊಂದಿಗೆ ಮನೆ ತಲುಪಿದರೆ...ಪರೀಕ್ಷೆ ಮುಗಿದ ಖುಷಿಯ ಜೊತೆ... ಅಜ್ಜಿಮನೆಗೆ ಹೋಗುವ ಸಂಭ್ರಮ... ಕನಸು.... ಇತ್ಯಾದಿ...

ಪರೀಕ್ಷೆ ಮುಗಿಸಿ ಬಂದವರೇ. "ಅಮ್ಮಾ, ಯಾವತ್ತೂ ಅಜ್ಜಿಮನೆಗೆ ಹೋಗುವುದು?" ಅನ್ನೋ ಪ್ರಶ್ನೆ ಶುರುವಾಗುತ್ತಿತ್ತು. ಪ್ರತೀ ವರ್ಷ ಅಜ್ಜಿಮನೆಯಲ್ಲಿ ಒಂದೆರಡು ಕಾರ್ಯಕ್ರಮಗಳು ಇರುತ್ತಿತ್ತು... ಅದಕ್ಕೆ ನಾವೆಲ್ಲರೂ ಹೋಗುತ್ತಿದ್ದೆವು... ಒಂದು ಕಾರ್ಯಕ್ರಮ ಏಪ್ರಿಲ್, ಮೇ ತಿಂಗಳಲ್ಲೇ ಇರುತ್ತಿತ್ತು... ಆ ಕಾರ್ಯಕ್ರಮಕ್ಕೆ ಅಮ್ಮನ ಜೊತೆ ಅಜ್ಜಿ ಮನೆಗೆ ಹೋಗುವ ಸಂಭ್ರಮ.

ಆ ಕಾಲದಲ್ಲಿ, ನಮ್ಮ ಮನೆಯಿಂದ ಅಜ್ಜಿ ಮನೆಗೆ ಹೋಗುವುದೆಂದರೆ ದೊಡ್ಡ ಸಾಹಸವೇ ಸರಿ... ಈಗ ಆರಾಮವಾಗಿ ಹೋಗಿ ಬರಬಹುದು.... ಅಷ್ಟೆಲ್ಲಾ ಕಷ್ಟಪಟ್ಟು ಹೋಗಿ, ಅಲ್ಲಿ 2 ಮೈಲಿ ನಡೆದು ಅಜ್ಜಿಮನೆ ತಲುಪಿ ನಮ್ಮೆಲ್ಲಾ ಸಂಬಂಧಿಕರು ಸಿಕ್ಕಾಗ ಅಲ್ಲಿಯವರೆಗೆ ಹರ ಸಾಹಸ ಪಟ್ಟು ಹೋದ ಸುಸ್ತಿನ ನೆನಪೇ ಇರುತ್ತಿರಲಿಲ್ಲ.

ಅಜ್ಜಿಮನೆ ತುಂಬಾ ಹಳೇ ಕಾಲದ ದೊಡ್ಡದಾದ 2 ಮಹಡಿ ಮನೆ...ಎದುರಿಗೆ ದೊಡ್ಡ ಅಂಗಳ, ಅಂಗಳ ಇಳಿದು ಕೆಳಗಡೆ ಬಂದರೆ ತೋಡು...ಮಳೆಗಾಲದಲ್ಲಿ ಆ ತೋಡು ತುಂಬಿ ಹರಿಯುತ್ತಿತ್ತು... ತೋಟ, ಗದ್ದೆ, ಸುಂದರವಾದ ಪರಿಸರದ ನಡುವೆ ಇತ್ತು ನಮ್ಮ ಅಜ್ಜಿಮನೆ.

ಅಜ್ಜಿಗೆ 30ಜನ ಮೊಮ್ಮಕ್ಕಳು... ರಜಾ ಸಮಯದಲ್ಲಿ ಅಲ್ಲಿ ವಿಶೇಷತೆ ಇದ್ದರೆ ಹೆಚ್ಚುಕಡಿಮೆ

30 ಜನ ಮೊಮ್ಮಕ್ಕಳ ಜೊತೆ, ದೊಡ್ಡ ಮೊಮ್ಮಕ್ಕಳಿಗೆ ಮದುವೆ ಆಗಿ ಅವರ ಮಕ್ಕಳು ಎಲ್ಲರೂ ಅಲ್ಲಿ ಸೇರುತ್ತಿದ್ದೆವು...

ಕಾರ್ಯಕ್ರಮಕ್ಕೆ ಹೋದ ನಾವೆಲ್ಲಾ ಈಗಿನಂತೆ ಅಂದಂದೇ ಮನೆಗೆ ಹಿಂತಿರುಗುತ್ತಿರಲಿಲ್ಲ. ಐದಾರು ದಿವಸ ಅಜ್ಜಿ ಹಾಗೂ ಅತ್ತೆಯ ಕೈ ರುಚಿ ಸವಿದೆ ನಮ್ಮ ಮನೆಯ ದಾರಿ ಹಿಡಿಯುತ್ತಿದ್ದದ್ದು. ಆ ಐದಾರು ದಿವಸ ಕಡಿಮೆ ಎಂದರೂ ಹತ್ತರಿಂದ ಹದಿನೈದು ಮೊಮ್ಮಕ್ಕಳು ಅಲ್ಲಿ ಇರುತ್ತಿದ್ದೆವು...

ನಮ್ಮ ನಮ್ಮ ವಯಸ್ಸಿಗೆ ತಕ್ಕಂತೆ ಗುಂಪು ಗುಂಪಾಗಿ ಆಟ ಆಡುತ್ತಿದ್ದೆವು. ನನಗಿಂತ ಸ್ವಲ್ಪ ದೊಡ್ಡವರು ಅಂದರೆ ನನ್ನ ಅಕ್ಕ ಹಾಗೂ ಅವಳ ವಯಸ್ಸಿನವರದ್ದು ಒಂದು ಗುಂಪು.... ಅವರು ಐದೂ ಜನ ಎಲ್ಲಿ ಹೋದರೂ, ಎಲ್ಲಿ ಬಂದರು ಜೊತೆಗೆ ಇರುತ್ತಿದ್ದರು. ಕೆಲವು ಆಟಗಳಿಗೆ ಮಾತ್ರ ನಮ್ಮನ್ನೆಲ್ಲಾ ಸೇರಿಸಿಕೊಳ್ಳುತ್ತಿದ್ದರು.

ನಮ್ಮ ಗುಂಪೂ ಏನು ಚಿಕ್ಕದಿರಲಿಲ್ಲ.. ಅದರಲ್ಲಿ ನಾವು ಹತ್ತು ಹನ್ನೆರಡು ಜನ ಜೊತೆಯಾಗಿ ಇರುತ್ತಿದ್ದೆವು...



ನಾವೆಲ್ಲಾ ಸೇರಿ ಕ್ರಿಕೆಟ್, ಲಗೋರಿ, ಹುಲಿದನ ಆಟ, ಕಂಬಾಟ, ಕಲ್ಲಾಟ, ಚೆಂಡಾಟ, ಚೆನ್ನೆಮಣೆ ಹೀಗೆ ಹತ್ತು ಹಲವು ಆಟಗಳನ್ನು ಆಡುತ್ತಿದ್ದೆವು....

.....ಅಲ್ಲಿರುವ ಐದಾರು ದಿವಸಗಳು, ಹೀಗೆ ನಾವೆಲ್ಲರೂ ಯಾವುದಾದರೊಂದು, ಆಟದಲ್ಲಿ ಮಗ್ನರಾಗಿರುವಾಗ ಅಜ್ಜಿಯ ಕರೆ ಬರುತ್ತದೆ... "ಮಾವಿನ ಹಣ್ಣು ಗುಡ್ಡದಲ್ಲಿ ಬಿದ್ದಿರುತ್ತದೆ, ಹೋಗಿ ಹೆಕ್ಕಿಕೊಂಡು ಬನ್ನಿ" ಎಂಬ ಅಪ್ಪಣೆಯು ಆ ಕರೆಯ ಜೊತೆಗೆ ಸೇರಿರುತ್ತದೆ. ಆಟ ಬಿಟ್ಟು ಹೋಗಲು ಮನಸ್ಸಿಲ್ಲದಿದ್ದರೂ... ಅಜ್ಜಿ ಜೋರು ಮಾಡುತ್ತಾರೆಂಬ ಭಯಕ್ಕೆ ನಮ್ಮ ಪಟಾಲಾಮ್ ಮಾವಿನ ಹಣ್ಣು ಹೆಕ್ಕಲು ಮನೆಯ ಹಿಂದಿನ ಗುಡ್ಡಕ್ಕೆ ಹೋಗುತ್ತಿದ್ದೆವು....

ಅಲ್ಲಿ ಹೆಕ್ಕಿದರೂ ಮುಗಿಯದಷ್ಟು ಕಾಡು ಮಾವಿನ ಹಣ್ಣು ಬಿದ್ದಿರುತ್ತಿತ್ತು. ಅದನ್ನೆಲ್ಲಾ ಹೆಕ್ಕಿ ತಂದುಕೊಟ್ಟ ಮೇಲೆ, ಅಜ್ಜಿ ತೊಳೆದು ಕೊಡುತ್ತಿದ್ದ ಮಾವಿನ ಹಣ್ಣನ್ನು ತಿಂದು ಮತ್ತೆ ಆಟ ಆಡಲು ಓಡುತ್ತಿದ್ದೆವು... ಆಹಾ! ಆ ಹಣ್ಣುಗಳ ಸವಿಯನ್ನು ನೆನೆದರೆ ಈಗಲೂ ಬಾಯಿಯಲ್ಲಿ ನೀರೂರುತ್ತದೆ. ಮದ್ಯಾಹ್ನದ ಊಟಕ್ಕೆ ಮಾವಿನ ಹಣ್ಣಿನ ಖಾದ್ಯ ಇದ್ದೆ ಇರುತ್ತಿತ್ತು... "ಚಂಟ್ರೆ ಪುಳಿ, ಪಲ್ಯ, ಮಾವಿನ ಹಣ್ಣಿನ ಸಾಸಮಿ.... ಅತ್ತೆ ಸ್ಪೆಷಲ್ ಆಗಿ ಮಾಡುತ್ತಿದ್ದ ಮಾವಿನ ಹಣ್ಣಿನ ಮಣ್ಣಿ, ರಸಾಯನ..." ಇದರಲ್ಲಿ ಯಾವುದೇ ಮಾವಿನ ಹಣ್ಣಿನ ಖಾದ್ಯದ ಹಾಗೂ ಅತ್ತೆ ಪ್ರೀತಿಯಿಂದ ಮಾಡುತ್ತಿದ್ದ ಆ ಅಡುಗೆಯ ರುಚಿ ಮರೆಯಲು ಸಾಧ್ಯವೇ ಇಲ್ಲ. ಅತ್ತೆ ಮಾಡುತ್ತಿದ್ದ ಮಜ್ಜಿಗೆ ಹುಳಿಯ ರುಚಿಯನ್ನು ವರ್ಣಿಸಲು ಸಾಧ್ಯವೇ ಇಲ್ಲ, ಅಷ್ಟು ಅದ್ಭುತ ರುಚಿ...ಅಷ್ಟು ಜನರಿಗೆ ಅಡುಗೆ ಮಾಡಿ ಹಾಕುವಾಗ ಒಂದೇ ಒಂದು ದಿವಸ ಬೇಸರ ಮಾಡಿಕೊಂಡವರಲ್ಲ... ಎಲ್ಲಾ ಮಕ್ಕಳನ್ನು ತುಂಬಾ ಪ್ರೀತಿಯಿಂದ ಮಾತನಾಡಿಸಿ ಆ ಮಕ್ಕಳಿಗೆ ಇಷ್ಟವಾದ ಅಡುಗೆಯನ್ನು ಸ್ವಲ್ಪ ಹೆಚ್ಚಾಗಿಯೇ ಬಡಿಸಿ ನಮ್ಮೆಲ್ಲರ ಹೊಟ್ಟೆ ತುಂಬಿಸುತ್ತಿದ್ದರು... ನಮ್ಮತ್ತೆ.

**ವಾಣಿರಾಜ್**

(ಸವಿನೆನಪುಗಳ ಹಂದರ - ಕಥಾ ಸಂಕಲನ)

## ಲೇಖಕರ ಪರಿಚಯ



ತಮ್ಮ ಜೀವನದಲ್ಲಿ ನಡೆದ, ನಡೆಯುವ ಎಷ್ಟೋ ಅನುಭವಗಳನ್ನು ಸರಳವಾದ ಶಬ್ದಗಳಲ್ಲಿ ಸ್ವಾರಸ್ಯಕರ ವರ್ಣನೆಯಲ್ಲಿ ಉಣಬಡಿಸಿದ್ದಾರೆ. ಕೆಲವು ಘಟನೆಗಳು ಈಗಿನ ಮತ್ತು ಅಂದಿನ ಜೀವನದಲ್ಲಿ ಆದ ಬದಲಾವಣೆಗಳನ್ನು ಕಣ್ಮುಂದೆ ಕಾಣುವಂತೆ ಚಿತ್ರಿಸಿದ್ದಾರೆ.

### ಅನುಭವ ಕಥನ ಬರೆಯಿರಿ

ಬೇಸಿಗೆಕಾಲದ ರಜಾದಿನಗಳಲ್ಲಿ ನೀವು ನಿಮ್ಮ ಅಜ್ಜಿಮನೆಗೆ ಹೋಗಿರುವಿರಲ್ಲವೇ? ಮೇಲಿನ ಕಥಾಭಾಗದಂತೆ ನಿಮಗೂ ನಿಮ್ಮ ಅಜ್ಜಿ ಮನೆಯಲ್ಲಿ ಕಳೆದ ಸುಂದರ ಅನುಭವಗಳಿರಬಹುದಲ್ಲವೇ? ನಿಮ್ಮ ರಜಾ ಕಾಲದ ಅನುಭವವನ್ನು ಅನುಭವ ಕಥನ ರೂಪದಲ್ಲಿ ಬರೆಯಿರಿ.

### ಕಿರುಲೇಖನ ಬರೆಯಿರಿ

ಮಳೆಗಾಲಕ್ಕಾಗಿ ಮನೆಗಳಲ್ಲಿ ಮಾಡುವ ಪೂರ್ವ ತಯಾರಿಗಳ ಬಗ್ಗೆ ಕಿರುಲೇಖನ ಒಂದನ್ನು ಬರೆಯಿರಿ.

### ಕಾಲಗಳು

ಮಾದರಿಯಂತೆ ಕಾಲಗಳನ್ನು ಬದಲಾಯಿಸಿ ಬರೆಯಿರಿ.

- ಮಂಜು ಒಂದೇ ಸಮನೆ ಸುರಿಯುತ್ತಿತ್ತು (ಭೂತ ಕಾಲ)
- ಮಂಜು ಒಂದೇ ಸಮನೆ ಸುರಿಯುತ್ತಾ ಇದೆ (ವರ್ತಮಾನ ಕಾಲ)
- ಮಂಜು ಒಂದೇ ಸಮನೆ ಸುರಿಯುವುದು (ಭವಿಷ್ಯತ್ ಕಾಲ)

1. ಅಜ್ಜಿಯು ನಮ್ಮನ್ನು ಕರೆದಳು ( ಭೂತ ಕಾಲ)

   ........................................................................ (ಭವಿಷ್ಯತ್ ಕಾಲ)

   ........................................................................ (ವರ್ತಮಾನ ಕಾಲ)

2. ನಾನು ಆಟ ಆಡುತ್ತೇನೆ. (ವರ್ತಮಾನ ಕಾಲ)

   ........................................................................ (ಭವಿಷ್ಯತ್ ಕಾಲ)

   ........................................................................ (ಭೂತಕಾಲ)

# 2. ಸಿರಿ ಸಂಸ್ಕೃತಿ

ನಾಗರೀಕ ಸಮಾಜ ಮತ್ತು ಪ್ರಾಣಿ ವರ್ಗಗಳ ನಡುವೆ ಕೆಲವು ಸಾದೃಶ್ಯಗಳು ಇವೆಯಾದರೂ ಸ್ವತಂತ್ರವಾದ ಯೋಚನಾ ಸಾಮರ್ಥ್ಯವಿರುವ ಮನುಷ್ಯ ಇತರ ಪ್ರಾಣಿಗಳಿಗಿಂತ ಭಿನ್ನವಾಗಿಯೇ ನಿಲ್ಲುತ್ತಾನೆ. ಪ್ರಾಣಿ ಸಮುದಾಯವು ತನ್ನ ಹಿಂದಿನ ಸಮುದಾಯದಿಂದ ಯಾವುದೇ ಪಾಠವನ್ನು ಕಲಿಯುವುದಿಲ್ಲ. ಆದರೆ ಮಾನವ ತನ್ನ ಹಿಂದಿನ ತಲೆಮಾರಿನಿಂದ ಸಾಕಷ್ಟು ಪಡೆದುಕೊಂಡು ಉಳಿಸಿ, ಬೆಳೆಸುವ ಪ್ರಯತ್ನ ಮಾಡುತ್ತಾನೆ. ಮನುಷ್ಯನು ತನ್ನ ಶ್ರಮದ ದಣಿವನ್ನು ನಿವಾರಿಸಿಕೊಳ್ಳಲು, ಮಾನಸಿಕ ಉಲ್ಲಾಸಕ್ಕೆ ತನ್ನ ಜೀವನದ ಅನುಭವಗಳನ್ನು ವಿವಿಧ ಕಲಾ ಮಾಧ್ಯಮಗಳ ಮೂಲಕ ನಾಗರಿಕತೆಗಳ ಆರಂಭದಿಂದಲೇ ಅಭಿವ್ಯಕ್ತಿಪಡಿಸುತ್ತಾ ಬಂದಿದ್ದಾನೆ. ಪರಂಪರೆಯಿಂದ ಬಂದಂತಹ ಸಾಂಸ್ಕೃತಿಕ ಅಂಶಗಳನ್ನು ಉಳಿಸಿ ಬೆಳೆಸುವ ಹೊಣೆಗಾರಿಕೆ ನಮಗೆ ಇದೆ. ಅವುಗಳನ್ನು ತಿಳಿದುಕೊಂಡು ಆಸ್ವಾದಿಸಿ, ಅವುಗಳ ಕುರಿತಾದ ನಮ್ಮ ಅಭಿಪ್ರಾಯಗಳನ್ನು ವಿವಿಧ ಭಾಷಾ ಪ್ರಕಾರಗಳಲ್ಲಿ ಅಭಿವ್ಯಕ್ತಪಡಿಸುವುದನ್ನು ನಾವು ಈ ಘಟಕದ ಮೂಲಕ ಮಾಡಬೇಕಾಗಿದೆ.

**ಪ್ರವೇಶ ಚಟುವಟಿಕೆ**









ಇಲ್ಲಿ ನೀಡಿರುವ ಚಿತ್ರಗಳನ್ನು ಗಮನಿಸಿರಿ. ಇಲ್ಲಿ ಯಾವೆಲ್ಲಾ ಕಲೆಗಳಿಗೆ ಸಂಬಂಧಪಟ್ಟ ಚಿತ್ರಗಳನ್ನು ನೀಡಲಾಗಿದೆ?

ಚರ್ಚಿಸಿ ಅಭಿಪ್ರಾಯಗಳನ್ನು ತಿಳಿಸಿರಿ.



1



2



3



4



5



6

## ಜನಪದ ಕಲೆಗಳು



7



8

## ಡೊಳ್ಳುಕುಣಿತ

ಡೊಳ್ಳುಕುಣಿತ ಜನಪದ ಕಲೆಗಳಲ್ಲಿ ವಿಶಿಷ್ಟವಾದುದು. ಇದು ವಾದ್ಯ ಪ್ರಧಾನ ಕಲೆ. ಬೀರೇಶ್ವರ ಸಂಪ್ರದಾಯಕ್ಕೆ ಸೇರಿದ ಹಾಲುಮತ ಸಮುದಾಯದ ಕುಣಿತ. 'ಡೊಳ್ಳು' ಚರ್ಮವಾದ್ಯ. ಪೊಳ್ಳು ಪಡಗದ ಎರಡೂ ಬಾಯಿಗಳಿಗೆ ತೊಗಲು ಹೊದಿಸಿದ ಎರಡು ಪರಡೆಗಳನ್ನಿಟ್ಟು ಹಗ್ಗದಿಂದ ಬಿಗಿದಿರುತ್ತಾರೆ. ಇದನ್ನು ಎರಡೂ ಕೈಗಳಿಂದ ಬಾರಿಸಬಹುದು. ಬಲಗೈಯಲ್ಲಿ ಬಾರಿಸುವ 'ಗುಣಿ' ಇರುತ್ತದೆ. ಗುಣಿಯಿಂದ ಬಾರಿಸಿದ ಗತ್ತಿಗೆ ಹೊಂದಿಕೆಯಾಗುವಂತೆ ಎಡಗೈಯಿಂದ ಛಾಪು ಹಾಕಲಾಗುತ್ತದೆ. ಭರಮದೇವರ ಬ್ರಹ್ಮಪಲ್ಲಕ್ಕಿ ಉತ್ಸವ ಕಾಲಕ್ಕೆ ಡೊಳ್ಳು ಬಾರಿಸುತ್ತಾರೆ. ಸಾಮಾನ್ಯವಾಗಿ ಡೊಳ್ಳು ಬಾರಿಸುವವರು ದೇಹದ ಮೇಲುಭಾಗಕ್ಕೆ ಕರಿಯ ಕಂಬಳಿಯನ್ನೂ ಸೊಂಟದ ಭಾಗಕ್ಕೆ ಮೊಳಕಾಲು ಮೇಲೆ ಬರುವಂತೆ ಕಚ್ಚೆಪಂಚೆಯನ್ನೂ ಉಡುತ್ತಾರೆ. ಕೆಲವೊಮ್ಮೆ ಹುಲಿಯ ಚರ್ಮದ ರೀತಿಯ ಉಡುಪನ್ನೂ ಧರಿಸುತ್ತಾರೆ.

ಕುಣಿತದ ಕಾಲಕ್ಕೆ ವಾದ್ಯಗಾರರು ಹಸಿರು ಇಲ್ಲವೇ ಕೆಂಪು ಬಣ್ಣದ ಗಗ್ಗರಿ, ಅಂಗಿ,



ಟೊಪ್ಪಿಗೆ ತೊಡುವರು. ಎರಡೂ ಕೈಗಳಲ್ಲೂ ಅದೇ ಬಣ್ಣದ ಕರವಸ್ತ್ರ ಹಿಡಿದಿರುತ್ತಾರೆ. ಕುಣಿತಕ್ಕೆ ಹಿನ್ನೆಲೆಯಾಗಿ ಡೊಳ್ಳು, ತಾಳ ಮತ್ತು ಕೊಳಲು ಇರುತ್ತವೆ. ಶ್ರಾವಣ ಸೋಮವಾರ, ಅಮಾವಾಸ್ಯೆಯ ದಿನ ಮತ್ತು ಯುಗಾದಿಯಂದು ಪಲ್ಲಕ್ಕಿ ಉತ್ಸವದ ತರುವಾಯ ಭರಮದೇವರ ಗುಡಿಯ ಮುಂದೆ ಡೊಳ್ಳಿನ ಹಾಡುಗಳ ಕಾರ್ಯಕ್ರಮ ನಡೆಯುತ್ತದೆ. ಅದರಂತೆ ಭಕ್ತರು ದೇವರ ಮುಮ್ಮೇಳದವರಾಗಿ ಒಬ್ಬರು ಡೊಳ್ಳು ಬಾರಿಸುತ್ತ ಹಾಡು ಹೇಳುತ್ತಾರೆ. ಹಿಮ್ಮೇಳದಲ್ಲಿ ಹಲವರು ತಾಳ ಮತ್ತು ಕೊಳಲು ಬಾರಿಸುತ್ತ ಮುಮ್ಮೇಳದವರು ಹೇಳಿಕೊಟ್ಟ ಹಾಡಿನ ಭಾಗವನ್ನು ಹೇಳುತ್ತಾರೆ. ಸಾಮಾನ್ಯವಾಗಿ ಹಾಡಿನ ವಿಷಯ ದೈವಮಹಿಮೆ ಅಥವಾ ದೈವಭಕ್ತರ ಕಥೆಯಾಗಿರುತ್ತದೆ. ಈ ಕಥನಕವನಕ್ಕೆ ರಗಳೆಯೇ ತಕ್ಕ ಧಾಟಿ. ಡೊಳ್ಳಿನ ಹಾಡು ಹೀಗೆ ಆರಂಭವಾಗುತ್ತದೆ:

ಸ್ವಾಮಿ ನಮ್ಮಯ ದೇವರು ಬಂದಾನ ಬನ್ನಿರೇ
ಗುರುವೇ ನಮ್ಮಯ ದೇವರು ಬಂದಾನ ಬನ್ನಿರೇ

ಬೀರೇಶ್ವರಹಾಡು ಬಹಳ ಹಿಂದಿನಿಂದಲೂ ಭಕ್ತರು ಮೌಖಿಕವಾಗಿ ಜತನವಾಗಿ ಕಾಯ್ದುಕೊಂಡು ಬಂದಿರುವ ಉತ್ತಮ ಕಾವ್ಯಗೀತೆ. ಡೊಳ್ಳಿನ ಹಾಡುಗಳು, ಬಾಳೇ ಮುಖ್ಯವೆಂದೂ ಅದಕ್ಕೆ ಬೀರದೇವರೇ ಬೆನ್ನಾಧಾರವೆಂದೂ ಸಾರಿ ಸಕಲ ಜನರಿಗೆ ಸುಖವಾಗಲೆಂದೂ ಸಂದೇಶ ನೀಡುತ್ತವೆ.

ಡೊಳ್ಳು ಕುಣಿತದಲ್ಲಿ ಹಲವಾರು ಕಸರತ್ತುಗಳೇ ಅಲ್ಲದೆ, ಕುದುರೆಕುಣಿತ, ಕೋಲುಕುಣಿತ, ಸಾರು ಕುಣಿತ, ಹುಚ್ಚೆಳ್ಳುಬಡಿತ, ಕೈಬಾರಿಕೆ, ಒಂದ್ದೆಜ್ಜೆ, ಎರಡ್ಡೆಜ್ಜೆಕುಣಿತ, ಜೋಡುಸಾಲಿನ ಜಗ್ಗಿನ ಕೈಯಿ - ಮೊದಲಾದ ವೈವಿಧ್ಯಮಯ ಕುಣಿತಗಳಿವೆ. ಬೀರಪ್ಪನ ಡೊಳ್ಳು ಎಂದೇ ಬೆಳೆದು ಬಂದ ಈ ಅದ್ಭುತ ಪ್ರದರ್ಶನ ಕಲೆ ಇಂದು ಧಾರ್ಮಿಕತೆಯ ಆವರಣದಿಂದ ಹೊರಬಂದು ಲೌಕಿಕ ಉತ್ಸವಗಳಿಗೆ ತೆರೆದುಕೊಂಡಿದೆ.

**ಸಂಗ್ರಹ : ವಿಶ್ವಕೋಶ**

ಕಾಸರಗೋಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆಗಳಲ್ಲಿ ಕಂಡು ಬರುವ ಬ್ಯಾರಿ ಸಮುದಾಯದವರಲ್ಲಿ ವಿಶಿಷ್ಟವಾದ ಹಾಡು, ಕುಣಿತಗಳಿವೆ. ಇವರಲ್ಲಿ ಮದುವೆಯ ಸಂಭ್ರಮದಲ್ಲಿ ಹೆಂಗಸರ ಪಾಲು ಅತ್ಯಂತ ಹಿರಿದು. ಮದುಮಗಳ ಕೈಗೆ ಮದರಂಗಿ ಇಡುವಾಗ 'ಮಯಿಲಾಂಜಿ ಪಾಟ್ಟು', 'ಕೈಕೊಟ್ಟು ಪಾಟ್ಟುಗಳು', ಮದುವೆಯ ವಿವಿಧ ಹಂತಗಳಲ್ಲಿ ಹಾಡುವ 'ಒಪ್ಪನ ಪಾಟ್ಟು', 'ತಿರುಕಲ್ಯಾಣ ಪಾಟ್ಟು' ಹೆಚ್ಚು ಕಮ್ಮಿ ಎಲ್ಲ ಮಹಿಳೆಯರಿಗೂ ಗೊತ್ತು. ರಾಗವಾಗಿ ಇಂಪಾಗಿ ಹಾಡಬಲ್ಲ ಮಹಿಳೆಯರು ಹಾಡತೊಡಗಿದರೆ ಉಳಿದವರು ಹಾಡಿನ ತಾಳಕ್ಕೆ ಸರಿಯಾಗಿ ಚಪ್ಪಾಳೆ ತಟ್ಟುತ್ತಾರೆ. 'ಒಪ್ಪನ ಪಾಟ್ಟು' ಹಾಡುವಾಗ ಚಿಕ್ಕ ಹುಡುಗಿಯರು ಕುಣಿಯುವುದೂ ಇದೆ. ಇದು ಬಹಳ ಅಪರೂಪಕ್ಕೆ. ಇವಲ್ಲದೆ ಮದುಮಗನನ್ನು ಲೇವಡಿ ಮಾಡುವ ಹಾಡುಗಳು, ಮದುಮಗಳನ್ನು ಕೀಟಲೆ ಮಾಡುವ ಹಾಡುಗಳೂ ಇವೆ. ಆದರೆ ಹೆಚ್ಚಿನ ಹಾಡುಗಳೆಲ್ಲವೂ ಕೇರಳದ ಮಾಪ್ಪೆಪಾಟ್ಟುಗಳಾದ್ದರಿಂದ ಮಲೆಯಾಳದಲ್ಲಿರುತ್ತವೆ. ಬ್ಯಾರಿ ಭಾಷೆಗೆ ವಿಶಿಷ್ಟವಾದ ಹಾಡುಗಳ ಸಂಖ್ಯೆ ಕಮ್ಮಿಯಾದರೂ ಸಾಕಷ್ಟು ಸಂಖ್ಯೆಯಲ್ಲಿವೆ.

ಬ್ಯಾರಿ ಗಂಡಸರು ಮದುವೆಯ ಸಮಾರಂಭದಲ್ಲಿ ಸ್ಥಳೀಯ ಕೋಲಾಟವನ್ನು ಹೋಲುವ



'ಕೋಲ್ಕಳಿ', ತಮ್ಮಟೆಯನ್ನು ಬಡಿಯುತ್ತಾ ಹಾಡುವ 'ದಫ್ ಕುಣಿತ', ಕತ್ತಿವರಸೆಯ 'ತಾಲೀಮ್ ಕಳಿ' ಮುಂತಾದ ಹಾಡು, ಕುಣಿತ ಕಸರತ್ತುಗಳಲ್ಲಿ ಭಾಗವಹಿಸುತ್ತಾರೆ. ಇಂತಹ ಹಾಡುಗಳಲ್ಲಿ ಹೆಚ್ಚಿನವು ಮಲೆಯಾಳದಲ್ಲಿವೆ. ಈ ಮಾಪ್ಪೆಪಾಟ್ಟುಗಳಲ್ಲಿ ಹೆಚ್ಚಿನ ಹಾಡುಗಳು ಪೈಗಂಬರರ ಬದುಕಿನ ಅನೇಕ ಘಟನೆಗಳ ವಿವರಗಳನ್ನೊಳಗೊಂಡವುಗಳಾಗಿವೆ. ಇವುಗಳಲ್ಲದೆ ಅಜ್ಜಿ ಕಥೆಗಳಂತೆ ಕಾಣುವ 'ಖಿಸ್ಸಾಪಾಟ್ಟು'ಗಳು ಅತ್ಯಂತ ಜನಪ್ರಿಯವಾಗಿವೆ. ಇವಲ್ಲದೆ ಭಕ್ತಿಯಿಂದ ಪಾರಾಯಣ ಮಾಡುವ ಪೈಗಂಬರರ ಜೀವನ ಚರಿತ್ರೆ ಸೂಫಿ-ಸಂತರುಗಳ ಜೀವನಚರಿತ್ರೆಯನ್ನೊಳಗೊಂಡ 'ಮೌಲೂದ್' ಗಳು (ಅರಬಿ ಭಾಷೆಯಲ್ಲಿವೆ), ಮಾಲೆಗಳು (ಮಲೆಯಾಳಂ ಭಾಷೆಯಲ್ಲಿ) ಇವೆ. ಇವುಗಳು ಮಾಪ್ಪೆಗಳ ಸಾಂಸ್ಕೃತಿಕ ಜೀವನದ ಪ್ರಮುಖ ಭಾಗಗಳಾಗಿವೆ.

ಬ್ಯಾರಿ ಸಮುದಾಯದ ಕೆಲವು ಜನಪದ ಹಾಡುಗಳು ಬಾಯಿಯಿಂದ ಬಾಯಿಗೆ ಹರಡುತ್ತಾ ಇಂದಿಗೂ ಬದುಕಿ ಉಳಿದಿವೆ. ಅವುಗಳಲ್ಲಿ ಮಕ್ಕಳ ಹಾಡುಗಳು ಮುಖ್ಯ. ಮಕ್ಕಳ ಒಂದು ಹಾಡನ್ನು ಇಲ್ಲಿ ಕೊಡಲಾಗಿದೆ.

"ಅವುಲಿಯಾ ಸಾಹೇಬು
ಜವುಲಿ ಎಡುತ್ತು
ಬಂಟ್ವಾಳ ಪೇಂಟೇಲಿ
ತಂಬಾಡಿಚ್ಚಿ"
(ಸಂತ ಸಾಹೇಬರು
ಜವುಳಿ ಖರೀದಿಸಿ
ಬಂಟ್ವಾಳ ಪೇಟೆಯಲ್ಲಿ
ತಳ ಊರಿದರು)

- ಫಕೀರ್ ಮಹಮ್ಮದ್ ಕಟ್ಪಾಡಿ

## ಚವಿಟ್ಟ್ ನಾಟಕಂ

ಚವಿಟ್ಟ್ ನಾಟಕವು ಕೇರಳ ಮತ್ತು ತಮಿಳುನಾಡಿನ ದೃಶ್ಯಕಲೆಗಳೊಂದಿಗೆ ಸಾದೃಶ್ಯವಿರುವ ಒಂದು ನಾಟಕ ಕಲೆಯಾಗಿದೆ. ಇದು ಕ್ರೈಸ್ತ ಸಮುದಾಯದವರು ಮಾತ್ರ ಆಡಿ ತೋರಿಸುವ ಒಂದು ದೃಶ್ಯಕಲೆಯಾಗಿದೆ. ಕ್ರಿಸ್ ಮಸ್, ಈಸ್ಟರ್ ಮೊದಲಾದ ವಿಶೇಷ ಹಬ್ಬಗಳ ಸಂದರ್ಭಗಳಲ್ಲಿ ಚವಿಟ್ಟ್ ನಾಟಕವನ್ನು ಆಡುತ್ತಾರೆ. ಕೇರಳದ ಚೇರ್ತಲ, ಆಲಪ್ಪುಳ, ಕೊಲ್ಲಂ, ಮೊದಲಾದ ಪ್ರದೇಶಗಳಲ್ಲಿ ಚವಿಟ್ಟ್ ನಾಟಕಕ್ಕೆ ಹೆಚ್ಚು ಮಹತ್ವವಿದೆ. ಕೇರಳದಲ್ಲಿ ಪ್ರಚಾರದಲ್ಲಿರುವ ಹಿಂದೂಗಳ ಕೆಲವು ವಿಶಿಷ್ಟ ಕಲೆಗಳೊಡನೆಯೂ ಯಕ್ಷಗಾನ ಮೊದಲಾದ ಕಲಾರೂಪಗಳೊಡನೆಯೂ ಚವಿಟ್ಟ್ ನಾಟಕಕ್ಕೆ ಅಲ್ಪ ಸ್ವಲ್ಪ ಸಾಮ್ಯವಿದೆ.

ಚವಿಟ್ಟ್ ನಾಟಕವು ನೃತ್ಯ, ಸಂಗೀತ ಪ್ರಧಾನವಾದ ಒಂದು ಕಲೆ, 'ಚವಿಟ್ಟ್' ಎಂದರೆ ಹೆಜ್ಜೆ, ತುಳಿತ ಎಂದರ್ಥ, ತಾಳಬದ್ಧವಾಗಿ ಕಾಲೆತ್ತಿ ಹೆಜ್ಜೆ ಹಾಕುವುದೇ ಈ ನಾಟಕದ ಮುಖ್ಯ ಆಕರ್ಷಣೆ. ಇದರಲ್ಲಿ ಪುರುಷೋಚಿತ ಹೆಜ್ಜೆ ಹಾಕುವುದು ಪುರುಷ ಪಾತ್ರಗಳಿಂದಲೂ ಲಾಸ್ಯಮಯ ನೃತ್ಯವು ಸ್ತ್ರೀ ಪಾತ್ರಗಳಿಂದಲೂ ನಡೆಯುತ್ತದೆ. ಹೆಜ್ಜೆ ಹಾಕುವ ರೀತಿಯಲ್ಲಿ ಮುಖ್ಯವಾಗಿ ಹದಿನಾರು ಬಗೆಯವುಗಳಿವೆ. ಸತ್ಪಾತ್ರಗಳಿಗೆ ಮತ್ತು ದುಷ್ಟ ಪಾತ್ರಗಳಿಗೆ ವಿಭಿನ್ನ ಹೆಜ್ಜೆಗಳನ್ನು ನಿಯೋಜಿಸಲಾಗಿದೆ. ‘ಇರಟ್ಟಿಪ್ಪ್’ಗಳು, ಕಲಾಶಂಗಳ್, ಇಡಕಲಾಶಂಗಳ್, ಕವಿತ್ತಂಗಳ್ ಎಂಬಿತ್ಯಾದಿ ಕೆಲವು ಹೆಜ್ಜೆಯ ರೀತಿಗಳನ್ನು ಚವಿಟ್ಟ್ ನಾಟಕದಲ್ಲಿ ಅಳವಡಿಸಿಕೊಂಡಿದ್ದಾರೆ. ಅಭಿನಯವು ಸಂಪೂರ್ಣ ವೀರರಸ ಪ್ರಧಾನವಾದುದು. ಯುದ್ಧ, ಬೇಟೆ ಮೊದಲಾದ ಸನ್ನಿವೇಶಗಳನ್ನು ಚವಿಟ್ಟ್ ನಾಟಕದಲ್ಲಿ ಸೇರಿಸಿಕೊಂಡಿದ್ದಾರೆ. ಮೃದಂಗ,



ತಬಲ, ಪಿಟೀಲು, ಕೊಳಲು ಮತ್ತು ಬುಲ್ಬುಲ್ ಮೊದಲಾದ ಸಂಗೀತೋಪಕರಣಗಳು ಚವಿಟ್ಟ್ ನಾಟಕದಲ್ಲಿ ಸಂದರ್ಭೋಚಿತವಾಗಿ ಉಪಯೋಗಿಸುತ್ತಾರೆ. ಇದು ಒಂದು ಗೀತನಾಟಕ.

ಕಟ್ಟಿಯಕ್ಕಾರನ್, ರಾಜ, ಮಂತ್ರಿ, ಸ್ತ್ರೀ ವೇಷಗಳು, ಬಾಲಪಾತ್ರಗಳು ಮೊದಲಾದ ವೇಷಗಳು ಕಥಾಪಾತ್ರಕ್ಕೂ ಕಥಾ ಸಂದರ್ಭಕ್ಕೂ ಅನುಗುಣವಾದ ವೇಷಭೂಷಣಗಳೊಂದಿಗೆ ಮತ್ತು ಅನುಯಾಯಿಗಳೊಂದಿಗೆ ರಂಗಪ್ರವೇಶ ಮಾಡುತ್ತಾರೆ. ತೆರೆದ ರಂಗವೇದಿಕೆಯಲ್ಲಿ ಚವಿಟ್ಟ್ ನಾಟಕಂ ನಡೆಯುತ್ತದೆ. ಐವತ್ತು ಅಥವಾ ಅರುವತ್ತು ಕೋಲು ಉದ್ದ ಮತ್ತು ಹದಿನಾರು ಕೋಲು ಅಗಲದ ವೇದಿಕೆಯನ್ನು ನಿರ್ಮಿಸುತ್ತಾರೆ. ವೇದಿಕೆಗೆ ಸಂಪೂರ್ಣ ಮರದ ಹಲಗೆಯನ್ನು ಹಾಸುತ್ತಾರೆ. ಆದ್ದರಿಂದ ವೇಷಧಾರಿಗಳು ಹಾಕುವ ಹೆಜ್ಜೆಗಳು ಸದ್ದು ಗದ್ದಲಗಳಿಂದ ಕೂಡಿರಲು ಸಾಧ್ಯವಾಗುತ್ತದೆ. ವೇದಿಕೆಯ ಎರಡು ಬದಿಯಲ್ಲೂ 6-8 ಅಡಿ ಎತ್ತರದ ಮೇಡ ನಿರ್ಮಿಸುವರು. ಅಲ್ಲಿಗೆ ಏರಲು ಮೆಟ್ಟಲುಗಳನ್ನು ರಚಿಸುವರು.

ಚವಿಟ್ಟ್ ನಾಟಕದಲ್ಲಿ ಕೇಳಿ ಬಡಿಯುವುದು ಒಂದು ಸಂಪ್ರದಾಯವಾಗಿದೆ. ಇಲ್ಲಿ ಇಂದು ನಾಟಕ ನಡೆಯುತ್ತದೆಯೆಂಬುದನ್ನು ಊರವರಿಗೆ ತಿಳಿಸುವ ಸಲುವಾಗಿ ಕೇಳಿ ಬಡಿಯುವುದು ಎಂಬ ವ್ಯಾಖ್ಯಾನ ಸಾಧಾರಣವಾಗಿದ್ದರೂ ಚವಿಟ್ಟ್ ನಾಟಕದಲ್ಲಿ ಇದು ಒಂದು ಆಚಾರ ಕ್ರಮದಲ್ಲಿಯೇ ನಡೆಯುತ್ತದೆ. ಚವಿಟ್ಟ್ ನಾಟಕದಲ್ಲಿ ಮೊದಲ ಕೇಳಿ ಮೊಳಗುವುದರೊಂದಿಗೆ ನೇಪಥ್ಯದಲ್ಲಿ ಕಲಾವಿದರು ವೇಷಧರಿಸಲು ಪ್ರಾರಂಭಿಸುತ್ತಾರೆ. ಅವರು ಮಾತೆಯ ಮುಂದೆ ಬಂದು ನಮಸ್ಕರಿಸಿ ತಾಳಬದ್ಧವಾಗಿ ಹೆಜ್ಜೆ ಹಾಕಿ ಗುರುವಿಗೆ ಮುಂಡು, ಶಾಲು ಮತ್ತು ಹಣ ದಕ್ಷಿಣೆ ಇಡುತ್ತಾರೆ. ಈ ಕ್ರಿಯೆ ಮುಗಿಯುತ್ತಲೇ ಬಾಲಕ ವೇಷಧಾರಿಗಳು ಹೆಜ್ಜೆ ಹಾಕುತ್ತ ಕುಣಿತ ಪ್ರಾರಂಭಿಸುತ್ತಾರೆ. ಅವರ ಕುಣಿತದ ಅಂತಿಮ ಘಟ್ಟಕ್ಕೆ ತಲುಪುತ್ತಲೇ ಸ್ತ್ರೀವೇಷಧಾರಿಗಳು ಬಂದು ತೋಡಯಂ ಆಡುತ್ತಾರೆ. ತೋಡಯಂ ಆಡುವಾಗ ಹೇಳುವ ಗೀತೆಯು ದೇವಸ್ತುತಿಯಾಗಿದೆ. ತೋಡಯಂ ಆಟ ಮುಗಿದೊಡನೆ ಕಥೆಯು ಆರಂಭವಾಗುತ್ತದೆ. ಕಥಾ ಬೆಳವಣಿಗೆಗೆ ಅನುಸರಿಸಿ ಮಾತುಕತೆ, ದರ್ಬಾರ್, ಯುದ್ಧಸ್ತುತಿ ಮೊದಲಾದ ಅಂಶಗಳ ಪ್ರದರ್ಶನ ನಡೆಯುತ್ತದೆ. ರಾತ್ರೆ 9 ಗಂಟೆಯಿಂದ ಪ್ರಾರಂಭವಾಗುವ ನಾಟಕವು ಬೆಳಗಿನವರೆಗೆ ಮುಂದುವರೆಯುತ್ತದೆ.

**ವಿ.ಎಸ್. ಶರ್ಮ**

(ಕೇರಳ ಕಲಾಮಾಲ)

## ಲೇಖಕರ ಪರಿಚಯ

## ಫಕೀರ ಮಹಮ್ಮದ್ ಕಟ್ಪಾಡಿ

ಶ್ರೀಯುತ ಫಕೀರ ಮಹಮ್ಮದ್ ಕಟ್ಪಾಡಿಯವರು 1948ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಟ್ಪಾಡಿಯಲ್ಲಿ ಜನಿಸಿದರು. ಇವರು ವೃತ್ತಿಯಲ್ಲಿ ಬ್ಯಾಂಕು ಉದ್ಯೋಗಿಯಾದರೂ ಪ್ರವೃತ್ತಿಯಲ್ಲಿ ಸೃಜನಶೀಲ ಲೇಖಕರು. ಕಥೆ, ಕಾದಂಬರಿ, ನಾಟಕ, ಪ್ರಬಂಧ, ಪ್ರವಾಸ ಕಥನ ಹೀಗೆ ವಿವಿಧ ಪ್ರಕಾರಗಳಲ್ಲಿ ಕೃತಿಗಳನ್ನು ಬರೆದಿದ್ದಾರೆ. ಗೋರಿ ಕಟ್ಟಿಕೊಂಡವರು, ನೋಂಬು ಇವರ ಕಥಾ ಸಂಕಲನಗಳು.



ಸರಕುಗಳು, ಕಚ್ಚಾದ, ನೆರೆ ಇವರ ಕಾದಂಬರಿಗಳಾಗಿವೆ. ಕೇರಳದಲ್ಲಿ ಹದಿನೈದು ದಿನ- ಇವರ ಪ್ರವಾಸ ಕಥನವಾಗಿದೆ. ದುಶ್ಯಾಸನ ರಾಜ್ಯ, ಆನೆ ಬಂತು ಆನೆ ಇವರ ನಾಟಕಗಳಾಗಿವೆ. ಇವರ 'ನೋಂಬು' ಕಥಾ ಸಂಕಲನಕ್ಕೆ 1991ರಲ್ಲಿ ರಾಷ್ಟ್ರೀಯ ಕಥಾ ಪುರಸ್ಕಾರ ದೊರಕಿದೆ.

**ಡಾ. ವಿ. ಎಸ್. ಶರ್ಮ**

ಡಾ. ವಿ. ಎಸ್. ಶರ್ಮ ಅವರು ಕೇರಳ ವಿಶ್ವವಿದ್ಯಾನಿಲಯದ ಮಲಯಾಳಂ ವಿಭಾಗದ ಪ್ರೊಫೆಸರ್ ಮತ್ತು ಮುಖ್ಯಸ್ಥರು. ತಿರುವನಂತಪುರದ ಕರ್ನಾಟಕ ಸಂಘದ ಹಿಂದಿನ ಪ್ರಕಟಣೆಗಳಾದ 'ಪುರಂದರ ಕೀರ್ತನಾವಳಿ' ಮತ್ತು 'ಮಂದಾರ ಮಲ್ಲಿಗೆ' ಪುಸ್ತಕಗಳ ತಯಾರಿಕೆಯಲ್ಲಿ ಅವರು ಪರಿಣಾಮಕಾರಿಯಾಗಿ ಭಾಗವಹಿಸಿರುತ್ತಾರೆ. ಸಂಘದ ಪ್ರಸ್ತುತ ಪುಸ್ತಕಕ್ಕೆ 'ನಾಂದಿ'



ಎಂಬ ಕೇರಳ ಕಲೆಗಳ ಪರಿಚಯಾತ್ಮಕವಾದ ಲೇಖನವನ್ನು ಬರೆದಿದ್ದಾರಲ್ಲದೆ, 'ಮೋಹಿನಿಯಾಟ್ಟಂ' 'ತುಳ್ಳಲ್' 'ಅಯ್ಯಪ್ಪನ್ ವಿಳಕ್' 'ಚವಿಟ್ಟ್ ನಾಟಕಂ' ಮತ್ತು 'ಸಂಗೀತಂ' ಎಂಬ ಪ್ರಬಂಧಗಳನ್ನೂ ಡಾ. ಶರ್ಮರವರು ಬರೆದಿದ್ದಾರೆ.

## ಚಟುವಟಿಕೆಗಳು

## ಉತ್ತರಿಸಿರಿ

1. 'ಡೊಳ್ಳು' ವಾದ್ಯ ಹೇಗಿರುತ್ತದೆ?
2. ಡೊಳ್ಳು ಬಾರಿಸುವ ಕಲಾವಿದರ ವೇಷಭೂಷಣದ ಬಗ್ಗೆ ಬರೆಯಿರಿ.
3. ಮುಸ್ಲಿಂ ಸಮುದಾಯದ ಕೆಲವು ಜಾನಪದ ಕಲೆಗಳನ್ನು ಹೆಸರಿಸಿರಿ.
4. ಭರಮದೇವರ ಗುಡಿಯ ಮುಂದೆ ಡೊಳ್ಳಿನ ಕಾರ್ಯಕ್ರಮ ಹೇಗೆ ನಡೆಯುತ್ತದೆ?
5. ಚವಿಟ್ಟ್ ನಾಟಕವನ್ನು ಕೇರಳದ ಯಾವ ಭಾಗಗಳಲ್ಲಿ ಆಡುತ್ತಾರೆ?
6. ನಾಟಕದ ವೇದಿಕೆಯನ್ನು ಹೇಗೆ ಸಜ್ಜುಗೊಳಿಸುತ್ತಾರೆ?

## ಟಿಪ್ಪಣಿ ಬರೆಯಿರಿ

ಡೊಳ್ಳುಕುಣಿತ ಕುರಿತಾದ ವಿವರಣೆಯನ್ನು ಪಾಠಭಾಗದಲ್ಲಿ ಓದಿರುವಿರಲ್ಲವೇ? ಇದೇ ರೀತಿ ನಿಮಗೆ ತಿಳಿದಿರುವ ಯಾವುದಾದರೊಂದು ಜನಪದ ಕಲೆಯ ಬಗ್ಗೆ ಟಿಪ್ಪಣಿ ಬರೆಯಿರಿ. ಉದಾ : ಆಟಿಕಳಂಜ, ಯಕ್ಷಗಾನ.....

## ಕರಪತ್ರ ತಯಾರಿಸಿರಿ

ಅಳಿದು ಹೋಗುತ್ತಿರುವ ಜನಪದ ಕಲೆಗಳನ್ನು ಉಳಿಸಿ ಬೆಳೆಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ಬಗ್ಗೆ ಜನಜಾಗೃತಿಯನ್ನು ಮೂಡಿಸಲು ಸೂಕ್ತವಾದ ಕರಪತ್ರವನ್ನು ತಯಾರಿಸಿರಿ.

## ಲೇಖನ ಬರೆಯಿರಿ

ಚವಿಟ್ಟ್ ನಾಟಕದ ಕುರಿತಾದ ಮಾಹಿತಿಗಳನ್ನು ನೀವು ತಿಳಿದಿರುವಿರಲ್ಲವೇ? ಇದರ ಹೆಚ್ಚಿನ ಮಾಹಿತಿಯನ್ನೊಳಗೊಂಡ ಒಂದು ಲೇಖನವನ್ನು ಬರೆಯಿರಿ .

## ವಿವರಣೆ ಬರೆಯಿರಿ

ನಿಮ್ಮ ಶಾಲಾ - ಕಲೋತ್ಸವದಲ್ಲಿ ಅಥವಾ ಊರ ಪರಿಸರದ ಉತ್ಸವಗಳಲ್ಲಿ ತಿರುವಾದಿರ, ಯಕ್ಷಗಾನ, ಒಪ್ಪನ, ಕಥಕ್ಕಳಿಯಂತಹ ಜಾನಪದ ನೃತ್ಯಗಳು ನಡೆಯುತ್ತವೆ. ಇದರಲ್ಲಿ ಯಾವುದಾದರೊಂದರ ಕುರಿತಾದ ವಿವರಣೆಯನ್ನು ಬರೆಯಿರಿ.

## ಪದಗಳನ್ನು ಜೋಡಿಸಿರಿ

ಮಾದರಿಯಂತೆ ಪದಗಳನ್ನು ಜೋಡಿಸಿ ಬರೆಯಿರಿ.

ವಿವಿಧ + ಎಡೆಗಳಲ್ಲಿ = ವಿವಿಧೆಡೆಗಳಲ್ಲಿ

ಮುಮ್ಮೇಳದ + ಅವರು = ಮುಮ್ಮೇಳದವರು

...............+ .............................. =

...............+ .............................. =

## ಸರಿಯಾದ ಪದವನ್ನು ಕಂಡುಹುಡುಕಿ ಬರೆಯಿರಿ

1. ಕಷ್ಟಪಟ್ಟು ದುಡಿದ ಹಣ

| | | | |
|---|---|---|---|
| | | | |

| | | |
|---|---|---|
| ಕಿ | ಸಂ | ನೆ |
| ಆ | ರಿ | ಪಿ |
| ದ | ಪಾ | ಮ |

2. ರಾತ್ರಿ ಚಂದ್ರನ ಬೆಳಕು

| | | | | |
|---|---|---|---|---|
| | | | | |

| | | |
|---|---|---|
| ಳು | ಮ | ದಿಂ |
| ಟೆ | ಬೆ | ಚ |
| ಳ | ನ | ಗ |

3. ಇದೊಂದು ಸಮಸ್ಯೆ

| | | |
|---|---|---|
| | | |

| | | |
|---|---|---|
| ಗ್ರ | ರ | ರೆ |
| ಳೆ | ಬಾ | ಸಿ |
| ಚಿ | ಗ | ಲಿ |

4. ಕಡಲಿನ ಮೇಲೆ ಕೈಗೊಳ್ಳುವ ಪಯಣ

| | | | | |
|---|---|---|---|---|
| | | | | |

ಮು ಮ ದ್ರ

ಟಿ ಸ ರ

ಲ ನ ಯಾ

4. ಗೆಲುವಿನ ಪಯಣ

| | | | | |
|---|---|---|---|---|
| | | | | |

ಜ ಮ ತ್ರೆ

ಟಿ ಬಾ ಯ

ಯಾ ರ ವಿ

### ಮುಂದುವರಿಕಾ ಚಟುವಟಿಕೆ

ಸಾಹಿತ್ಯ ಸಭೆ / ವಿದ್ಯಾರಂಗ ಕಲಾ ಸಾಹಿತ್ಯ ವೇದಿಕೆಯಲ್ಲಿ ಕೋಲಾಟ, ಒಪ್ಪನ, ತಿರುವಾದಿರ ಇತ್ಯಾದಿ ಕಲಾ ಪ್ರಕಾರಗಳನ್ನು ಪ್ರದರ್ಶನ ಮಾಡಿರಿ.

# ಬೀರು ಕಲ್ಕುಡ

ಓ ಡೆನ್ನ ಡೆನ್ನಾನ ಡೆನ್ನ ಡೆನ್ನಾನ ಡೆನ್ನೇ ಡೆನ್ನಾನಯೇ.....
ಅಚ್ಚವರು ಹುಟ್ಟಿದ ನಾಡು ಕೆಲ್ಲತ್ತಮಾರ್ನಾಡು
ತಾಯಿಯೆಂದರೆ ಈರವದಿ ಅಚ್ಚವದಿ
ತಂದೆಯೆಂದರೆ ಶಂಭು ಕಲ್ಕುಡ
ಅವರಿಗೆ ಐವರು ಮಕ್ಕಳು ಐವರಿಗೊಬ್ಬಳು ತಂಗಿ
ಅವರ ಹೆಸರು ಕೇಳಬೇಕು ಎಲ್ಯಣ್ಣಚ್ಚವ ಮಲ್ಲಣ್ಣಚ್ಚವ
ಬೀರು ಬಿಕುರು ನಂದು ತಂಗಿ ಕಾಳಮ್ಮನೆಂದು ಕರೆದರು
ಬೀರು ಕಲ್ಕುಡನ ಒಡಹುಟ್ಟಿದವಳು ಕಾಳಮ್ಮ
ಮಡದಿಯ ಬಸುರಿಗೆ ಏಳು ತಿಂಗಳಾಗುವಾಗ
ಶಂಭು ಕಲ್ಕುಡನಿಗೆ ಬೇಲೂರು ಬೆಳ್ಗೊಳಗಳಿಂದ ಬಂತು
ಅಂತರಂಗದ ಓಲೆ ಬಹಿರಂಗದ ಆಳು

ಶಂಭು ಕಲ್ಕುಡ ಮನೆ, ಮಡದಿಗೆ ಬೇಕಾದ ಏರ್ಪಾಡುಗಳನ್ನು ಮಾಡಿ ಶ್ರವಣಬೆಳಗೊಳದ ಅರಸರಲ್ಲಿಗೆ ಹೋಗುತ್ತಾನೆ. ಅರಸರ ಅಪ್ಪಣೆಯಂತೆ ಸಾವಿರ ಕಂಬದ ಬಸದಿ ಮತ್ತು ಗೋಮಟೇಶ್ವರನ ಕೆತ್ತನೆಯ ಕೆಲಸವನ್ನು ಪೂರೈಸುತ್ತಾನೆ.

"ನಾನು ಬಂದು ಬಹಳ ಕಾಲವಾಯಿತು. ಮನೆಯಲ್ಲಿ ತುಂಬಿದ ಬಸುರಿ ಮಡದಿಯನ್ನು ಬಿಟ್ಟು ಬಂದಿದ್ದೇನೆ. ನಾನು ನನ್ನ ರಾಜ್ಯಕ್ಕೆ ಹೋಗಬೇಕು" ಎಂದು ಶಂಭು ಕಲ್ಕುಡ ಅಪೇಕ್ಷಿಸಿದಾಗ ಅರಸು ಆತನನ್ನು ಬಾಯಿ ತುಂಬಾ ಹೊಗಳಿ ಉಡುಗೊರೆಗಳನ್ನು ನೀಡಿದನು. ಶಂಭು ಕಲ್ಕುಡ ಅರಸ ನೀಡಿದ ಉಡುಗೊರೆಗಳೊಂದಿಗೆ ತನ್ನ ಊರಿಗೆ ಹೊರಟನು.

ಆ ಸಮಯದಲ್ಲಿ ಕೆಲ್ಲತ್ತಮಾರ್ನಾಡಿನಲ್ಲಿ
ಈರವದಿಯ ಮಕ್ಕಳು



ಬಳೆದು ದೊಡ್ಡವರಾದರು ಕೊನೆಯ ಅವಳಿಮಕ್ಕಳು
ಬೀರು ಕಲ್ಕುಡ ಕಾಳಮ್ಮ ಸಣ್ಣ ಪ್ರಾಯದಲ್ಲಿ ದೊಡ್ಡ ಬಳವಿ ಬಳೆದರು.
ಸಮಪ್ರಾಯದ ಮಕ್ಕಳೊಂದಿಗೆ ಆಟಕ್ಕೆ ಹೋದ ಬೀರು
ತಂದೆಯಿಲ್ಲದ ಮಗನೆಂದು ಕಲೆ ಹೇಳಿ ಕುಲದೂಷಣೆ ಮಾಡಿದರು
ಮನೆಗೆ ಬಂದು ನನಗೆ ತಂದೆಯಿಲ್ಲವೇ ಎಂದು ಕೇಳಿದ
ಅಯ್ಯಯ್ಯೋ ಮಗ ನಿನ್ನಪ್ಪ ನನ್ನನ್ನು ಏಳು ತಿಂಗಳ ಬಸುರಿಯನ್ನು
ಬಿಟ್ಟು ಬೇಲೂರು ಬೆಳ್ಗೊಳಕ್ಕೆ ಕೆಲಸಕ್ಕೆಂದು ಹೋಗಿದ್ದಾರೆ ಮಗ
ಎಂದಳು ತಾಯಿ ಈರವದಿ
ನನ್ನ ತಂದೆಯನ್ನು ಹುಡುಕಲು ಹೋಗಬೇಕೆಂದ
ತಂದೆಗೈದ ಗೈಮೆ ನೋಡಬೇಕು ನಾನೂ ಮಾಡಬೇಕು ಎಂದ
ಯಾರೋ ಮಗು ಬೀರು ಕೇಳದೆಯೆ ನೀನು ಸಣ್ಣವ ಹೋಗಿ ದೊಡ್ಡವನಾಗಲಿಲ್ಲ.
ನಿನ್ನ ನೆತ್ತಿಯ ಎಣ್ಣೆ ಜಿಡ್ಡು ಆರಲಿಲ್ಲ
ಕಾಲಿನ ಅರಸಿನ ಮಾಸಲಿಲ್ಲ ಎಂದಳು ಈರವದಿ
ನನಗೆ ಹೋಗದೆ ಸಲ್ಲದು ಎಂದು ಚಲ ಹಿಡಿದ ಬೀರು
ಮರುದಿನ ಮುಂಜಾನೆ ಎದ್ದ
ತಂಗುಳನ್ನ ಉಂಡ ಮೊಸರನ್ನದ ಬುತ್ತಿ ಕಟ್ಟಿದ
ಪಯಣದ ಉಡುಗೆ ತೊಟ್ಟ ಹೊರಪಯಣ ಹಿಡಿದ

ಹೀಗೆ ತಂದೆಯನ್ನು ಹುಡುಕುತ್ತಾ ಹೊರಟ ಬೀರ ಕಲ್ಕುಡನಿಗೆ ಶಂಭು ಕಲ್ಕುಡ ಎದುರಾಗುತ್ತಾನೆ. ತಂದೆ ಮಕ್ಕಳಿಗೆ ಪರಸ್ಪರ ಪರಿಚಯವಾಗುತ್ತದೆ. ಬೀರು ಕಲ್ಕುಡ ತಂದೆಯ ಕೆಲಸ ನೋಡಬೇಕೆಂದು ಹಟಹಿಡಿದುದರಿಂದ ಇಬ್ಬರೂ ಶ್ರವಣಬೆಳಗೊಳಕ್ಕೆ ಬರುತ್ತಾರೆ. ಬೀರು ಕಲ್ಕುಡ ಗೋಮಟೇಶನ ಮೂರ್ತಿಯನ್ನು ನೋಡಿ ಅದರಲ್ಲಿ ಕೊರತೆಯನ್ನು ಕಾಣುತ್ತಾನೆ. ಇದರಿಂದ ನೊಂದ ಶಂಭು ಕಲ್ಕುಡ ಚೂರಿಯಿಂದ ತನ್ನ ಹೊಟ್ಟೆಯನ್ನು ಸೀಳಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಬೀರು ಕಲ್ಕುಡ ತುಳುನಾಡಿಗೆ ಹಿಂತಿರುಗುತ್ತಾನೆ. ಕಾರ್ಕಳದ ಅರಸರು ಅವನಿಗೆ ಗೊಮ್ಮಟನ ಪ್ರತಿಮೆ ನಿರ್ಮಿಸುವಂತೆ ಹೇಳುತ್ತಾರೆ.

ಆಗಬಹುದು ಅರಸುಗಳೆ ಎಂದ ಕಲ್ಕುಡ
ಪಡಿಯಕ್ಕಿ ಪಡೆದ ಬಿಡಾರ ಸೇರಿದ
ಮರುದಿನ ಮುಂಜಾನೆ ಎದ್ದ

ನಾಲ್ಕು ಕಡೆಯ ದೇವರ್ಕಳನ್ನು ನೆನೆದ ಕೆಲಸಕ್ಕೆ ತೊಡಗಿದ ಕಲ್ಕುಡ
ಬಸದಿಯ ಕೆಲಸಗೈದ ನೂರಿಪ್ಪತ್ತು ಬೊಂಬೆಗಳ ಕೆಲಸಗೈದ
ಒಂಬತ್ತು ದೇವರ್ಕಳ ಕೆಲಸಮಾಡಿದ
ಗುಮ್ಮಟಸ್ವಾಮಿಯ ಕೆಲಸಮಾಡಿದ
ನಿಮಗಾಗುವ ಕೆಲಸವಾಯಿತು ಒಡೆಯ ನನಗಾಗುವ ಬಹುಮಾನ ಕೊಡಿರೆಂದ
ಇಂದೀಗ ಮುಸ್ಸಂಜೆಯ ಹೊತ್ತಾಯಿತು ಕಲ್ಕುಡ
ನಾಳೆಯ ದಿನ ಬಾರೆಂದರು
ಮರುದಿನ ಹೋದ ಕಲ್ಕುಡ
ನನ್ನ ರಾಜ್ಯದಲ್ಲಿ ಕೆಲಸಗೈದ ಕಲ್ಕುಡ
ಬೇರೆ ರಾಜ್ಯದಲ್ಲಿ ಕೆಲಸಗೈಯಬಾರದೆಂದರು ಬೈರಸೂಡ
ಬಲಗೈಗೆ ಬಂಗಾರದ ಬಳೆ ತೊಡಿಸಿದರು ಎಡದ ಕೈತುಂಡರಿಸಿದರು
ಎಡದ ಕಾಲಿಗೆ ಕಡಗವಿಕ್ಕಿದರು ಬಲಗಾಲು ತುಂಡರಿಸಿದರು
ಕಡಿದ ಕೈಗೆ ಅಂಡೆ ಹಾಕಿಸಿದರು ಕಾಲಿಗೆ ಗುತ್ತಿ ಹಾಕಿಸಿದರು.

ಈ ಅನ್ಯಾಯದಿಂದ ಕೋಪಗೊಂಡ ಬೀರು ಕಲ್ಕುಡ ವೇಣೂರು ಅರಸರಲ್ಲಿಗೆ ಹೋಗಿ ಛಲದಿಂದ ಗೋಮಟೇಶ್ವರನ ಮೂರ್ತಿಯನ್ನು ನಿರ್ಮಿಸುತ್ತಾನೆ. ಆ ಸಮಯಕ್ಕೆ ತಂಗಿ ಕಾಳಮ್ಮ ಬೀರುವನ್ನು ಹುಡುಕುತ್ತಾ ವೇಣೂರಿಗೆ ಬರುತ್ತಾಳೆ. ಬೀರು ಕಲ್ಕುಡನನ್ನು ಕಾಣುತ್ತಾಳೆ.

ಅಣ್ಣನ ಮಡಿಲಿಗೆ ಬಿದ್ದಳು
ನಿನ್ನ ಕೈಯೇನಾಯಿತು ಅಣ್ಣಾ ನಿನ್ನ ಕಾಲೇನಾಯಿತು ಅಣ್ಣಾ ಎಂದಳು
ಯಾರಮ್ಮ ತಂಗಿ ಕೇಳಿದೆಯಾ
ಕದ್ದು ಅಲ್ಲ ಸುಳ್ಳಾಡಿ ಅಲ್ಲ ತಂಗಿ
ಮಾಡಲಾಗದ ಕೆಲಸಗೈದೆ ಕೊಡಬಾರದ ಬಹುಮಾನ ಕೊಟ್ಟರು ಎಂದ

ಅಣ್ಣನ ಮಡಿಲಿಂದ ಮೈಕೊಡವಿ ಎದ್ದಳು ಕಾಳಮ್ಮ
ಕಾಣುವಂತೆ ಗಾಸಿಗೈದ ಅರಸನನ್ನು ಮಾಯದಲ್ಲಿ ಹೋಗಿ ನೋಡಬೇಕು
ಜೋಗ ಬಿಟ್ಟು ಮಾಯಕ್ಕೆ ಸೇರುವ ಎಂದಳು
ಮೂರು ಸುತ್ತು ಬಂದರು ಮೂರು ಸಲ ಅರಚಿದರು
ಮಾದೇವರ ಅಂಗಳದಲಿ ಮಾಯಕವಾದರು

ಅನಂತರ ಅಣ್ಣತಂಗಿ ಮಾಯದಲ್ಲಿ ಕಾರ್ಕಳದ ಅರಸನನ್ನು ಕಾಡತೊಡಗುತ್ತವೆ. ಅವುಗಳನ್ನುನಿಯಂತ್ರಿಸಲು ಉಬಾರದ (ಉಪ್ಪಿನಂಗಡಿ) ವೈಲಾಯರು ಮುಂದೆ ಬರುತ್ತಾರೆ. ಅವರು ನೇಮ ಉತ್ಸವ ಕೊಡಿಸುತ್ತೇವೆ ಎಂದು ಭೂತಗಳೊಡನೆ ಅರಿಕೆ ಮಾಡುತ್ತಾರೆ. ಅದಕ್ಕೊಪ್ಪಿದ ಅಣ್ಣತಂಗಿಯರನ್ನು ವೈಲಾಯರು (ಮಂತ್ರ-ತಂತ್ರದಿಂದ ಬಂಧಿಸಿ) ಉಬಾರಿಗೆ ಕರೆತರುತ್ತಾರೆ. ಭೂತಗಳಿಗೆ ಕೊಟ್ಟಿಗೆ ಕಟ್ಟಿಸುತ್ತಾರೆ. ನೈವೇದ್ಯ ಅರ್ಪಿಸುತ್ತಾರೆ. ನೇಮ ಉತ್ಸವ ನಡೆಸುತ್ತಾರೆ. ಪೂಜೆಗಳನ್ನು ನಡೆಸಿಕೊಂಡು ಬರುತ್ತಾರೆ.

**ಕನ್ನಡಕ್ಕೆ - ಅಮೃತ ಸೋಮೇಶ್ವರ**

### ಲೇಖಕರ ಪರಿಚಯ



ಶ್ರೀ ಅಮೃತ ಸೋಮೇಶ್ವರರು ಮಂಗಳೂರು ಸಮೀಪದ ಕೋಟೆಕಾರು ಗ್ರಾಮದ ಅಡ್ಕ ಎಂಬಲ್ಲಿ 1935 ಸೆಪ್ಟೆಂಬರ್ 27ರಂದು ಜನಿಸಿದರು. ಇವರು ಕರಾವಳಿ ಕರ್ನಾಟಕದ ಯಕ್ಷಗಾನ, ಜಾನಪದ, ಭೂತರಾದನೆ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆ ನಡೆಸಿದ ವಿದ್ವಾಂಸರು. ಇವರು ಕಥೆ, ಸಣ್ಣ ಕಥೆ, ಕಾದಂಬರಿ, ನಾಟಕ, ವ್ಯಕ್ತಿ ಚಿತ್ರಣ, ಜನಾಂಗದ ಪರಿಚಯ, ರೇಡಿಯೋ ರೂಪಕ, ಸ್ವತಂತ್ರ ಗಾದೆ, ಯಕ್ಷಗಾನ ವಿಚಾರ ವಿಮರ್ಶೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿರುವರು. ಮಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಭಾಷಾ ಸನ್ಮಾನ ಪ್ರಶಸ್ತಿಯು 2016ರಲ್ಲಿ ಇವರಿಗೆ ಲಭಿಸಿತು. ಇವರು 2024 ಜನವರಿ 6 ರಂದು ನಿಧನರಾದರು.

### ವಿಶದೀಕರಣ :

**ಕಲ್ಕುಡನ 6 ಮಕ್ಕಳು** - ಎಲ್ಯಣ್ಣಚ್ಚವ, ಮಲ್ಲಣ್ಣಚ್ಚವ, ಬೀರು, ಬಿಕುರು, ನಂದು, ತಂಗಿ - ಕಾಳಮ್ಮ.

**ಐದು ಮಕ್ಕಳಿಗೆ ಐದು ವಿಧದ ಕೆಲಸ** - ಮರದ ಕೆಲಸ, ಬಂಗಾರದ ಕೆಲಸ, ಕಬ್ಬಿಣದ ಕೆಲಸ, ತಾಮ್ರದ ಕೆಲಸ, ಕಲ್ಲಿನ ಕೆಲಸ.

## ಚಟುವಟಿಕೆಗಳು

### ಉತ್ತರಿಸಿರಿ

1. ಬೀರುಕಲ್ಕುಡನ ಸಹೋದರರು ಯಾವ ಯಾವ ಕೆಲಸಗಳನ್ನು ಮಾಡುತ್ತಿದ್ದರು?
2. ಬೆಳ್ಗೊಳದ ಅರಸ ಶಂಭು ಕಲ್ಕುಡನನ್ನು ಹೇಗೆ ಸನ್ಮಾನಿಸಿದರು?
3. ಜೋಗ ಬಿಟ್ಟು ಮಾಯವಾಗುವ ಎಂದು ಕಾಳಮ್ಮ ಬೀರು ಕಲ್ಕುಡನಲ್ಲಿ ಹೇಳಲು ಕಾರಣವೇನು?
4. ಯಾರಿಂದಲೂ ಸಾಧ್ಯವಾಗದ ಯಾವ ಕೆಲಸವನ್ನು ಬೀರು ಕಲ್ಕುಡನು ಮಾಡಿದನು?

### ಕಥೆಯ ರೂಪದಲ್ಲಿ ಬರೆಯಿರಿ

ಪಾಡ್ದನ ರೂಪದಲ್ಲಿರುವ ಪದ್ಯ ಭಾಗವನ್ನು ಕಥೆಯ ರೂಪದಲ್ಲಿ ಬರೆಯಿರಿ.

### ಅಭಿಪ್ರಾಯ ಟಿಪ್ಪಣಿ ಬರೆಯಿರಿ

ಬೀರುಕಲ್ಕುಡನ ಕೈಕಾಲು ಕತ್ತರಿಸಿದುದು ಸರಿಯೇ? ಚರ್ಚಿಸಿ ಅಭಿಪ್ರಾಯ ಟಿಪ್ಪಣಿಯನ್ನು ಬರೆಯಿರಿ

### ಸಂಭಾಷಣೆ ಬರೆಯಿರಿ

ಬೀರುಕಲ್ಕುಡ ಮತ್ತು ಅವನ ತಾಯಿಯ ನಡುವೆ ನಡೆದ ಸಂಭಾಷಣೆಯನ್ನು ಬರೆಯಿರಿ.

### ಸಂದರ್ಶನ ಪ್ರಶ್ನಾವಳಿ

ನಿಮ್ಮ ಊರಿನಲ್ಲಿರುವ ಓರ್ವ ಜನಪದ ಕಲಾವಿದರನ್ನು ಕರೆಸಿ ಜನಪದ ಕಲೆಯ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆಯುವ ಸಲುವಾಗಿ ಅಗತ್ಯವಿರುವ ಸಂದರ್ಶನ ಪ್ರಶ್ನಾವಳಿಯನ್ನು ತಯಾರಿಸಿರಿ.

## ವಾಕ್ಯ ರಚಿಸಿರಿ

ಈ ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದದ ವಿರುದ್ಧಾರ್ಥ ಪದವನ್ನು ಬಳಸಿ ವಾಕ್ಯ ರಚಿಸಿರಿ.

1. ಪೊಲೀಸರು <u>ನ್ಯಾಯ</u> ಮಾರ್ಗದಲ್ಲಿ ನಡೆಯುವವರನ್ನು ರಕ್ಷಿಸುತ್ತಾರೆ.
2. ವಾಹನವನ್ನು <u>ವೇಗ</u>ವಾಗಿ ಚಲಾಯಿಸುವುದು ಅಪಘಾತಕ್ಕೆ ಆಹ್ವಾನವಿತ್ತಂತೆ.
3. ಸೂರ್ಯೋದಯವಾಗುತ್ತಿದ್ದಂತೆ ಆಕಾಶದಲ್ಲಿರುವ ನಕ್ಷತ್ರಗಳು <u>ಅಗೋಚರ</u>ವಾಗುತ್ತವೆ.

## ವಿಶೇಷಾರ್ಥ ಬರೆಯಿರಿ

'ಮಾಡಲಾಗದ ಕೆಲಸಗೈದೆ ಕೊಡಬಾರದ ಬಹುಮಾನ ಕೊಟ್ಟರು'

ಈ ಸಾಲು ಸೂಚಿಸುವ ವಿಶೇಷಾರ್ಥವನ್ನು ಬರೆಯಿರಿ. ಇಂತಹ ಸಾಲುಗಳನ್ನು ಪದ್ಯದಿಂದ ಹುಡುಕಿ ಬರೆಯಿರಿ.

## ಪದ ವಿಹಾರ

ಇದೊಂದು ಭಾಷಾ ಆಟವಾಗಿದೆ. ಕೊಟ್ಟಿರುವ ಅಕ್ಷರಗಳನ್ನು ಜೋಡಿಸಿ ಅರ್ಥವತ್ತಾದ ಪದಗಳನ್ನು ರಚಿಸಿರಿ. ಪ್ರತಿಯೊಂದು ಪದದಲ್ಲಿ ಉರುಟು ಹಾಕಿರುವ ಅಕ್ಷರಗಳಲ್ಲಿ ತುಳುನಾಡಿನ ವೀರರಿಬ್ಬರು ಅಡಗಿದ್ದಾರೆ. ಅವರಾರೆಂದು ಕಂಡುಹಿಡಿಯಿರಿ.

1. ಜ (ಟಿ) ಕ ಆ ಳಂ
2. ಗ ನ್ನಿ (ಯ) ರಾ ಚೆ
3. ಲಾ (ಕೋ) ಟ
4. ಣೆ ನ್ನೆ ಮ (ಚೆ)
5. ತ (ನ್ನ) ದಾ ಅ

| | | | | |
|---|---|---|---|---|
| | | | | |

# ನಮ್ಮ ಊರಿನ ರಸಿಕರು

ನಮ್ಮ ಊರು ಮಲೆನಾಡಿನ ಸೆರಗಿನಲ್ಲಿದೆ. ಮಲೆನಾಡಿನ ಸೂರ್ಯರಶ್ಮಿಯಿಲ್ಲದ ಮಿತಿಮೀರಿದ ಜಡಿಮಳೆಯೂ, ಕೆಸರೂ, ಮೈಯನ್ನು ಕಡಿಯುವ ಕುಳಿರ್ಗಾಳಿಯೂ ಅಲ್ಲಿಲ್ಲ. ಬಯಲು ಸೀಮೆಯ ಉರಿಬಿಸಿಲೂ, ಬೆಂಕಿಯ ಕಾದ ಧೂಳೂ ಅಲ್ಲಿಲ್ಲ. ಮಲೆನಾಡಿನ ಮಳೆಯ ಕೊಂಚ ಭಾಗ ಮಾತ್ರ ನಮ್ಮೂರಿಗೆ ಬೀಳುತ್ತದೆ. ಬೇಸಗೆಯ ಉರಿಬಿಸಿಲಿನ ತುದಿ ಮಾತ್ರ ಈ ಸೆರಗನ್ನು ಸೋಕುತ್ತದೆ. ಹಸುರಾದ ಚಿಗುರಿನಿಂದ ಕೂಡಿದ ಮರದ ಮಧ್ಯದಲ್ಲಿ ಎಲ್ಲೋ ಹಕ್ಕಿಯೊಂದು ಕೂಗುತ್ತಿದ್ದರೆ, ಎಲೆಗಳ ಮರೆಯಲ್ಲಿ ಹೂ ಒಂದು ಅರಳಿ ಸುವಾಸನೆಯನ್ನು ಹೊರಕ್ಕೆ ಸೂಸುತ್ತಿದ್ದರೆ ಹೇಗೋ ಹಾಗೆ, ನಮ್ಮ ಊರು ಸುತ್ತಲೂ ಬೆಳೆದಿರುವ ಸುಮಾರಾಗಿ ಎತ್ತರವಾಗಿರುವ ಮರಗಳ ಮಧ್ಯದಲ್ಲಿ ಹೆಚ್ಚು ಬಾಹ್ಯಾಡಂಬರವಿಲ್ಲದೆ ನಿಂತಿದೆ. ಊರಿನಿಂದ ಅರ್ಧಮೈಲು ಹೊರಕ್ಕೆ ಹೋದರೆ ನಮ್ಮೂರು ಎಲ್ಲಿದೆ ಎಂಬುದು ನಮಗೇ ತಿಳಿಯುವುದಿಲ್ಲ. ಆಗ ಅದು ಮರಗಳ ಮಧ್ಯದಲ್ಲಿ ಮುಚ್ಚಿಹೋಗುತ್ತದೆ. ನಮ್ಮ ಊರಿನ ಸುತ್ತ ಇಂತಹ ನೂರಾರು ತೋಪುಗಳಿರುವುದರಿಂದ, ಯಾವುದರ ಮಧ್ಯದಲ್ಲಿ ನಮ್ಮ ಊರು ಇದೆ ಎಂಬುದನ್ನು ಕಂಡುಹಿಡಿಯುವುದು ಕಷ್ಟವಾಗುತ್ತದೆ. ಆದರೆ ಮನೆಗಳಿಂದ ಹೊರಡುವ ಹೊಗೆ ಇದೆಯಲ್ಲ ಅದೇ ನಮ್ಮೂರಿನ ಕೈಮರ.

ನಮ್ಮ ಊರು ಚಿಕ್ಕದಾದರೂ ಅದರಲ್ಲಿ ಪ್ರಕೃತಿಯ ಬಗೆಬಗೆಯ ಬೆಡಗುಗಳು ಅಡಕವಾಗಿವೆ. ಊರ ಮುಂದೆ ಹರಿಯುವ ಹೇಮಾವತಿ ನದಿ, ಅದರ ತೀರದಲ್ಲಿ ಉದ್ದಕ್ಕೂ ಬೆಳೆದಿರುವ ಸಣ್ಣ ಸಣ್ಣ ತೋಪುಗಳು, ಬೇರೆ ಬೇರೆ ಕಡೆಗಳಲ್ಲಿ ತೋರುವ ಸೋಪಾನಗಳು, ಸೇತುವೆ, ನದಿಯಿಂದ ಒಂದು ಫರ್ಲಾಂಗ್ ಊರಿನ ಕಡೆಗೆ ಕೋಟೆಯ ಕಾಲಬುಡದಲ್ಲಿ ಹರಿಯುವ ತಿಳಿನೀರಿನ ಕಾಲುವೆ, ಕಾಲುವೆಗೂ ನದಿಗೂ ನಡುವೆ ಹಸುರು ಬಟ್ಟೆಯನ್ನು ಹಾಸಿದಂತೆ ಪಚ್ಚೆಯಾದ ಪೈರಿನ ಬಯಲು, ಕಾಲುವೆಯ ಒಂದು ಕಡೆ ಪೇಟೆ, ಮತ್ತೊಂದುಕಡೆ ಕೋಟೆ, ಊರೊಳಗಿನ ದೇವಸ್ಥಾನದ ಮುಂದಲ ತಿಳಿನೀರಿನ ಕೊಳ, ನಾನಾ ವಿಧವಾದ ಹೂಗಳಿಂದ ಕೂಡಿದ ಮುಂದಲ 'ಶೃಂಗಾರ ತೋಟ'ವೆಂಬ ಉದ್ಯಾನ, ಊರಿನಿಂದ ಪೂರ್ವಕ್ಕೂ ಪಶ್ಚಿಮಕ್ಕೂ ಎದ್ದು ತೋರುವ ತೋಟಗಳು, ಊರಿನ ಸುತ್ತ ಚಿಕ್ಕ ಚಿಕ್ಕ ಕಾಡುಗಳು, ಬೆಟ್ಟಗುಡ್ಡಗಳು - ಇವುಗಳನ್ನೆಲ್ಲಾ ನೋಡಿ ನಾವೂ ನಮ್ಮ ಮಿತ್ರರನೇಕರೂ ನಮ್ಮ ಊರಿಗೆ ಪ್ರಕೃತಿ ದೇವಿಯು ಹೆಚ್ಚಾದ ದಯವನ್ನು ತೋರಿಸಿದ್ದಾಳೆಂದು ತಿಳಿದುಕೊಂಡಿದ್ದೇವೆ.



ನಮ್ಮ ಊರಿನಲ್ಲಿ ಸಾಮಾನ್ಯವಾಗಿ ಯಾರೂ ಬೆಳಗ್ಗೆ ಬಹಳ ಹೊತ್ತಿನವರೆಗೆ ಮಲಗುವುದಿಲ್ಲ. ಇದು ನಮ್ಮ ಹೆಂಗಸರು ಮಾಡಿರುವ ಉಪಾಯ ಅವರು ಐದು ಗಂಟೆಗೆ ಎದ್ದು, ಒಲೆಹೊತ್ತಿಸಿ, ಬಿಸಿನೀರು ಕಾಯಿಸಿ, ಕಾಫಿ ಕಾಯಿಸಿ, ದೋಸೆಯನ್ನು "ಚೊಯ್" ಎನ್ನಿಸಿದ ಕೂಡಲೇ ಇನ್ನೂ ಅರ್ಧ ಗಂಟೆ ಮಲಗಬೇಕೆಂದಿರುವ ನಾವೆಲ್ಲಾ ಎದ್ದು ಸ್ನಾನಮಾಡಿ ಕಾಫಿ ಕುಡಿಯುತ್ತೇವೆ. ಅನಂತರ ಹೆಂಗಸರು ಮುಸುರೆ ಪಾತ್ರೆಗಳನ್ನು ತುಂಬಿಕೊಂಡು ಒಬ್ಬರನ್ನೊಬ್ಬರು ಕರೆದುಕೊಂಡು ಹೊಳೆಗೆ ಹೋಗುತ್ತಾರೆ. ಅಲ್ಲಿ ಅವರದೇ ಪ್ರಪಂಚ ಅಲ್ಲಿ ಅವರು ಎಷ್ಟು ಸ್ವತಂತ್ರರಾಗಿರುತ್ತಾರೆ! ನದಿಯ ಅಲೆಯು ಮತ್ತಷ್ಟು ಎದ್ದು ಕುಣಿಯುವಂತೆ ಹೇಗೆ ಕಿಲಕಿಲ ಧ್ವನಿಯಲ್ಲಿ ನಗುತ್ತಾರೆ! ತಮ್ಮ ದೇಹವನ್ನು ಹೇಮಾವತಿಯ ಶೀತಲವಾದ ಜಲದಲ್ಲಿ ಮುಳುಗಿಸಿ ಹೇಗೆ ಉಲ್ಲಾಸವನ್ನೂ ಆನಂದವನ್ನೂ ತೋರಿಸುತ್ತಾರೆ! ಅವುಗಳನ್ನೆಲ್ಲಾ ವರ್ಣಿಸುವುದಕ್ಕಾಗುವುದಿಲ್ಲ. ನಮ್ಮ ಊರಿನಲ್ಲಿ ಬ್ರಾಹ್ಮಣರು, ಶೂದ್ರರು, ಸಾಹೇಬರು ಎಲ್ಲರೂ ಆರಂಭಗಾರರೆ. ಎಲ್ಲರೂ ಹೇಗೆ ಹೇಗೋ ಮಾಡಿ ವರ್ಷಕ್ಕೆ ಸಾಕಾಗುವಷ್ಟು ನವರಾತ್ರಿ, ಉಗಾದಿ, ಮೊಹರಂ ಹಬ್ಬಗಳಲ್ಲಿ ಆನಂದದಿಂದ ಕುಣಿದಾಡಲು ಬೇಕಾಗುವಷ್ಟು, ಪೈರನ್ನು ಬೆಳೆಯುತ್ತಾರೆ. ಶಾಲು ಸಾಬಿ ಒಬ್ಬನ ಆರಂಭ ಮಾತ್ರ ದೇವರೇ ಗತಿ.

ಇವನಿಗೆ ಶಾಲು ಸಾಬಿ ಎಂದು ಹೆಸರು ಬರಲು ಒಂದು ಕಾರಣವಿದೆ. ಅವನು ಬೇಸಿಗೆ ಕಾಲದಲ್ಲೂ, ಮಳೆಗಾಲದಲ್ಲೂ ಯಾವಾಗಲೂ ಒಂದು ಶಾಲು ಹೊದೆದೇ ಇರುತ್ತಾನೆ. ಹಗಲು, ರಾತ್ರಿ ಗದ್ದೆಗೆ ಹೋಗುವಾಗ, ಹಳ್ಳಿಗೆ ಹೋಗುವಾಗ, ನಮಾಜು ಮಾಡುವಾಗ ಮತ್ತು ಕೋರ್ಟಿಗೆ ಹೋಗುವಾಗ ಯಾವಾಗಲೂ ಇವನು ಶಾಲು ಹೊದೆಯುವುದನ್ನು ಮರೆತವನಲ್ಲ. ಆದುದರಿಂದ ಇವನನ್ನು ಹುಡುಗರು 'ಶಾಲು ಸಾಬಿ' ಎಂದು ಹಾಸ್ಯಮಾಡುತ್ತಾರೆ. ನದಿಯ ದಾರಿಯಲ್ಲಿ ಪ್ರತಿದಿನವೂ ಶಾಲು ಸಾಬಿಯು ಮನೆಯ ಬಾಗಿಲಲ್ಲಿ ಕುಳಿತು ಮಕ್ಕಳನ್ನೂ, ಆಳುಗಳನ್ನೂ ಬಯ್ದದ್ದು ಬಯ್ದದ್ದೇ ಆದರೆ ಅವನೂ ಹೇಗೊ ವರ್ಷಕ್ಕಾಗುವಷ್ಟನ್ನು ಮೊಹರಂ ಹಬ್ಬದಲ್ಲಿ ಜರಿಯ ಬಟ್ಟೆಗಳನ್ನು ಮೆರೆಯಿಸಲು ಒದಗುವಷ್ಟನ್ನು ಬೆಳದೇ ಬೆಳೆಯುತ್ತಾನೆ.

ಬೆಳಗಾಗುವ ವೇಳೆಗೆ ತಮ್ಮ ಗುಡಾಣದಂತಹ ಹೊಟ್ಟೆಗೆ ಸಡಿಲವಾಗಿ ಕೆಳಕ್ಕೆ ಜಾರುತ್ತಿರುವಂತೆ ಪಂಚೆಯನ್ನು ಬಿಗಿದುಕೊಂಡು, ಕಿವಿಗೆ ಮಾವಿನ ಎಲೆಯನ್ನೂ ಜನಿವಾರವನ್ನೂ ಸುತ್ತಿಕೊಂಡು, ನದಿಯ ಕಡೆಗೆ ಹೋಗುತ್ತಿರುವ ಶಾಸ್ತ್ರಿಗಳನ್ನು ಕಾಣಬಹುದು. ಊರ ಮುಂದಿನ ಚಾವಡಿಯ ಮೇಲೆ ಬೋರೇಗೌಡನು ಶ್ಯಾನುಭೋಗರೊಂದಿಗೆ ಟಿಪ್ಪು ಸುಲ್ತಾನನ ಕಾಲದ ಕಗ್ಗಗಳನ್ನು ಹೇಳುತ್ತಾ, ಮಧ್ಯೆ ಮಧ್ಯೆ ನಗುತ್ತಿರುತ್ತಾನೆ. ರೈತರು ಹೆಗಲಿನ ಮೇಲೆ ನೇಗಿಲನ್ನು ಹಾಕಿಕೊಂಡು ಎತ್ತುಗಳ ಜತೆಯಲ್ಲಿ ಕಿರುದನಿಯಲ್ಲಿ ಹಾಡುತ್ತಾ ಹೊಲಗದ್ದೆಗಳಿಗೆ ಹೋಗುತ್ತಾರೆ. ನಮ್ಮ ಮನೆಯ ಹಿತ್ತಲ ಬಾವಿಯ ಕಟ್ಟೆಯ ಮೇಲೆ ನಿಂತುಕೊಂಡು ಶೂದ್ರರ ಕೇರಿಯ ಕಡೆಗೆ ನೋಡಿದರೆ, ರಂಗೇಗೌಡನು ಆಗ ತಾನೆ ಮುಖವನ್ನು ತೊಳೆದು ಸೂರ್ಯನ ಕಡೆಗೆ ಕೈಮುಗಿಯುತ್ತಿರುತ್ತಾನೆ. ಒಳಗೆ ಅವನ ಹೆಂಡತಿ ರಾಟೆಯಲ್ಲಿ ಕುರಿಯ ತುಪ್ಪಟವನ್ನು ನೂಲಲು ಪ್ರಾರಂಭಿಸಿರುತ್ತಾಳೆ. ಅರ್ಚಕನು ದೇವಸ್ಥಾನದಲ್ಲಿ ಹೊಡೆಯುತ್ತಿರುವ ಗಂಟೆಯು ನಮಗೆ ಕೇಳಿಸುವುದು. ನಾವು ಎದ್ದು ಬಾಗಿಲಿನಲ್ಲಿ ಕಣ್ಣು ಹೊಸಕುತ್ತಾ ನಿಂತುಕೊಳ್ಳುವ ವೇಳೆಗೆ ನಮ್ಮ ಭಾವನವರು ನದಿಯಲ್ಲಿ ಸ್ನಾನಮಾಡಿ 'ಗೋವಿಂದೇತಿ ಸದಾ ಧ್ಯಾನಂ ಗೋವಿಂದೇತಿ ಸದಾ ಜಪಂ' ಹೇಳುತ್ತಾ ದಪ್ಪ ತಾಮ್ರದ ಚೆಂಬಿನಲ್ಲಿ ನೀರನ್ನು ತುಂಬಿಕೊಂಡು ಮನೆಗೆ ಬರುತ್ತಾರೆ. ಗಂಡನು ಅರು ಕಟ್ಟಿಕೊಂಡು ಹೋದ ಮೇಲೆ, ರೈತರ ಹೆಂಗಸರು ಕುಕ್ಕೆಗಳಲ್ಲಿ ಕಸವನ್ನು ಹೊತ್ತುಕೊಂಡು, ಹೊಲದ ಗುಂಡಿಗಳಿಗೆ ಹಾಕಿ ಬರುತ್ತಾರೆ. ಉಳಿದವರು ನದಿಗೆ ಹೋಗಿ ಕೈಗಳ ಕಡಗಗಳ ಸದ್ದಿನೊಂದಿಗೆ ಗಡಿಗೆಗಳನ್ನು ತೊಳೆದು ನೀರನ್ನು ತುಂಬಿಕೊಂಡು ಬರುತ್ತಾರೆ. ರೈತರ

ಹುಡುಗರೂ, ಹುಡುಗಿಯರೂ ದನಗಳನ್ನು ಮೇಯಿಸುವುದಕ್ಕೆ ಹೊಡೆದುಕೊಂಡು ಹೋಗುತ್ತಾ, ಅವುಗಳ ಕತ್ತಿನ ಗಂಟೆಯ ಧ್ವನಿಯಲ್ಲಿ ತಮ್ಮ ಧ್ವನಿಗಳನ್ನೂ ಸೇರಿಸಿ ಹಾಡುತ್ತಾರೆ. ನದಿಯ ಆಚೆ, ಗುಡ್ಡದ ತಪ್ಪಲಿನಲ್ಲಿ ದನಗಳು ಮೇಯುತ್ತಾ ಇವೆ.

ನಮ್ಮ ಊರಿನ ನಿತ್ಯಜೀವನದ ಒಂದೇ ವಿಧವಾದ ಬೇಸರಿಕೆಯನ್ನು ಹೋಗಲಾಡಿಸುವ ಸಾಧನಗಳಲ್ಲಿ ನಮ್ಮ ಊರ ಬಸ್ಸು ಒಂದು. ಬಸ್ಸು ನಮ್ಮೂರಿಗೆ ಗಡಿಯಾರದ ಹಾಗೆ. ಅದು ಮೂರು ಸಲ ನಮ್ಮೂರಿಗೆ ಬರುತ್ತದೆ. ಬೆಳಿಗ್ಗೆ ಎಂಟು ಗಂಟೆಗೆ ಮೊದಲನೆಯ ಸಲ. ಇದು ಹೆಂಗಸರಿಗೆಲ್ಲಾ ನದಿಗೆ ಪಾತ್ರೆ ಬೆಳಗುವುದಕ್ಕೂ, ಬಟ್ಟೆ ಒಗೆಯುವುದಕ್ಕೂ ಹೋಗುವುದಕ್ಕೆ ಗುರುತು. ಬಸ್ಸು ಎರಡನೆಯ ಸಲ ಮಧ್ಯಾಹ್ನದ ಒಂದು ಗಂಟೆಗೆ ಬರುತ್ತದೆ. ಇದು ಎಲ್ಲರಿಗೂ ಊಟದ ಕಾಲ. ಮಧ್ಯಾಹ್ನದ ಬಸ್ಸು ಬಂದ ಕೂಡಲೇ "ಬಸ್ಸು ಬಂತು. ಗಂಡಸರೆಲ್ಲಾ ಊಟಕ್ಕೆ ಬರುತ್ತಾರೆ" ಎಂಬುದಾಗಿ ಸ್ತ್ರೀಯರು ತಮ್ಮ ತಮ್ಮ ಮನೆಗಳಿಗೆ ಓಡುತ್ತಾರೆ. ಸಾಯಂಕಾಲದ ಬಸ್ಸು ಸುಮಾರು ಆರುವರೆ ಗಂಟೆಗೆ ಬರುತ್ತದೆ. ಇದು, ಜೋಡಿದಾರರ ಮನೆಯ ಬಾಗಿಲಿನಲ್ಲಿ ಎಲೆಹಚ್ಚುತ್ತಾ. ಮಾತನಾಡುತ್ತಾ, ಹಾಡುಗಳನ್ನು ಹಾಡುತ್ತಾ : ಕುಳಿತಿರುವ ಹೆಂಗಸರಿಗೆ, ಮನೆಗೆ ಹೋಗುವುದಕ್ಕೆ ಸೂಚನೆ. ಅರ್ಚಕನು ಸಾಯಂಕಾಲದ ಬಸ್ಸು ಬಂದ ಕೂಡಲೆ



ದೇವಸ್ಥಾನಕ್ಕೆ ಪೂಜೆಗೆ ಹೋಗುತ್ತಾನೆ. ಬೆಟ್ಟಗುಡ್ಡಗಳಲ್ಲಿ ಮೇಯುತ್ತಿರುವ ದನಗಳನ್ನೂ, ಕುರಿ ಆಡುಗಳನ್ನೂ ಹೊಡೆದುಕೊಂಡು ಒಕ್ಕಲಿಗರ ಹುಡುಗರೂ ಹುಡುಗಿಯರೂ ಮನೆಗಳಿಗೆ ಬರುತ್ತಾರೆ.

ಮಳೆಗಾಲದಲ್ಲಿ ಒಂದು ತಿಂಗಳು ಜಡಿಮಳೆ ಹಿಡಿಯುತ್ತದೆ. ಆಗ ಬೀದಿಗೆ ತಲೆಹಾಕುವುದಕ್ಕೆ ಆಗುವುದಿಲ್ಲ. ಆದರೆ ನಮ್ಮ ರೈತರು ಬಹಳ ಕಷ್ಟ ಜೀವಿಗಳು, ತಾವು ಮಾಡಬೇಕಾದ ಕೆಲಸವನ್ನು ಅವರು ಯಾವಾಗಲೂ ಬಿಡುವುದಿಲ್ಲ. ಇಂತಹ ಕಷ್ಟಜೀವಿಗಳಲ್ಲಿ ರಂಗೇಗೌಡ ಒಬ್ಬ. ಅವನು ಮಳೆ 'ಜರೋ' ಎಂದು ಹೊಡೆಯುತ್ತಿದ್ದರೂ ರಂಗೇಗೌಡ ಮಂಡಿಯುದ್ದ ಕೆಸರಿನ ಗದ್ದೆಯಲ್ಲಿ ಮಧ್ಯಾಹ್ನದವರೆಗೆ ತಿರುಗುತ್ತಾನೆ. ತಲೆಗೊಂದು ಹರಕು ಗೋಣಿಯ ಚೀಲ, ಅದೇ ಅವನ ಛತ್ರಿ. ಮೈಗೆ ಒಂದು ಕರಿಯ ಕಂಬಳಿ, ಸೊಂಟದಿಂದ ಕೆಳಕ್ಕೆ ನಾಲ್ಕು ಮೊಳದ್ದು ಒಂದು ದಟ್ಟಿ ಇರುತ್ತದೆ. ರಂಗೇಗೌಡನು ಹೊತ್ತಿಗೆ ಮುಂಚೆ ಎದ್ದು, ಮುಖ ತೊಳೆದುಕೊಂಡು, ಸೂರ್ಯನಿಗೆ ನಮಸ್ಕಾರ ಮಾಡಿ, ಉಪ್ಪಿಟ್ಟು ತಿಂದು ಕೆಲಸಕ್ಕೆ ಹೊರಡುತ್ತಾನೆ.

ರಂಗೇಗೌಡನು ಮಂಡಿಯುದ್ದ ಕೆಸರಿನಲ್ಲಿ ಗದ್ದೆ ಉಳಲು ಪ್ರಾರಂಭಿಸುತ್ತಾನೆ. ಅವನ ಒಂದೇ ಗುರಿ ಗದ್ದೆಯನ್ನುಳುವುದು. ಅದನ್ನು ಉತ್ತ ಹೊರತು ಅವನು ಬೇರೆ ವಿಷಯಗಳನ್ನು ಕುರಿತು ಆಲೋಚನೆಯನ್ನು ಸಹ ಮಾಡುವುದಿಲ್ಲ, ಅವನು ಸೋಮಾರಿಯಾದರೆ ಪ್ರಪಂಚದ ಹೊಟ್ಟೆಯನ್ನು ತುಂಬುವವರಾರು! ಅವನ ಮನೆಯಲ್ಲಿ ಒಂದು ಮಗುವೂ ಸೋಮಾರಿಯಲ್ಲ. ಅದುದರಿಂದ ನಾಲ್ಕು ಮಕ್ಕಳಿರುವ ಒಕ್ಕಲಿಗನು ಹೆಚ್ಚು ಜಮೀನನ್ನು ಸಾಗುವಳಿ ಮಾಡಿ ಜೀವನ ಮಾಡಿಕೊಳುತ್ತಾನೆ.

ರಂಗೇಗೌಡನ ಜೀವನವು ಸುಂದರವೂ ಸರಳವೂ ಆದುದು. ಅವನು ಯಾವಾಗಲೂ ಆರೋಗ್ಯದ ದೃಢಕಾಯ. ಹೊತ್ತಾರೆ ಎದ್ದು ತಂಗಳು ತಿಂದು ಹೊಲದಲ್ಲಿಯೋ ಗದ್ದೆಯಲ್ಲಿಯೋ ಹೋಗಿ ಅವನು ಉಳುತ್ತಿದ್ದರೆ ಅವನ ಹೆಂಡತಿಯು ಅಲ್ಲಿಗೆ ಹಿಟ್ಟನ್ನು ತರುತ್ತಾಳೆ. ರೈತರಿಗೆಲ್ಲಾ ಹೊಲ ಗದ್ದೆಗಳಿಗೆ ಹಿಟ್ಟು ಬರುತ್ತದೆ. ಅವನ ಹೆಂಡತಿಯ ತಲೆಯ ಮೇಲೆ ಒಂದು ಕುಕ್ಕೆ, ಅದರಲ್ಲಿ ಊಟ ಮಾಡುವ ಒಂದು ತಟ್ಟೆ. ಎರಡು ಹಿಟ್ಟಿನ ಮುದ್ದೆ, ಎಸರು, ಇಲ್ಲದಿದ್ದರೆ ಅನ್ನ-ತಾಳು ಮಜ್ಜಿಗೆ, ರೈತನಿಗೆ ಹೆಚ್ಚಾಗಿ ಕಾಯಿಲೆ ಬಾರದಿರುವುದಕ್ಕೆ ಇನ್ನೊಂದು ಗುಟ್ಟನ್ನು

ನಾವು ತಿಳಿಯಬೇಕು. ಅವನಿಗೆ ಆಹಾರವು ಬಹಳ ನಿಯಮ. ನಿಯಮಿತ ಕಾಲದಲ್ಲಿ ಹೊರತು ಅವನು ಉಳಿದ ಕಾಲಗಳಲ್ಲಿ ನಮ್ಮಂತೆ ಸಿಕ್ಕಿದುದನ್ನು ಮೆಲಕು ಮಾಡುವುದಿಲ್ಲ.

ಮಾದನು ಎಲೆ, ಅಡಿಕೆಗಾಗಿ ಊರೆಲ್ಲಾ ಸುತ್ತಿರುವುದನ್ನು ನಾನೂ ಗುಂಡನೂ ಕಂಡಿದ್ದೇವೆ. ಮಾದನಿಗೆ ಎಲೆ, ಅಡಿಕೆಯ ಹುಚ್ಚು ಬಹಳ. ಹೊಲದಲ್ಲಿ ಆರು ಕಟ್ಟಿ ಉಳುತ್ತಿರುವಾಗ ದೂರದಲ್ಲಿ ಯಾರನ್ನಾದರೂ ಕಂಡರೆ ಸರಿ ಆರನ್ನು ಅಲ್ಲಿಯೇ ನಿಲ್ಲಿಸಿ, ಅವರ ಬಳಿಗೆ ಓಡಿಹೋಗಿ ಎಲೆ, ಅಡಿಕೆ ಕೇಳುತ್ತಾನೆ. ಪಟ್ಟಣಗಳಲ್ಲಿ ಇರುವವರಿಗೆ ಹಳ್ಳಿಯವರು ಎಷ್ಟು ಎಲೆ, ಅಡಿಕೆ ಹಾಕುತ್ತಾರೆಂಬುದೇ ಗೊತ್ತಾಗುವುದಿಲ್ಲ. ಪಟ್ಟಣಿಗರೇನೋ ಒಂದು ಕವಳಿಗೆ ಎಲೆ, ಜಾಯಿಕಾಯಿ, ಲವಂಗ, ಕೊಬ್ಬರಿ ಹಾಕಿದ ಅಡಕೆ-ಇವನ್ನು ಆಡು ಎಲೆ ಅಗಿಯುವಂತೆ ಅಗಿದು ನುಂಗಿಬಿಡುತ್ತಾರೆ. ಹಳ್ಳಿಯವರು ಹೀಗೆ ಎಲೆ, ಅಡಿಕೆ ಹಾಕಿಕೊಳ್ಳುವುದಿಲ್ಲ. ಅವರು ಎಲೆ, ಅಡಕೆಯ ವಿಷಯದಲ್ಲಿ ಬಹಳ ನಿಯತವಾದ ಒಂದು ಕ್ರಮವನ್ನು ಅನುಸರಿಸುತ್ತಾರೆ.

ಮಾದನು ಹೀಗೆ ದಿವಸಕ್ಕೆ ಆರು ಏಳು ಸಲ ಎಲೆ ಹಾಕಿಕೊಳ್ಳುತ್ತಾನೆ. ಬಿಸಿಲಿನಲ್ಲಿ ಕೆಲಸ ಮಾಡಿ ಬಳಲಿ ಸೋತ ನಂತರ, ಅವನು ಈರುಳ್ಳಿ ಬೋಂಡಾವನ್ನೂ ಪಕೋಡಾವನ್ನು ಹತ್ತು ಹನ್ನೆರಡು ಸೀಸೆ ಲೈಮ್ ಜೂಸ್ ಅಥವಾ ಟೀ ಕಾಫಿಗಳನ್ನೂ ಹೊಟ್ಟೆಗೆ ಭರ್ತಿಮಾಡಿಕೊಳ್ಳದೆ ಇರುವುದಿಲ್ಲ.

**ಗೊರೂರು ರಾಮಸ್ವಾಮಿ ಅಯ್ಯಂಗಾರ್**

(ನಮ್ಮ ಊರಿನ ರಸಿಕರು - ಪ್ರಬಂಧ ಸಂಕಲನ)

## ಲೇಖಕರ ಪರಿಚಯ



ಡಾ.ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು 1904ರ ಜುಲೈ4ರಂದು ಹಾಸನ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಜನಿಸಿದರು. ಪ್ರಬಂಧ, ಕಥೆ, ಕಾದಂಬರಿ ಪ್ರವಾಸ ಕಥನ, ವಿಮರ್ಶೆ, ಭಾಷಾಂತರ, ಜೀವನ ಚರಿತ್ರೆ, ಹೇಮಾವತಿ, ಪುನರ್ಜನ್ಮ, ಮೆರವಣಿಗೆ, ಊರ್ವಶಿ ಮುಂತಾದ ಕಾದಂಬರಿಗಳನ್ನು, ಹಳ್ಳಿಯ ಚಿತ್ರಗಳು, ಬೈಲಹಳ್ಳಿ ಸರ್ವೆ, ಶಿವರಾತ್ರಿ, ಬೆಸ್ತರ ಕರಿಯ ಮುಂತಾದ ಕಥಾ ಸಂಕಲನಗಳನ್ನು,

‘ಹೇಮಾವತಿ ತೀರದಲ್ಲಿ ಮತ್ತು ಇತರ ಪ್ರಬಂಧಗಳು’, ‘ನಮ್ಮ ಊರಿನ ರಸಿಕರು’ ಮುಂತಾದ ಪ್ರಬಂಧ ಸಂಕಲನಗಳನ್ನು ರಚಿಸಿದ್ದಾರೆ. ‘ಅಮೇರಿಕದಲ್ಲಿ ಗೋರೂರು’ ಅವರ ಪ್ರವಾಸ ಕಥನವಾಗಿದೆ. 1974ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಅವರಿಗೆ ಗೌರವ ಡಾಕ್ಟರೇಟ್ ಅನ್ನು ನೀಡಿ ಸನ್ಮಾನಿಸಿತು. 1980ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿತು. 1982 ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಗೊರೂರುರವರು 1991 ಸೆಪ್ಟೆಂಬರ್ 8ರಂದು ನಿಧನರಾದರು.

## ಚಟುವಟಿಕೆಗಳು

### ಉತ್ತರಿಸಿರಿ

1. ನಮ್ಮ ಊರು ಎಲ್ಲಿದೆ ಎಂದು ನಮಗೆ ತಿಳಿಯುವುದಿಲ್ಲ ಎಂದು ಲೇಖಕರು ಹೇಳಲು ಕಾರಣವೇನು ?
2. ಹೇಮಾವತಿ ನದಿಯ ತೀರದಲ್ಲಿ ಊರು ಹೇಗೆ ಕಂಗೊಳಿಸುತ್ತದೆ ?
3. ಸಾಬಿಗೆ ‘ಶಾಲು ಸಾಬಿ’ ಎಂದು ಹೆಸರು ಬರಲು ಕಾರಣವೇನು?
4. ಬಸ್ಸು ಬರುವ ಸಮಯಕ್ಕೆ ಸರಿಯಾಗಿ ಊರಿನ ಜನರ ಚಟುವಟಿಕೆಗಳಲ್ಲಿ ಏನೇನು ಬದಲಾವಣೆಗಳು ಉಂಟಾಗುತ್ತವೆ?
5. ಊರಿನ ಜನಜೀವನದ ಮೇಲೆ ಬಸ್ಸು ಹೇಗೆ ಪ್ರಭಾವ ಬೀರುತ್ತದೆ?

### ಟಿಪ್ಪಣಿ ಬರೆಯಿರಿ

ರೈತನು ಸೋಮಾರಿಯಾದರೆ ಪ್ರಪಂಚದ ಜನರ ಹೊಟ್ಟೆಯನ್ನುತುಂಬುವವರಾರು? ಈ ಮಾತಿನ ಕುರಿತು ಚರ್ಚಿಸಿ ಟಿಪ್ಪಣಿ ಬರೆಯಿರಿ. ಅದಕ್ಕೆ ಸೂಕ್ತ ಶೀರ್ಷಿಕೆಯನ್ನು ನೀಡಿರಿ.

## ವರ್ಣಿಸಿರಿ

ಹೇಮಾವತಿ ನದಿ ತೀರದ ಸೊಬಗನ್ನು ಲೇಖಕರು ವರ್ಣಿಸಿದ ಬಗೆಯನ್ನು ತಿಳಿದಿರಲ್ಲವೇ? ಇದೇ ರೀತಿ ನಿಮ್ಮ ಊರಿನ ಯಾವುದಾದರೂ ಸುಂದರ ಸ್ಥಳದ ಪ್ರಕೃತಿ ಸೌಂದರ್ಯವನ್ನು ವರ್ಣಿಸಿ ಬರೆಯಿರಿ.

## ಅನುಭವ ಕಥನ ಬರೆಯಿರಿ

ನಿಮ್ಮೂರಿನ ಕೃಷಿ ಕುಟುಂಬದ ದೈನಂದಿನ ಬದುಕಿನ ರೀತಿಗಳನ್ನು 'ನಮ್ಮ ಊರಿನ ರಸಿಕರು' ಪಾಠಭಾಗದಲ್ಲಿನ ಆಶಯಗಳೊಂದಿಗೆ ಹೋಲಿಸಿ ಅನುಭವ ಟಿಪ್ಪಣಿ ಬರೆಯಿರಿ.

## ದ್ವಿರುಕ್ತಿ

ಈ ಪಾಠಭಾಗದಲ್ಲಿ ಬಂದಿರುವ ದ್ವಿರುಕ್ತಿ ಪದಗಳನ್ನು ಪಟ್ಟಿ ಮಾಡಿರಿ.

## ಅನ್ಯದೇಶಿಯ ಪದಗಳು

ಈ ಪಾಠದಲ್ಲಿ ಬರುವ ಅನ್ಯದೇಶಿಯ ಪದಗಳನ್ನು ಪಟ್ಟಿ ಮಾಡಿರಿ.

## ನಾಮಪದ ಕ್ರಿಯಾಪದ

- ಮಳೆಗಾಲದಲ್ಲಿ ಒಂದು ತಿಂಗಳು ಜಡಿಮಳೆ ಹಿಡಿಯುತ್ತದೆ.
- ರಂಗೇಗೌಡನು ಮಂಡಿಯುದ್ದ ಕೆಸರಿನಲ್ಲಿ ಗದ್ದೆ ಉಳಲು ಪ್ರಾರಂಭಿಸುತ್ತಾನೆ.

ಈ ಮೇಲಿನ ವಾಕ್ಯಗಳಲ್ಲಿ ಅಡಿಗೆರೆ ಹಾಕಿದ ಪದಗಳಲ್ಲಿ ಕೆಲವು ಹೆಸರನ್ನು ಸೂಚಿಸಿದರೆ, ಕೆಲವು ಕ್ರಿಯೆಯನ್ನು ಸೂಚಿಸುತ್ತದೆ.

ಒಂದು ವಾಕ್ಯದಲ್ಲಿ ಹೆಸರನ್ನು ಸೂಚಿಸುವ ಪದವನ್ನು ನಾಮಪದ ಎಂದು ಕರೆಯಲಾಗುತ್ತದೆ.

ವಾಕ್ಯದಲ್ಲಿ ಕ್ರಿಯೆಯನ್ನು ತಿಳಿಸುವ ಪದವನ್ನು ಕ್ರಿಯಾಪದ ಎಂದು ಕರೆಯಲಾಗುತ್ತದೆ.

ಮೇಲಿನ ವಾಕ್ಯಗಳಲ್ಲಿರುವ ನಾಮಪದ ಮತ್ತು ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.

# 3. ಸಹಬಾಳ್ವೆ

ಕುಟುಂಬವು ಸಮಾಜದ ಪ್ರಮುಖ ಅಂಗ. ಕುಟುಂಬದಲ್ಲಿ ಜನರು ಪರಸ್ಪರ ಪ್ರೀತಿ, ಸಹನೆ, ಸಹಬಾಳ್ವೆಯಿಂದ ಜೀವಿಸುತ್ತಾರೆ. ಉತ್ತಮ ಕುಟುಂಬವು ಒಳ್ಳೆಯ ವ್ಯಕ್ತಿಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡುತ್ತದೆ. ಹೀಗೆ ಕುಟುಂಬವು ಓರ್ವ ವ್ಯಕ್ತಿಯ ‘ವ್ಯಕ್ತಿತ್ವ’ವನ್ನು ರೂಪಿಸುತ್ತದೆ ಎಂಬುವುದರಲ್ಲಿ ಸಂಶಯವಿಲ್ಲ. ನಮ್ಮ ದೇಶದ ಚರಿತ್ರೆಯನ್ನು ನೋಡಿದರೆ ‘ಪ್ರಭಾವಿ ವ್ಯಕ್ತಿತ್ವ’ವನ್ನು ಹೊಂದಿದ ಹಲವಾರು ಸಮಾಜ ಸುಧಾರಕರನ್ನು ಕಾಣಬಹುದು. ಮೂಢನಂಬಿಕೆಯಂತಹ ಸಾಮಾಜಿಕ ಪಿಡುಗನ್ನು ಹೋಗಲಾಡಿಸಿ ಸಮಾಜದ ಏಳಿಗೆಗಾಗಿ ನಿರಂತರ ಶ್ರಮಪಟ್ಟು ‘ಮಾದರಿ ವ್ಯಕ್ತಿ’ಗಳಾಗಿ ಹೊರಹೊಮ್ಮಿದ ಹಲವಾರು ವ್ಯಕ್ತಿಗಳ ನಿದರ್ಶನಗಳು ನಮ್ಮ ಕಣ್ಣಮುಂದೆ ಇವೆ.







## ಪ್ರವೇಶ ಚಟುವಟಿಕೆ

ಇಲ್ಲಿ ನೀಡಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.




- ನಿಮ್ಮ ಕುಟುಂಬದ ಸದಸ್ಯರಲ್ಲಿ ನಿಮ್ಮ ಮೇಲೆ ಹೆಚ್ಚು ಪ್ರಭಾವ ಬೀರಿದ ವ್ಯಕ್ತಿ ಯಾರು? ಕಾರಣ ಏನು ಎಂಬುದನ್ನು ಬರೆಯಿರಿ.

# ಕರುಣಾಳು ತಂದೆ

ಸಿನಿಮಾ ಮುಗಿದಿತ್ತು. ದೀಪಗಳೆಲ್ಲಾ ಝಗಮಗಿಸಿದವು. ಬಾಗಿಲು ತೆರೆದರು. ನಾನು ಸ್ಕೂಲ್ ಬ್ಯಾಗನ್ನು ಬೆನ್ನಮೇಲೆ ಹಾಕಿಕೊಂಡು, ಮುಖ ಕೆಳಗೆ ಮಾಡಿ ಬಾಗಿಲ ಕೆಳಗೆ ನುಸುಳಿಕೊಂಡು ಹೋದೆ.

ಹಾಲ್‌ನ ಒಳಗೆ ಬರುವಾಗ ನನ್ನನ್ನು ಯಾರೂ ದುರುಗುಟ್ಟಿಕೊಂಡು ನೋಡುತ್ತಿದ್ದಾರೆ ಅನ್ನಿಸಲಿಲ್ಲ. ಆದರೆ ಹೋಗುವಾಗ ಯಾಕೋ ಏನೋ ತಲೆಯೆತ್ತಿಕೊಂಡು ಹೊರಗೆ ಹೋಗಲು ಆಗುತ್ತಿರಲಿಲ್ಲ. ಆದಷ್ಟು ಬೇಗ ಹೊರಗೆ ಹೋಗಲು ಮನಸ್ಸು ತವಕಿಸುತ್ತಿತ್ತು. ನನಗೆ ರೆಕ್ಕೆಗಳು ಬಂದರೆ ಎಷ್ಟು ಚೆನ್ನ ಅನ್ನಿಸಿತು. ಪಕ್ಷಿಯಂತೆ ಹಾರಿ ಹೊರಗೆ ಬಂದು, ಒಂದು ನಿಮಿಷದಲ್ಲಿ ಮನೆ ಸೇರಬಹುದಾಗಿತ್ತು ಎಂದುಕೊಂಡೆ.

ಸ್ಕೂಲ್ ಬ್ಯಾಗ್ ಬೆನ್ನಿನ ಮೇಲೆ ಭಾರ ಎನಿಸಿತು. ಆ ಬ್ಯಾಗನ್ನು ಸಿನಿಮಾ ಮಂದಿರದಲ್ಲಿ ಸೀಟ್ ಕೆಳಗೆ ಹಾಕಿ ಹೋಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಜನರು ಆಗ ನನ್ನನ್ನು ಈ ರೀತಿ ದುರುಗುಟ್ಟಿಕೊಂಡು ನೋಡುತ್ತಿರಲಿಲ್ಲ. ಸ್ಕೂಲಲ್ಲೇ ಆ ಬ್ಯಾಗನ್ನು ರಾಜುವಿಗೆ ಕೊಡಲು ಯೋಚಿಸಿದೆ. ಆದರೆ ರಾಜು ಇಷ್ಟು ಪರೋಪಕಾರಿಯಲ್ಲ. ಅವನು "ನೀನು ಸಿನಿಮಾ ನೋಡಲು ಸ್ಕೂಲ್ಗೆ ಚಕ್ಕರ್ ಹೊಡೆದು ಹೋದೆ ಎಂದು ಹೇಳುವುದಿಲ್ಲ ಅಷ್ಟೆ," ಎಂದ. ಅದೇ ಒಂದು ದೊಡ್ಡ ಉಪಕಾರ ಎಂದುಕೊಂಡೆ.

ನಾನು ಹೊರಗೆ ಬಂದೆ. ಸೂರ್ಯ ಮುಳುಗಿದ್ದ. ಆದರೆ ಇನ್ನೂ ಕತ್ತಲು ಆವರಿಸಿರಲಿಲ್ಲ. ಮನೆಗೆ ಹೋಗುತ್ತಾ ಹೋಗುತ್ತಾ ಕತ್ತಲಾಗಿಬಿಡುತ್ತೆ.

ತಂದೆಯವರು ಫ್ಯಾಕ್ಟರಿಯಿಂದ ಮನೆಗೆ ಬಂದಿರಬಹುದು. ನನ್ನನ್ನು ಕಾಣದೆ, ನನ್ನ ತಾಯಿಯನ್ನು ಎಲ್ಲಿಗೆ ಹೋಗಿದ್ದಾನೆ ಎಂದು ನನ್ನ ಬಗ್ಗೆ ಕೇಳಿರಬಹುದು. ಅವನು ಇನ್ನೂ ಸ್ಕೂಲಿಂದ ಬಂದಿಲ್ಲ ಎಂದು ತಾಯಿ ಹೇಳಿರಬೇಕು. ತಂದೆಯವರಿಗೆ ಕೋಪ ಬಂದಿರಬೇಕು. "ಅವನು ಇವತ್ತೂ ಸ್ಕೂಲಿಗೆ ಚಕ್ಕರ್ ಹೊಡೆದು ಸಿನಿಮಾ ನೋಡೋಕ್ಕೆ ಹೋಗಿರಬೇಕು" ಎಂದು ಹಾರಾಡುತ್ತಿರಬಹುದು. "ನಿನ್ನ ಪ್ರೀತಿಯಿಂದಲೇ ಅವನು ಕೆಡುತ್ತಿರುವುದು.

ಒಬ್ಬನೇ ಮಗ, ಅವನನ್ನು ಹಾಳುಮಾಡು. ಆಮೇಲೆ ಅಳಬೇಡ" ಎಂದು ಪಾಪ ಅಮ್ಮನನ್ನು ತರಾಟೆಗೆ ತೆಗೆದುಕೊಂಡಿರಬಹುದು, ಅಪ್ಪ, ಇದ್ದಕ್ಕಿದ್ದಂತೆ ಅವರು "ನೀನು ಬೆಳಿಗ್ಗೆ ನನ್ನ ಜೇಬಿಂದ ಹತ್ತು ರೂಪಾಯಿಗಳನ್ನು ತೆಗೆದುಕೊಂಡೆಯಾ?" ಎಂದು ಅಮ್ಮನನ್ನು ಕೇಳಿರಬೇಕು. "ನಿಮ್ಮನ್ನು ಕೇಳದೆ ನಾನೇಕೆ ತೆಗೆದು ಕೊಳ್ಳುತ್ತೇನೆ" ಅಂದಿರಬೇಕು ಅಮ್ಮ. ಅಪ್ಪನ ಹತ್ತು ರೂಪಾಯಿ ಕದ್ದ ಕಳ್ಳ ನಾನು.

ಅಪ್ಪ ಇನ್ನೂ ಮನೆಗೆ ಬಂದಿರಲಾರರು. ತರಕಾರಿ ತರಲು ಹೋಗಿರಬಹುದು ಅಥವಾ ಅವರ ಸ್ನೇಹಿತನನ್ನು ಭೇಟಿಯಾಗಲು ಹೋಗಿರಬಹುದು. ಹಾಗಿದ್ದರೆ ಅವರು ಮನೆಗೆ ಬರುವ ಮೊದಲೇ ಮನೆ ಸೇರುತ್ತೇನೆ. ಅಮ್ಮ ಕೇಳಿದರೆ, "ಎನ್.ಸಿ.ಸಿ. ಪೆರೇಡಿತ್ತು" ಅಂದರಾಯಿತು. ಬೇಗ ತಿಂಡಿ ತಿಂದು "ಸ್ನೇಹಿತರ ಮನೆಗೆ ಓದೋಕೆ ಹೋಗ್ತೀನೆ" ಎಂದು ಹೇಳಿ ಹೊರಟುಹೋಗುತ್ತೇನೆ. ಓದಿಕೊಂಡು ಹೊತ್ತಾಗಿ ಮನೆಗೆ ಬಂದರೆ ಆಯಿತು. ಯಾರಿಗೂ ಇದನ್ನು ಕೇಳುವ ಯೋಚನೆಯೇ ಇರುವುದಿಲ್ಲ. ಹತ್ತು ರೂಪಾಯಿ ಬಗ್ಗೆ ತಂದೆ ಕೇಳಿದರೆ "ನನಗೆ ಗೊತ್ತಿಲ್ಲ" ಎಂದರಾಯಿತು.

ಹೀಗೆ ಯೋಚನೆ ಮಾಡುತ್ತಾ ಬೇಗ ಬೇಗ ಮನೆಗೆ ಹೋಗುತ್ತಿದ್ದೆ. ಆದಷ್ಟು ಬೇಗ ಅಂಗಡಿ ಬೀದಿಯಿಂದ ಹೊರಗೆ ಹೋಗಲು ವೇಗವಾಗಿ ನಡೆಯುತ್ತಿದ್ದೆ. ಆದರೆ ಅಂಗಡಿಗಳ ಸಾಲು ಮುಗಿಯುವಂತೆಯೇ ಕಾಣಲಿಲ್ಲ. ನನಗನಿಸುತ್ತಿತ್ತು, ಅಂಗಡಿಗಳಲ್ಲಿರುವ ಜನ ನನ್ನ

**ತಂದೆ - ತಾಯಿ**

ಮುದ್ದು ಕಂದ ಬಾರೋ ಎಂದು
ತಾಯಿ ನನ್ನ ಕರೆವಳು
ಊಣಲು ತಿನ್ನಲು ಕೊಟ್ಟು ನನ್ನ
ಮುದ್ದು ಗೈಯುತಿರುವಳು
ಏನು ಬೇಕು ಅದನ್ನು ಕೊಟ್ಟು
ಅಪ್ಪ ಬುದ್ಧಿ ಹೇಳ್ವರು
ಓದು ಕಂದ ಜಾಣನಾಗು
ಗುಣವಗಳಿಸು ಎನ್ನುವರು
ಸುಳ್ಳು ಗಿಳ್ಳು ಹೇಳಬೇಡ
ಜಾಣ ನೀನು ಎಂಬರು
ಕಷ್ಟಪಟ್ಟು ಕೆಲಸ ಮಾಡು
ಇಷ್ಟ ಸಿದ್ಧಿ ಎಂಬರು
ತಾಯಿ ತಂದೆ ನಿತ್ಯ ನನ್ನ
ಹಿತದ ಚಿಂತೆಗೈವರು
ನಾಡ ಹಿತಕೆ ದುಡಿಯೋ ಕಂದ
ಸುಖದಿ ಬಾಳು ಎಂಬರು
ಅವರ ಮಾತ ಮರೆಯಲಾರೆ
ಅದುವೇ ದಾರಿ ದೀಪವು
ತಾಯಿ ತಂದೆ ದೇವರೆನಗೆ
ಅವರೇ ನನ್ನ ಜೀವವು

- ರಾ. ಮೊ.ವಿಶ್ವಾಮಿತ್ರ

ಸ್ಕೂಲ್ ಬ್ಯಾಗನ್ನೇ ನೋಡುತ್ತಿದ್ದಾರೆ. ಬೇಗ ನಡೆದರೆ ಇವರಿಂದ ಅದೃಶ್ಯವಾಗಬಹುದು. ಇವರುಗಳೆಲ್ಲಾ ನನ್ನನ್ನೇ ಏಕೆ ದುರುಗುಟ್ಟಿ ನೋಡುತ್ತಿದ್ದಾರೋ?ಸ್ವಲ್ಪ ದೂರ ನಡೆದೆ. ಒಂದು ಹೋಟೆಲಿನ ಮುಂದೆ ಗುಂಪು ಕೂಡಿತ್ತು. ಏನೋ ದುರ್ಘಟನೆ ನಡೆದಿರಬೇಕೆಂದುಕೊಂಡೆ, ವೇಗವಾಗಿ ಹೋಟೆಲಿನ ಹತ್ತಿರ ಹೋದೆ. ನನಗೆ ವಿಶ್ವಾಸವಾಗಲಿಲ್ಲ.

ಕೌಂಟರಿನ ಹತ್ತಿರ ನನ್ನ ತಂದೆ ತಲೆ ಕೆಳಗೆ ಮಾಡಿ ಸುಮ್ಮನೆ ನಿಂತಿದ್ದರು. ಮುಖ ಬಿಳಿಚಿಕೊಂಡಿತ್ತು. ಎಲ್ಲರೂ ಅವರನ್ನೇ ನೋಡುತ್ತಿದ್ದರು. ಹೋಟೆಲ್ ಮ್ಯಾನೇಜರ್ ತಂದೆಯವರನ್ನು ಏಕೆ ಬೈಯುತ್ತಿದ್ದಾನೆ? ಎನ್ನಿಸಿತು.

"ನೀವು ತಿಂಡಿ ತಿನ್ನೋಕೆ ಮುಂಚೆ, ನಿಮ್ಮ ಜೇಬಲ್ಲಿ ಹಣವಿದೆಯೋ, ಇಲ್ಲವೋ ಅಂತ ಏಕೆ ನೋಡಿಕೊಳ್ಳಲಿಲ್ಲ?" ಮ್ಯಾನೇಜರ್ ಜೋರಾಗಿ ಕೂಗಿಕೊಳ್ಳುತ್ತಿದ್ದ.

ತಂದೆಯವರು ನನ್ನ "ಜೇಬಲ್ಲಿ ಹತ್ತು ರೂಪಾಯಿ ಇತ್ತು" ಎಂದು ಕ್ಷೀಣ ದನಿಯಲ್ಲಿ ಉತ್ತರಿಸುತ್ತಿದ್ದರು.

"ಹತ್ತು ರೂಪಾಯಿ ಎಲ್ಲಿ ಹಾರಿಕೊಂಡು ಹೋಯಿತು? ನಾನೇನೂ ನಿಮ್ಮ ಜೇಬು ಕತ್ತರಿಸಲಿಲ್ಲ, ನಿಮ್ಮಂತಹ ದೊಡ್ಡ ಮನುಷ್ಯರೇ ಹೀಗೆ ಮಾಡಿದರೆ, ಹೋಟೆಲ್ ಮುಚ್ಚಬೇಕಾಗುತ್ತೆ ಅಷ್ಟೆ. ಏನು ಕಾಲ ಬಂತಪ್ಪಾ" ಎಂದು ಮ್ಯಾನೇಜರ್ ಅಪ್ಪನನ್ನು ಮನಸ್ಸಿಗೆ ಬಂದ ಹಾಗೆ ಬೈತಾ ಇದ್ದ.



ತಂದೆ ಸುಮ್ಮನಿದ್ದರು. ನಾನು..... ನಾನು..... ಎನ್ನುವ ಶಬ್ದ ಬಿಟ್ಟರೆ, ಅವರ ಬಾಯಿಯಿಂದ ಯಾವ ಮಾತೂ ಹೊರಡುತ್ತಿರಲಿಲ್ಲ. ತಂದೆ ಸುಮ್ಮನೇಕಿದ್ದಾರೆ? "ನನ್ನ ಮಗ ಕಳ್ಳ, ಹತ್ತು ರೂಪಾಯಿ ಹೊಡೆದುಕೊಂಡು ಹೋಗಿದ್ದಾನೆ ಅಂತ" ಅವರು ಏಕೆ ಹೇಳಬಾರದು? ಹೋಟೆಲ್ನ ಮ್ಯಾನೇಜರ್ ತಂದೆಯನ್ನು ಹಣ ಕೇಳುತ್ತಿದ್ದ. ಗುಂಪು ಹೆಚ್ಚುತ್ತಾ ಹೋಯಿತು. ತಂದೆಯವರು ಅಸಹಾಯಕತೆಯಿಂದ ಕಣ್ಣಲ್ಲಿ ನೀರು ಹಾಕಿಕೊಂಡಿದ್ದರು. ಇದು ಅವರಿಗಾಗುತ್ತಿರುವ ಅಪಮಾನದ ಕಣ್ಣೀರಲ್ಲ, ನನ್ನ ಮಗ ಹೀಗಾದನಲ್ಲ ಎಂಬ ಕಣ್ಣೀರು. ಈ ಒಂದೊಂದು ಕಣ್ಣೀರಿನ ಹನಿಯಲ್ಲಿ ನನ್ನ ಭವಿಷ್ಯದ ಚಿಂತೆ ತುಂಬಿ ತುಳುಕುತ್ತಿದೆ ಅನ್ನಿಸಿತು ನನಗೆ. ನಾನು ಅಲ್ಲೇ ಗುಂಪಿನ ಮಧ್ಯೆ ನಿಂತು ಅಳತೊಡಗಿದೆ.

ಅಷ್ಟರಲ್ಲೇ ನಮ್ಮ ತಂದೆಯ ಜೊತೆಯಲ್ಲಿ ಕೆಲಸ ಮಾಡುವ ವರ್ಮಾಜಿ ಗುಂಪನ್ನು ಛೇದಿಸಿಕೊಂಡು ಹತ್ತಿರ ಬಂದರು. ವಿಷಯವೆಲ್ಲಾ ತಿಳಿದುಕೊಂಡ ಮೇಲೆ, ಮ್ಯಾನೇಜರನ್ನು ಚೆನ್ನಾಗಿ ದಬಾಯಿಸಿದರು. ಈ ರೀತಿ ಯಾರಿಗಾದರೂ ಆಗಬಹುದು, ಇಷ್ಟು ಚಿಕ್ಕ ವಿಷಯಕ್ಕೆ ಇಂತಹ ದೊಡ್ಡ ಮನುಷ್ಯರನ್ನು ಈ ರೀತಿ ಅವಮಾನ ಮಾಡುವುದೇ ಎಂದು ತರಾಟೆಗೆ ತೆಗೆದುಕೊಂಡರು. 5 ರೂ. 65 ಪೈ. ಬಿಲ್ ಹಣವನ್ನು ಅವನ ಮುಖದ ಮೇಲೆ ಎಸೆದರು. ಜನರ ಗುಂಪು ಚದುರಿತು.

ನಾನು ಮನೆ ಸೇರಿದೆ. ನನ್ನ ಮನಸ್ಸು ನನ್ನನ್ನು ಧಿಕ್ಕರಿಸುತ್ತಿತ್ತು. ಹೇಗೋ ದುಗುಡ ಮನದಿಂದ ಮನೆ ಸೇರಿದೆ. ರೂಂಗೆ ಹೋಗಿ ಹಾಸಿಗೆ ಮೇಲೆ ಮುಖ ಮುಚ್ಚಿಕೊಂಡು ಬೋರಲಾಗಿ ಬಿದ್ದು ಹೊರಳಿ ಅತ್ತೆ.

ಆಗ ತಂದೆಯವರು ಮನೆಗೆ ಬಂದರು. ತಾಯಿ ಅವರನ್ನು "ಏಕೆ ಒಂದು ತರಹ ಇದ್ದೀರಿ? ಮುಖ ಇಳಿದಿದೆ. ಮೈ ಚೆನ್ನಾಗಿಲ್ಲವೆ?" ಎಂದು ಕೇಳಿದರು.

ತಂದೆಯವರು ಸತ್ತ ದನಿಯಲ್ಲಿ, "ಏನೂ ಇಲ್ಲ. ಸರಿಯಾಗಿದೆ" ಅಂದರು.

ನಂತರ ತಂದೆಯವರು ನನ್ನನ್ನು ಕರೆದರು. ಅಪ್ಪ ಇವತ್ತು ಚೆನ್ನಾಗಿ ಒದ್ದು, ಹೊಡೆದು ಹಣ್ಣುಗಾಯಿ- ನೀರುಗಾಯಿ ಮಾಡುತ್ತಾರೆ ಎಂದುಕೊಂಡೆ. ಇವತ್ತು ನನ್ನನ್ನು ಅಪ್ಪ ಚೆನ್ನಾಗಿ ಹೊಡೆಯಬೇಕು. ನನ್ನಿಂದ ಅವರಿಗೆ ಅವಮಾನ ಆಯಿತು. ನನ್ನ ಚರ್ಮ ಸುಲಿದರೂ ಶಿಕ್ಷೆ ಕಮ್ಮಿ ಅಂದುಕೊಂಡೆ. ನನ್ನನ್ನು ಅವರು ಸಾಯೋವರೆಗೂ ಹೊಡೀಲಿ ಅಂದುಕೊಂಡೆ.

ಆದರೆ, ಆಶ್ಚರ್ಯ! ಅಪ್ಪ ನನ್ನನ್ನು ಬೈಯಲೂ ಇಲ್ಲ. ಹೊಡೆಯಲೂ ಇಲ್ಲ. “ನೋಡು ಮಗು, ಹೇಳದೆ ಕೇಳದೆ ನನ್ನ ಜೇಬಿಂದ ದುಡ್ಡು ತೆಗೆದುಕೊಳ್ಳಬಾರದು. ನಿನಗೆ ಬೇಕಾದಾಗ ನನ್ನನ್ನು ಕೇಳಿ ತೆಗೆದುಕೋ” ಅಂದರು.

ನಾನು ಈ ಮಾತುಗಳನ್ನು ಕೇಳಿದಾಗ, ನಾಚಿಕೆಯಾಯ್ತು. ಭೂಮಿ ಬಾಯಿ ಬಿಟ್ಟು ನನ್ನನ್ನು ನುಂಗುತ್ತಿರುವಂತೆ ಭಾಸವಾಯಿತು. ನನ್ನ ಕಣ್ಣಿಂದ ನೀರು ಧಾರಾಕಾರವಾಗಿ ಹರಿಯುತ್ತಿತ್ತು.

**ಟೀಕಲ್ ಗೋಪಾಲಕೃಷ್ಣ**

## ಚಟುವಟಿಕೆಗಳು

### ಉತ್ತರಿಸಿರಿ

1. ಹುಡುಗನು ಸಿನೆಮಾ ಮಂದಿರದಿಂದ ಮನೆ ಕಡೆಗೆ ನಡೆದುಕೊಂಡು ಹೋಗುತ್ತಿರುವಾಗ ಆತನ ಮನಸ್ಸಿನಲ್ಲಿ ಯಾವೆಲ್ಲ ಯೋಚನೆಗಳು ಮೂಡಿದುವು?
2. ಹೋಟೆಲ್ ನಲ್ಲಿ ನಡೆದ ಘಟನೆ ಯಾವುದು?
3. ಹುಡುಗನ ಕಣ್ಣಿನಿಂದ ಧಾರಾಕಾರವಾಗಿ ನೀರು ಸುರಿಯಲು ಕಾರಣವೇನು?

### ಪಾತ್ರಚಿತ್ರಣ ಬರೆಯಿರಿ

ಈ ಕಥೆಯಲ್ಲಿ ಬಂದಿರುವ ತಂದೆಯ ಪಾತ್ರ ಚಿತ್ರಣವನ್ನು ಮಾಡಿರಿ.

### ಸಂದೇಶ ಬರೆಯಿರಿ

‘ಕರುಣಾಳು ತಂದೆ’ ಕಥೆಯಲ್ಲಿರುವ ನೀತಿ ಅಥವಾ ಸಂದೇಶವನ್ನು ಬರೆಯಿರಿ.

### ವಿವರಣೆ ಬರೆಯಿರಿ

ಪಾಠಭಾಗದ ಆಶಯವನ್ನು ಓದಿ ತಿಳಿದುಕೊಂಡಿದ್ದೀರಲ್ಲವೇ? ನೀವು ಮಾಡಿದ ಯಾವುದಾದರೂ ತಪ್ಪು ಅಥವಾ ಒಳ್ಳೆಯ ಕೆಲಸದ ಬಗ್ಗೆ ತಂದೆ ಅಥವಾ ತಾಯಿಗೆ ತಿಳಿದಾಗ ಅವರು ಪ್ರತಿಕ್ರಿಯಿಸಿದ ರೀತಿಯ ನಿಮ್ಮ ಅನುಭವವನ್ನು ವಿವರವಾಗಿ ಬರೆಯಿರಿ.

## ಆಶಯ ಬರೆಯಿರಿ

'ತಂದೆ - ತಾಯಿ' ಈ ಕವನದ ಆಶಯ ಬರೆಯಿರಿ.

## ಅಭಿಪ್ರಾಯ ಟಿಪ್ಪಣಿ ಬರೆಯಿರಿ

'ಸಮಾಜದಲ್ಲಿ ಓರ್ವ ವ್ಯಕ್ತಿಯನ್ನು ಉತ್ತಮ ನಾಗರಿಕ ಪ್ರಜೆಯನ್ನಾಗಿ ಮಾಡುವಲ್ಲಿ ಕುಟುಂಬದ ಪಾತ್ರವು ಹಿರಿದಾದದು' ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು? ಬರೆಯಿರಿ.

## ಸರಿಪಡಿಸಿ ಬರೆಯಿರಿ

ಇಲ್ಲಿ ನೀಡಿದ ಗದ್ಯಭಾಗದಲ್ಲಿರುವ ಅಕ್ಷರ ತಪ್ಪುಗಳನ್ನು ಸರಿಪಡಿಸಿ ಬರೆಯಿರಿ.

ಮಿಥಿಲೆಯ ಅರಶ ಜನಕ ಮಹಾರಾಜನಾಗಿದ್ದನು. ಅವನಿಗೆ ಬಹುಕಾಳ ಮಕ್ಕಲಾಗಿರಲಿಲ್ಲ. ಅವನು ಸಂತಾನ ಪ್ರಾಪ್ತಿಗಾಗಿ ಯಾಗ ಕೈಗೊಲ್ಲಳು ನಿರ್ಧರಿಸಿದನು. ಅದಕ್ಕಾಗಿ ಯಗಭೂಮಿಯನ್ನು ಸಿದ್ಧಮಾಡಳು ಅವನು ಸ್ವತಃ ನೇಗಿಳು ಇಡಿದು ಭೂಮಿಯನ್ನು ಉತ್ತಣು. ಹಾಗ ನೇಗಿಳ ತುದಿಗೆ ಚಿನ್ನದ ಪೆಟಿಗ್ಗೆ ಸಿಕ್ಕಿತು. ಅದನ್ನು ತೆರೆದು ನೋಡಿದಾಗ ಅದರಳ್ಳಿ ಸುದರವಾದ ಹೆನ್ನು ಮಗು ಇತ್ತು. ನೇಗಿಳ ತುದಿಗೆ ಸಿಕಿದ ಮಗುವಾದುದರಿಂದ ಜನಕನು ಅವಲಿಗೆ ಸೀತಾ ಎಂದು ಎಸರಿಟ್ಟು ತಣ್ಣ ಮಗಲಾಗಿ ಬೆಲೆಸಿದನು.

## ಸಂಗ್ರಹಿಸಿರಿ

ಸಾಮಾಜಿಕ ನೀತಿ, ಸೌಹಾರ್ದತೆಗೆ ಸಂಬಂಧಿಸಿದ ಕಥೆಗಳನ್ನು ಸಂಗ್ರಹಿಸಿ ಓದಿರಿ.

# ಕತ್ತೆ ಮತ್ತು ಧರ್ಮ

ಮಧುಗಿರಿ ಪಟ್ಟಣಕ್ಕೆ ಸಿದ್ದಯ್ಯನೆಂಬಗಸ
ಯಂಡರು ಮಕ್ಕಳಿಲ್ಲ ಏಕಾಕಿ | ಸಿದ್ದಯ್ಯ
ಕತ್ತೆಯ ಅವುನ ಒಡನಾಡಿ
ಕತ್ತೆಯ ಮೈ ತೊಳೆದು ಮುದ್ದಾಡಿ ಸಿದ್ದಯ್ಯ
ಒಂದೆ ಗಂಗಳದಲ್ಲಿ ಉಣ್ಣೋನು | ಸಿದ್ದಯ್ಯ
ಕತ್ತೆಯ ಮಗ್ಗುಲಲ್ಲಿ ಮಲಗೋನು
ಬಟ್ಟೆಯ ಹೇರಿಕೊಂಡು ಹೊಂಟರೆ ಬೀದಿಲಿ
ದೇವೇಂದ್ರನಾ ಕುದುರೆ ಸಮನಲ್ಲ | ರಾಜನ
ಪಟ್ಟದ ಆನೆಯು ಚಟ್ಟಂತು
ಸಿದ್ದಯ್ನ ಸಾಕುಮಗಳು ಕತ್ತೆ ಅನ್ನೋ ಸುದ್ದಿ
ಊರ ಬಾಯಿಗೆ ಎಲೆ ಅಡಿಕೆ | ಸಿದ್ದಯ್ಯ
ಕತ್ತೆ ಬಿಟ್ಟಿರಲಾರ ಅರುಗಳಿಗೆ



ಇಂಥ ಸಿದ್ದಯ್ಯನಿಗೆ ಬಂತಲ್ಲೋ ಕೆಡುಗಾಲ
ಬಟ್ಟೆಯ ಒಗಿವಾಗ ತಲೆಮ್ಯಾಲೆ | ಕಾಗೆನುಗ್ಗಿ
ಮನೆಯಲ್ಲಿ ಗವುಳಿ ಲೊಚಲೊಚ
ಎದ್ದಾನು ಸಿದ್ದಯ್ಯ ಕತ್ತೇಯು ಏಳ್ಳಿಲ್ಲ
ಹೊಟ್ಟೆಯು ಊದಿ ಮಯ್ಯೆಲ್ಲ। ತಣ್ಣಗಾಗಿ
ಶಿವ ತನ್ನ ಪಾದಕೆ ಕರುಕೊಂಡ
ಊರ ಸೀಳಾದೀಲಿ ಕತ್ತೆಯ ಮಣ್ಮಾಡಿ
ಗಂಧದ ಕಡ್ಡಿಯ ಹಚ್ಚವನೆ | ಸಿದ್ದಯ್ಯ
ತೆಂಗಿನ ಕಾಯ ಒಡದವನೆ
ಸಿದ್ದಯ್ನ ಗೋಳನು ಕೇಳೋರು ಯಾರಯ್ಯ
ಮನವೆಲ್ಲ ವಣುಗಿ ಮರಳಾಗಿ | ಸಿದ್ದಯ್ಯ
ಹೊರಟನು ದುಕ್ಕದಿ ದೇಸಾಂತರ
ಯಾಪಾರಕೊಂಟಿದ್ದ ದೂರಾದ ಜಯ ಶೆಟ್ಟಿ
ನೋಡಿದ ಸಿದ್ದಯ್ನ ಘನಪೂಜೆ | ಬಂದಿಲ್ಲಿ
ಕೈಮುಗದು ವಂಟನು ಯಾಪಾರಕೆ



ಶೆಟ್ಟಿಗೆ ಆವತ್ತು ಪ್ಯಾಟೇಲಿ ಸೌಭಾಗ್ಯ
ಬೆಳ್ಳಿಯ ಅಳಕೊಂಡ ಬಳ್ಳಬಳ್ಳ | ನಮ್ಮ ಶೆಟ್ಟಿ
ಬಂಗಾರ ಬಾಚಿಕೊಂಡ ಚೀಲ ಚೀಲ
ಮನೆಗೋಗೋ ದಾರೀಲಿ ಶೆಟ್ಟಿ ಗೋರಿಯ ಮುಂದೆ
ಕೈಮುಗದು ಬಿದ್ದು ನಮಸ್ಕಾರ | ಮಾಡಿಕೊಟ್ಟ
ದೇವರ ಕಂಬ ಅದಕೆಣ್ಣೆ
ಊರೂರ ಸುದ್ದೀಲಿ ಜನಕೆ ಭಕ್ತಿಯ ಹುಟ್ಟಿ
ಸೇರಿತು ಪರುಸೆ ಗೋರಿದೇವ್ರ | ಹೆಸರೇಲಿ
ಗುಡಿಯೊಂದು ನಿಂತಿತಲ್ಲೋ ಮುಗಿಲುದ್ದ
ಪೂಜೇಗೆ ವೈದಿಕರು-ದಾನಾಕೆ ಸಾವುಕಾರ್ರು
ಕತ್ತೆಗೋರಿಯ ಮೇಲೆ ಕೈಲಾಸ| ಹಬ್ಬಿತ್ತು
ರಾಜ ರಾಣಿಗೆ ಸುದ್ದಿ ಹೋಯ್ತು
ರಾಜ ಸುಂಗಾರವಾದ ರಾಣಿ ಸುಂಗಾರವಾದ್ಲು
ಕತ್ತೆಯ ಪೂಜೆಗೆ ಕುದುರೆಯ । ಏರಿಕೊಂಡು
ಬಂದರು ಗೋರಿಯ ದೇವರಿಗೆ
ದಾರಿ ದೇವರ ಕಂಡು ಧನ್ಯರಾಗಲು ಅಂದು
ರಾಜರಾಣಿಯರ ಜೊತೆ ಪರಿವಾರ | ಹರಿದಿತ್ತು
ಕೂಡಿತು ಪರುಸೆ ಕಡಲಾಗಿ
ಗೋರಿ ದೇವರ ಮಹಿಮೆ ಕೊಂಡಾಟ ನೆಡಿವಾಗ
ತಳ್ಳಾಟ ಹೊರಗೆ ಆಗಿತ್ತು | ಕತ್ತಿಡಿದು
ತಳವಾರು ಸಿದ್ದಯ್ನ ತಳ್ಳುತಾರೆ
ದೇಸಂತ್ರ ಹೋಗಿದ್ದ ಸಿದ್ದಯ್ಯ ಕತ್ತೇಯ
ಹೂತ ಜಾಗವ ನೋಡೊ ಆಸೇಲಿ | ಬಂದವ್ನೆ
ಹುಡುಕುತ ನಿಂತ ಹೂತಜಾಗ

ಡಾ. ಸಿದ್ದಲಿಂಗಯ್ಯ
(ಸಾವಿರಾರು ನದಿಗಳು - ಕವನ ಸಂಕಲನ)

## ಕವಿ ಪರಿಚಯ



ಆಧುನಿಕ ಕನ್ನಡ ಸಾಹಿತ್ಯಕ್ಷೇತ್ರದ ಮಹತ್ವದ ಲೇಖಕರಲ್ಲಿ ಸಿದ್ದಲಿಂಗಯ್ಯನವರು ಪ್ರಮುಖರು. 03.02.1954 ರಲ್ಲಿ ಮಂಚೇನಹಳ್ಳಿಯಲ್ಲಿ ಜನಿಸಿದರು. ಇವರು ದಲಿತರ ಮೇಲೆ ನಡೆಯುವ ಶೋಷಣೆಯನ್ನು ಖಂಡಿಸುತ್ತಾ ದಲಿತರ ಧ್ವನಿಯಾದವರು. 'ಹೊಲೆ ಮಾದಿಗರ ಹಾಡು', 'ಸಾವಿರಾರು ನದಿಗಳು' ಇವರ ಪ್ರಸಿದ್ಧ ಕವನ ಸಂಕಲನಗಳು. 'ಅವತಾರ', 'ಹಕ್ಕಿ ನೋಟ', 'ರಸಗಳಿಗೆಗಳು' ಎಂಬ ಕೃತಿಗಳನ್ನು ಹೊರ ತಂದಿದ್ದಾರೆ. ನಾಟಕಗಳಾದ 'ಪಂಚಮ', 'ನೆಲಸಮ', 'ಏಕಲವ್ಯ' ಕೃತಿಗಳನ್ನು ಬರೆದಿದ್ದಾರೆ. ಇವರ ಗ್ರಾಮದೇವತೆಗಳು ಎಂಬ ಪ್ರೌಢ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ದೊರೆತಿದೆ. ಶ್ರೀಯುತರು 11.06.2021 ರಂದು ದಿವಂಗತರಾದರು.

## ಚಟುವಟಿಕೆಗಳು

### ಹಾಡಿರಿ

ಈ ಕಥನ ಕವನವನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

1. ಮಧುಗಿರಿ ಪಟ್ಟಣದ ಅಗಸ ಯಾರು?
2. ಸಿದ್ದಯ್ಯನ ಕತ್ತೆಯು ನೋಡಲು ಹೇಗಿತ್ತು?
3. ಸಿದ್ದಯ್ಯನು ದೇಸಾಂತರ ಹೋದುದು ಯಾಕೆ?
4. ಜನರು ಕತ್ತೆಯ ಗೋರಿಯ ಎದುರು ಯಾಕೆ ಸೇರಿದ್ದರು?

## ಸ್ವಾರಸ್ಯ ಬರೆಯಿರಿ

ಕೆಳಗೆ ನೀಡಿದ ಪದ್ಯಭಾಗದ ಸ್ವಾರಸ್ಯವನ್ನು ಬರೆಯಿರಿ.

ಬಟ್ಟೆಯ ಹೇರಿಕೊಂಡು ಹೊಂಟರೆ ಬೀದಿಲಿ
ದೇವೇಂದ್ರನಾ ಕುದುರೆ ಸಮನಲ್ಲ | ರಾಜನ
ಪಟ್ಟದ ಆನೆಯು ಚಟ್ಟಂತು

## ಕಥೆ ಬರೆಯಿರಿ

'ಕತ್ತೆ ಮತ್ತು ಧರ್ಮ' ಕಥನಕವನವನ್ನು ಗದ್ಯರೂಪದಲ್ಲಿ ಪರಿವರ್ತಿಸಿ ಬರೆಯಿರಿ.

## ಓದುಗರ ಓಲೆ

ಮೌಢ್ಯಗಳು, ನಂಬಿಕೆಗಳು, ಶಕುನಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಓದುಗರ ಓಲೆಗೆ ಪತ್ರವೊಂದನ್ನು ಬರೆಯಿರಿ.

## ಟಿಪ್ಪಣಿ ತಯಾರಿಸಿರಿ

ಇಂಥ ಸಿದ್ದಯ್ಯನಿಗೆ ಬಂತಲ್ಲೋ ಕೆಡುಗಾಲ
ಬಟ್ಟೆಯ ಒಗಿವಾಗ ತಲೆಮ್ಯಾಲೆ | ಕಾಗೆನುಗ್ಗಿ
ಮನೆಯಲ್ಲಿ ಗವುಳಿ ಲೊಚಲೊಚ

ಈ ಪದ್ಯ ಭಾಗದಲ್ಲಿ ಮೂಢನಂಬಿಕೆಯ ಕುರಿತು ಪ್ರಸ್ತಾಪಿಸಲಾಗಿದೆ. ಹೀಗೆ ಅನೇಕ ನಂಬಿಕೆಗಳು ನಮ್ಮ ಜೀವನದಲ್ಲಿ ಇಂದು ಕೂಡ ಹಾಸುಹೊಕ್ಕಾಗಿವೆ. ನಿಮಗೆ ತಿಳಿದಿರುವ ಇಂತಹ ಅನೇಕ ನಂಬಿಕೆಗಳ ಕುರಿತು ಟಿಪ್ಪಣಿ ತಯಾರಿಸಿರಿ.

## ಶಿಷ್ಟರೂಪವನ್ನು ಬರೆಯಿರಿ

ಈ ಕವನದಲ್ಲಿ ಬಂದಿರುವ ಗ್ರಾಮ್ಯಪದಗಳನ್ನು ಬರೆದು ಅವುಗಳ ಶಿಷ್ಟರೂಪವನ್ನು ಬರೆಯಿರಿ.

ಉದಾ:- ಅವುನ - ಅವನ

......... ..........

......... ..........

## ಜೊತೆಗೊಳಿಸಿರಿ

ಇಲ್ಲಿ ನೀಡಲಾದ ಪದಗಳಲ್ಲಿ ವಿರೋಧಾರ್ಥವನ್ನು ನೀಡುವ ಪದಗಳ ಜೊತೆಗಳನ್ನು ಗುರುತಿಸಿ ಬರೆಯಿರಿ.

| | | | | |
|---|---|---|---|---|
| ಆಸಕ್ತಿ | ಅಗೌರವ | ಅನುಕೂಲ | ದೌರ್ಭಾಗ್ಯ | ಅಧೈರ್ಯ |
| ಧೈರ್ಯ | | ಸುಖ | ಅತೃಪ್ತಿ | ಗೌರವ |
| ಹತ್ತಿರ | ಹೆಚ್ಚು | ನಿರಾಸೆ | ತೃಪ್ತಿ | ಆಸೆ |
| ನಿಸ್ವಾರ್ಥ | ದುಃಖ | ನಿರಾಸಕ್ತಿ | ಕಡಿಮೆ | |
| ಅನನುಕೂಲ | | ದೂರ | ಸೌಭಾಗ್ಯ | ಸ್ವಾರ್ಥ |

## ಸಂಚಿಕೆ ತಯಾರಿಸಿರಿ

ಕಥನ ಕವನಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿರಿ.



# ಸ್ವಾಮಿ ವಿವೇಕಾನಂದ

ಅಮೇರಿಕಾದ ಸಹೋದರ ಸಹೋದರಿಯರೇ,

ನೀವು ನಮಗೆ ಪ್ರೀತಿಪೂರ್ವಕವಾಗಿ ಕೊಟ್ಟ ಸ್ವಾಗತಕ್ಕೆ ಉತ್ತರವನ್ನು ಹೇಳಬೇಕೆಂದು ಬಯಸಿದಾಗ ನನ್ನ ಹೃದಯ ಒಂದು ಅವರ್ಣನೀಯ ಆನಂದದಿಂದ ತುಂಬಿ ತುಳುಕಾಡುತ್ತಿದೆ......

ಭಾಷಣ ಮುಂದುವರಿಯುತ್ತಿದ್ದಂತೆ ಅಲ್ಲಿ ನೆರೆದಿದ್ದ ಸಭಿಕರ ಕರತಾಡನ ಮುಗಿಲುಮುಟ್ಟಿತು. ಮಾತಿನ ಮೂಲಕ ಎಲ್ಲರನ್ನೂ ತನ್ನತ್ತ ಸೆಳೆದ ಧೀಮಂತ ವ್ಯಕ್ತಿಯೇ ಸ್ವಾಮಿ ವಿವೇಕಾನಂದರು. ಇವರು ಕ್ರಿಸ್ತಶಕ 1863 ಜನವರಿ 12ರಂದು ಕೊಲ್ಕತ್ತಾದಲ್ಲಿ ವಿಶ್ವನಾಥ ಹಾಗೂ ಭುವನೇಶ್ವರಿ ದಂಪತಿಗಳಿಗೆ ಹುಟ್ಟಿದರು. ಮಗುವಿಗೆ ವೀರೇಶ್ವರ ಎಂದು ಹೆಸರಿಟ್ಟರು. ಕ್ಷತ್ರಿಯ ಕುಲದಲ್ಲಿ ಹುಟ್ಟಿದ ಈ ಮಗುವಿನ ಪ್ರಚಲಿತ ನಾಮವು ಅನ್ನಪ್ರಾಶನ ಸಮಯದಲ್ಲಿ ನರೇಂದ್ರನಾಥ ಎಂದಾಯಿತು. ಮನೆಯವರೆಲ್ಲ ಮುದ್ದಿನಿಂದ ನರೇಂದ್ರನನ್ನು ‘ಬಿಲೆ’ ಎಂದು

ಕರೆಯತೊಡಗಿದರು. ಪ್ರಥಮ ಪಾಠವು ಅವನಿಗೆ ಮನೆಯಲ್ಲಿ ತಾಯಿಯಿಂದಲೇ ಆರಂಭವಾಯಿತು. ಚುರುಕು ಬುದ್ಧಿಯ ನರೇಂದ್ರನಿಗೆ ಪಾಠ ಪ್ರವಚನಗಳಲ್ಲಿ ತುಂಬಾ ಶ್ರದ್ಧೆ ಇತ್ತು. ಮಲ್ಲ ಕಾಳಗ, ಗೋಲಿಯಾಟ, ಮುಷ್ಟಿಯುದ್ಧ, ಓಡುವುದು ಮುಂತಾದ ಆಟಗಳಲ್ಲಿ ಅವನು ಪ್ರಚಂಡ. ಎಳೆತನದಲ್ಲಿ ತುಂಟತನ ತೋರಿಸುತ್ತಾ ಅಕ್ಕಂದಿರನ್ನು ಅಳಿಸಿ ನಗಿಸುತ್ತಿದ್ದ. ನರೇಂದ್ರನಿಗೆ ಪ್ರಾಣಿಗಳನ್ನು ಕಂಡರೆ ಪರಮ ಪ್ರೀತಿ. ಧೈರ್ಯಶಾಲಿ ಮತ್ತು ಪ್ರತಿಭಾ ಸಂಪನ್ನನೂ ಆಗಿದ್ದ ಅವನ ಜ್ಞಾಪಕ ಶಕ್ತಿ ಅದ್ಭುತವಾಗಿತ್ತು. ತಾಯಿಯನ್ನು ಅನನ್ಯ ಭಕ್ತಿಯಿಂದ ಆರಾಧಿಸಿ ತಂದೆಯನ್ನು ಪೂಜ್ಯ ಭಾವದಿಂದ ನೋಡುತ್ತಿದ್ದ.

ಜಟ್ಟಿಯ ಮೈಕಟ್ಟು, ಐದು ಮುಕ್ಕಾಲು ಅಡಿ ಎತ್ತರ, ವಿಸ್ತಾರವಾದ ಎದೆ,ಅಗಲ ಮುಖ, ಅಪೂರ್ವ ತೇಜಸ್ಸಿನಿಂದ ಹೊಳೆಯುವ ಕಣ್ಣುಗಳಿಂದ ಅಸಾಧಾರಣ ದೇಹ ಸೌಂದರ್ಯವನ್ನು ಹೊಂದಿದ್ದ ನರೇಂದ್ರ ಮಹಾರಾಜನಂತೆ ಕಾಣಿಸುತ್ತಿದ್ದ. ಅವನ ತೇಜಸ್ವಿ ಮುಖ ಕಂಡವರೆಲ್ಲ ಮುಗ್ಧರಾಗುತ್ತಿದ್ದರು. ಅವನ ವ್ಯಕ್ತಿತ್ವದಲ್ಲಿ ಸಮ್ಮಿಳಿತವಾಗಿದ್ದ ಗಾಂಭೀರ್ಯ, ಔದಾರ್ಯ, ಧೈರ್ಯ, ಪ್ರೇಮ, ಸತ್ಯ, ದಯೆ ಮುಂತಾದ ಸದ್ಗುಣಗಳು ಬಾಲ್ಯದಿಂದ ಬೀಜರೂಪದಲ್ಲಿ ಹುದುಗಿಕೊಂಡು ಅವನೊಂದಿಗೆ ಕ್ರಮೇಣ ಬೆಳೆಯತೊಡಗಿದುವು. ಕಾಲೇಜಿನ ವಿದ್ಯಾರ್ಥಿಯಾದ ಮೇಲೆ ಆಟ, ತುಂಟತನ, ಎಳೆಸುತನವನ್ನೆಲ್ಲ ಬಿಟ್ಟು ನರೇಂದ್ರನು ಸಾಹಿತ್ಯ, ಇತಿಹಾಸ, ತತ್ತ್ವ ಶಾಸ್ತ್ರ, ಸಂಸ್ಕೃತ ವ್ಯಾಕರಣ, ಸಮಾಜ ವಿಜ್ಞಾನಗಳನ್ನು ವ್ಯಾಸಂಗ ಮಾಡುವುದರಲ್ಲಿ ಶ್ರದ್ಧೆ ವಹಿಸಿದನು. ಗಣಿತವೆಂದರೆ ಅವನಿಗೆ ಬೇಸರ. ಆದರೆ ಸಂಗೀತ, ಕಲೆ, ಇಂಗ್ಲಿಷ್ ಭಾಷೆಯಲ್ಲಿ ಅಪಾರ ಆಸಕ್ತಿ. ಇಂಗ್ಲೀಷಿನ ಕಾವ್ಯ ಇತಿಹಾಸ, ತತ್ತ್ವ ಮೀಮಾಂಸೆ, ವಿಜ್ಞಾನ ಶಾಸ್ತ್ರಗಳನ್ನು ಅವನು ಅಧ್ಯಯನ ಮಾಡಿ ಸ್ವಾಧೀನ ಪಡಿಸಿಕೊಂಡನು. ಜ್ಞಾನ ಭಂಡಾರವನ್ನೇ ಸೂರೆಮಾಡಿ ಅಸಾಧಾರಣ ಬುದ್ಧಿಶಕ್ತಿಯಿಂದ ಎಲ್ಲರ ಮೆಚ್ಚುಗೆ ಸಂಪಾದಿಸಿದ ನರೇಂದ್ರನು ಶಾಸ್ತ್ರೀಯ ಸಂಗೀತವನ್ನು ಇಂಪಾಗಿ ಹಾಡುತ್ತಿದ್ದುದಲ್ಲದೆ ಕೆಲವು ವಾದ್ಯಗಳನ್ನು ಸೊಗಸಾಗಿ ನುಡಿಸುತ್ತಿದ್ದನು.

ನರೇಂದ್ರನು ತನ್ನ ಆಧ್ಯಾತ್ಮಿಕ ವಿಚಾರ ಶಕ್ತಿಯನ್ನು ಹೆಚ್ಚಿಸಿದಂತೆ ಜೀವನದ ಬಗ್ಗೆ ನೂರಾರು ಸಮಸ್ಯೆಗಳು ಅವನನ್ನುಮುತ್ತಿಕೊಂಡವು. ಸಮಸ್ಯೆಗಳನ್ನುಬಗೆಹರಿಸಲು ಅವನು ಪೌರಸ್ತ್ಯ, ಪಾಶ್ಚಾತ್ಯ ತತ್ತ್ವ ಜ್ಞರ ಶಾಸ್ತ್ರಗಳನ್ನು ಓದಿದನು. ಅನೇಕ ಧರ್ಮಪ್ರಚಾರಕರನ್ನು

ಸಂದರ್ಶಿಸಿದನು. ಭಕ್ತನೊಬ್ಬನ ಸಲಹೆಯಂತೆ 19ನೆಯ ವಯಸ್ಸಿನಲ್ಲಿ ನರೇಂದ್ರನು ರಾಮಕೃಷ್ಣಪರಮಹಂಸರನ್ನುಭೇಟಿಯಾದನು. ಆಧ್ಯಾತ್ಮಿಕ ದಾಹದಿಂದ ಬಾಯಾರಿ ಬಳಲಿದ್ದ ನರೇಂದ್ರನನ್ನು ರಾಮಕೃಷ್ಣರು ಪ್ರೀತಿಯಿಂದ ಬರಮಾಡಿಕೊಂಡು ಅವನಿಗೆ ವೇದಾಂತೋಕ್ತ ಸಾಧನ ಮಾರ್ಗಗಳನ್ನು ಬೋಧಿಸಿ ಅದ್ವೈತ ವೇದಾಂತವೆಂಬ ಅಮೃತವನ್ನು ನೀಡಿದರು. ಒಂದು ರಾತ್ರಿ ನರೇಂದ್ರನು ಭಗವಂತನ ಸಾಕ್ಷಿಯಾಗಿ ಎಲ್ಲರೆದುರಿನಲ್ಲಿ ಸಂನ್ಯಾಸ ವ್ರತವನ್ನು ಸ್ವೀಕರಿಸಿದನು. ಮುಂದೆ ವಿವೇಕಾನಂದ ಎಂಬ ಹೆಸರನ್ನು ಧಾರಣೆ ಮಾಡಿ ಧ್ಯಾನದಲ್ಲಿ ಆಸಕ್ತರಾಗಿ ಎಂದೆಂದಿಗೂ ನಾಶವಾಗದ ಸತ್ಯವನ್ನು ಹೊಂದಲು ಕಾರ್ಯೋನ್ಮುಖರಾದರು. ಬ್ರಹ್ಮಚರ್ಯ ಅಭ್ಯಾಸದಿಂದ ವಿದ್ಯಾಪಾರಂಗತರಾಗಿ ಸಂಪೂರ್ಣ ಪಾಂಡಿತ್ಯ ಪಡೆದುಕೊಂಡ ವಿವೇಕಾನಂದರು ಸಂನ್ಯಾಸಿಯಾದರೂ ಪ್ರಪಂಚವನ್ನು ಅಲಕ್ಷಿಸಲಿಲ್ಲ. ವಿವೇಕಾನಂದರು ಸಂಸ್ಕೃತ ಗ್ರಂಥಗಳನ್ನು ಅಧ್ಯಯನ ಮಾಡುವುದರ ಜೊತೆಗೆ ಫ್ರೆಂಚ್ ಭಾಷೆಯನ್ನು ಕಲಿತುಕೊಂಡರು. ಸ್ವಾರ್ಥ, ಆಸೆ ಆಕಾಂಕ್ಷೆಗಳನ್ನೆಲ್ಲ ಧ್ವಂಸ ಮಾಡಿ ಹೊಸ ಹೊಸ ಭಾವನೆಗಳನ್ನು ಹೀರಿ ಆಧ್ಯಾತ್ಮಿಕ ವಿಷಯಗಳನ್ನು ಸಂಗ್ರಹಿಸಿ ಸತ್ಯ ಸಾಕ್ಷಾತ್ಕಾರವನ್ನೇ ತಮ್ಮ ಗುರಿಯಾಗಿ ಇಟ್ಟುಕೊಂಡು ನಿರಂತರ ಹೋರಾಟ ನಡೆಸಿದರು. ಧ್ಯಾನ, ಅಧ್ಯಯನ ಮತ್ತು ಕರ್ಮಗಳಲ್ಲಿ ನಿಪುಣರಾದ ವಿವೇಕಾನಂದರು ಟೀಕೆ, ನಿಂದನೆಗಳನ್ನು ಲಕ್ಷಿಸದೆ ತಮ್ಮ ಪಾಲಿಗೆ ಬಂದ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿದರು. ಅವರು ಏಕಾಂಗಿಯಾಗಿ ಕಾಲ್ನಡಿಗೆಯಲ್ಲಿಯೇ ಗುಜರಾತು, ಮಧುರೆ, ರಾಮೇಶ್ವರ, ತಿರುವಾಂಕೂರು, ಬೊಂಬಾಯಿ, ಬೆಳಗಾವಿ, ಮೈಸೂರು, ದ್ವಾರಕ ಮುಂತಾದ ಊರುಗಳಲ್ಲಿ ಸುತ್ತಾಡಿ ಅನುಭವದ ಬುತ್ತಿಯನ್ನು ತುಂಬಿಕೊಂಡರು. ಅವರಿಗೆ ದೇಶದ ಹಲವಾರು ಸಮಸ್ಯೆ ಮತ್ತು ಜನರ ದುಃಖದಾರಿದ್ರ್ಯಗಳ ದರ್ಶನವಾಯಿತು. ದೀನ ದಲಿತರನ್ನು, ಆದರ್ಶಗಳನ್ನೆಲ್ಲ ಅಲಕ್ಷ್ಯ ಮಾಡಿ ಅಧೋಗತಿಗೆ ಇಳಿದಿರುವ ಜನರನ್ನು ಉದ್ಧಾರ ಮಾಡಲು ಅವರು ತೀರ್ಮಾನಿಸಿದರು.

ವಿವೇಕಾನಂದರು ಯುವಜನರಲ್ಲಿ ಜಾಗೃತಿ ಮೂಡಿಸಿದರು. ಅವರು ತಮ್ಮ ಜನತೆಯನ್ನುಕುರಿತುನುಡಿದಿರುವವಾಣಿದಿವ್ಯವಾಣಿ. "ಏಳಿ, ಎದ್ದೇಳಿ ಗುರಿ ಮುಟ್ಟುವವರೆಗೂ ನಿಲ್ಲದಿರಿ. ಓ ನನ್ನ ಭಾರತೀಯರೇ, ಕೊನೆಗೂ ಸುದೀರ್ಘಕಾಲದ ನಿದ್ರೆ ಕೊನೆಗಾಣುತ್ತಿದೆ. ಸೋಲು, ಸಂಕಟಗಳು ದೂರವಾಗುತ್ತಿವೆ. ನಮ್ಮದು ಪುಣ್ಯಭೂಮಿ. ಸುತ್ತಲೂ ಬೀಸುತ್ತಿರುವ ಗಾಳಿಯಿಂದ ಅದು ಎಚ್ಚರಗೊಳ್ಳುತ್ತದೆ. ಯಾರು ಎದುರಿಸಲಾಗದ ಶಕ್ತಿ ಅದಕ್ಕಿದೆ. ನಮ್ಮ

ತಾಯ್ನಾಡಿಗಾಗಿ ಎಲ್ಲ ತ್ಯಾಗಗಳಿಗೂ ಸಿದ್ಧರಿರುವಿರಾ? ಹಾಗೆ ಸಿದ್ಧರಿರುವುರಾದರೆ ನಾಡಿನ ಬಡತನವನ್ನು ನೀಗಿಸಬಲ್ಲಿರಿ. ಕೋಟ್ಯಂತರ ಅಣ್ಣತಮ್ಮಂದಿರು ಅಕ್ಕತಂಗಿಯರು ಹೊಟ್ಟೆಗೆ ಅನ್ನವಿಲ್ಲದೆ ಮೈಯಿಗೆ ಬಟ್ಟೆ ಇಲ್ಲದೆ ಮಲಗಲು ಮನೆ ಇಲ್ಲದೆ ನರಳುತ್ತಿದ್ದಾರೆ ಎಂಬುದು ಗೊತ್ತೇ? ಅವರ ಬಗ್ಗೆ ಕನಿಕರವಿದೆಯೇ? ಅವರಿಗಾಗಿ ನೀವು ತೊಟ್ಟು ಕಣ್ಣೀರು ಸುರಿಸುವಿರಾ? ಎಷ್ಟು ತೊಂದರೆಗಳೇ ಬರಲಿ ಅವುಗಳನ್ನು ಎದುರಿಸುವ ಕೆಚ್ಚು ನಿಮ್ಮಲ್ಲಿದೆಯೇ? ನಾವು ಈ ರಾಷ್ಟ್ರದ ವೀರಪುತ್ರರು, ಪುತ್ರಿಯರಾಗಬೇಕಾಗಿದೆ.. ಇದಕ್ಕಾಗಿ ನೀವು ಪಣತೊಟ್ಟು ಕಾರ್ಯೋನ್ಮುಖರಾಗಿ, ಎದ್ದು ನಿಲ್ಲಿ! ಧೀರರಾಗಿ, ಬಲಾಢ್ಯರಾಗಿ, ಜವಾಬ್ದಾರಿಯನ್ನೆಲ್ಲ ನೀವೇ ವಹಿಸಿಕೊಳ್ಳಿ. ನಿಮ್ಮ ಭವಿಷ್ಯ ನಿರ್ಮಾಪಕರು ನೀವೇ ಎಂಬುದನ್ನು ಅರಿಯಿರಿ. ನಿಮ್ಮ ಭವಿಷ್ಯವನ್ನು ನೀವೇ ನಿರ್ಧರಿಸಿರಿ" ಎಂದು ಅವರು ನುಡಿದರು.

ವಿವೇಕಾನಂದರು ಹಿಂದೂ ಧರ್ಮದ ಪ್ರತಿನಿಧಿಯಾಗಿ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಲು ಆಮೇರಿಕಾಕ್ಕೆ ಪ್ರಯಾಣ ಮಾಡಿದರು. ಸಕಲ ಧರ್ಮಗಳ ತತ್ತ್ವವನ್ನು ತಿಳಿದುಕೊಂಡು ಎಲ್ಲಾ ಧರ್ಮಗಳನ್ನು ಗೌರವಿಸುತ್ತಿದ್ದ ಸ್ವಾಮೀಜಿ 1893 ಸೆಪ್ಟೆಂಬರ್ 11ರಂದು ಅಮೆರಿಕಾದ ಚಿಕಾಗೋದಲ್ಲಿ ನಡೆದ ಸಮ್ಮೇಳನದಲ್ಲಿ ಸರ್ವಧರ್ಮ ಸಮನ್ವಯವನ್ನು ಸೂಚಿಸಿ ಭಾಷಣ ಮಾಡಿ ಎಲ್ಲರ ಮನಸ್ಸು ಸೂರೆಗೊಂಡರು. ಧರ್ಮಗಳು ಪರಸ್ಪರ ವಿರೋಧಿಸುವುದನ್ನು ಬಿಡಬೇಕು. ಎಲ್ಲ ಧರ್ಮಗಳು ಭಗವಂತನನ್ನೇ ಸೇರುತ್ತವೆ. ಆದ್ದರಿಂದ ಎಲ್ಲ ಧರ್ಮಗಳು ಶ್ರೇಷ್ಠ ಎಂದು ಹೇಳಿದ ಅವರ ಮಾತಿನ ಸತ್ಯ ಸಹಸ್ರ ಹೃದಯಗಳನ್ನು ಮುಟ್ಟಿತು. ಅವರು ತಮ್ಮ ಅಮೃತವಾಣಿಯಿಂದ ಭರತ ಖಂಡಕ್ಕೆ ಕೀರ್ತಿ ತಂದರು.

ಸ್ವಾಮೀಜಿಯವರ ಜೀವನದಲ್ಲಿ ಹಾಗೂ ಕಾರ್ಯಚಟುವಟಿಕೆಗಳಲ್ಲಿ ಸ್ವದೇಶ ವಾತ್ಸಲ್ಯ, ದೇಶಭಕ್ತಿ, ಉತ್ಕಟವಾದ ಸತ್ಯಪ್ರಿಯತೆ ಮತ್ತು ಬಡವರ ಸೇವೆಯನ್ನು ಸ್ಪಷ್ಟವಾಗಿ ಗುರುತಿಸಬಹುದು. ದೇಹದ ಆರೋಗ್ಯ ಕೆಡಲು ಪ್ರಾರಂಭವಾದ ಮೇಲೂ ಅವರು ತಮ್ಮ ಚಟುವಟಿಕೆಗಳನ್ನು ಕಡಿಮೆ ಮಾಡಲಿಲ್ಲ. ಬಳಿಗೆ ಬಂದವರನ್ನೆಲ್ಲ ವಿಶ್ವಾಸದಿಂದ ಬರಮಾಡಿಕೊಂಡು ಉಪದೇಶ ನೀಡಿದರು. 1902 ಜುಲೈ 4 ರಂದು ಇಹಲೋಕ ತ್ಯಜಿಸಿದರು.

**ಆರ್ಯಾಂಬ ಪಟ್ಟಾಭಿ**

### ಲೇಖಕರ ಪರಿಚಯ



ಆರ್ಯಾಂಬ ಪಟ್ಟಾಭಿಯವರು ಬಿ.ಎಂ.ಕೃಷ್ಣಸ್ವಾಮಿ ಮತ್ತು ತಂಗಮ್ಮ ದಂಪತಿಯ ಕಿರಿಯ ಪುತ್ರಿಯಾಗಿ 12 ಮಾರ್ಚ್ 1936 ರಂದು ಜನಿಸಿದರು. ಇವರು ಬರೆದ 'ಭಾರತ ಮಹಾಪುರುಷರು' ಎಂಬ ಪುಸ್ತಕದಿಂದ ಈ ಪಾಠ ಭಾಗವನ್ನು ಆಯ್ದುಕೊಳ್ಳಲಾಗಿದೆ. ಆರಾಧನೆ, ಪರಂಪರೆ, ಹೊಂಗನಸು, ಕಾಮನಬಿಲ್ಲು ಮುಂತಾದ ಸುಮಾರು ಇಪ್ಪತ್ತೈದು ಕಾದಂಬರಿಗಳನ್ನೂ ಮರಳಿಬಂದ ಮಮತೆ, ಉದಯರವಿ ಎಂಬ ಕಥಾ ಸಂಕಲನಗಳನ್ನೂ ಇವರು ರಚಿಸಿರುವರು. ಇವರ ಎರಡು ಮುಖ, ಮರಳಿಗೂಡಿಗೆ ಕಾದಂಬರಿಗಳು ರಾಜ್ಯ ಪ್ರಶಸ್ತಿಯನ್ನು ಗಳಿಸಿವೆ.

## ಚಟುವಟಿಕೆಗಳು

### ಉತ್ತರಿಸಿರಿ

1. ನರೇಂದ್ರನು ಎಳೆತನದಲ್ಲಿ ತುಂಟತನ ತೋರಿಸುತ್ತಾ ಯಾವೆಲ್ಲಾ ಆಟಗಳ ಮೂಲಕ ಅಕ್ಕಂದಿರನ್ನು ಅಳಿಸಿ ನಗಿಸುತ್ತಿದ್ದ?
2. ಬಾಲ್ಯಕಾಲದಲ್ಲಿ ಯಾವೆಲ್ಲಾ ಸದ್ಗುಣಗಳು ನರೇಂದ್ರನಲ್ಲಿ ಹುದುಗಿಕೊಂಡು ಇದ್ದುವು?
3. ವಿವೇಕಾನಂದರು ಭರತ ಖಂಡಕ್ಕೆ ಕೀರ್ತಿ ತಂದ ಬಗೆ ಹೇಗೆ?
4. ವಿವೇಕಾನಂದರು ಕಾಲ್ನಡಿಗೆಯಲ್ಲಿ ಯಾವೆಲ್ಲಾ ಊರುಗಳನ್ನು ಸುತ್ತಾಡಿದರು?

### ಸಮರ್ಥಿಸಿ ಬರೆಯಿರಿ

'ನರೇಂದ್ರನು ಮಹಾರಾಜನಂತೆ ಕಾಣಿಸುತ್ತಿದ್ದ. ಜ್ಞಾನಭಂಡಾರ ಮತ್ತು ಅಸಾಧಾರಣ ಬುದ್ಧಿಶಕ್ತಿಯಿಂದ ಎಲ್ಲರ ಮೆಚ್ಚುಗೆ ಸಂಪಾದಿಸಿದ' ಈ ಹೇಳಿಕೆಗೆ ಕಾರಣವಾದ ಅಂಶಗಳನ್ನು ಚರ್ಚಿಸಿ ನಿಮ್ಮ ಅಭಿಪ್ರಾಯದೊಂದಿಗೆ ಸಮರ್ಥಿಸಿ ಬರೆಯಿರಿ.

## ವ್ಯಕ್ತಿ ಪರಿಚಯ ಬರೆಯಿರಿ

ಸ್ವಾಮಿ ವಿವೇಕಾನಂದರಂತೆ ಸಮಾಜದ ಏಳಿಗೆಗಾಗಿ ಶ್ರಮಿಸಿದ ಮಹನೀಯರ ಪೈಕಿ ಬಾಬಾ ಅಮ್ಟೆ ಕೂಡಾ ಒಬ್ಬರು. ಪದಸೂರ್ಯದಲ್ಲಿ ನೀಡಿದ ಮಾಹಿತಿಗಳ ಆಧಾರದಲ್ಲಿ ಬಾಬಾ ಆಮ್ಟೆಯವರ ವ್ಯಕ್ತಿ ಪರಿಚಯ ಬರೆಯಿರಿ.

1914 ಡಿಸೆಂಬರ್ 26 ರಂದು ಮಹಾರಾಷ್ಟ್ರದ ಹಿಂಗನಘಾಟ್ ಎಂಬಲ್ಲಿ ಜನನ

ಮಹಾತ್ಮಾಗಾಂಧಿಯ ಅನುಯಾಯಿ

ಕುಷ್ಟರೋಗಿಗಳಿಗಾಗಿ ಮತ್ತು ಅಂಗವಿಕಲರಿಗಾಗಿ ಜೀವನವನ್ನೇ ಮುಡಿಪಾಗಿಟ್ಟರು



ಪದ್ಮಶ್ರೀ, ಪದ್ಮವಿಭೂಷಣ ಹಾಗೂ ಇನ್ನಿತರ ಗೌರವ ಪ್ರಶಸ್ತಿಗಳನ್ನು ಪಡೆದರು.

9 ಫೆಬ್ರವರಿ 2008 ರಲ್ಲಿ ಆನಂದ್ ವನ್ ಎಂಬಲ್ಲಿ ನಿಧನ.

ನಾಗಪುರ ವಿಶ್ವವಿದ್ಯಾಲಯದಿಂದ ಕಾನೂನು ಪದವಿ.

ಆದಿವಾಸಿ ಬಡಬಗ್ಗರ ಉಪಯೋಗಕ್ಕಾಗಿ ಶಾಲಾ ಕಾಲೇಜು ಮತ್ತು ಆಸ್ಪತ್ರೆಗಳ ಸೌಲಭ್ಯಗಳನ್ನು ಮಾಡಿಕೊಟ್ಟರು.

ತಂದೆ - ದೇವದಾಸ್ ಹರ್ ಬಾಜಿ ಆಮ್ಟೆ, ಸರಕಾರಿ ಉದ್ಯೋಗಿ

## ಕಿರುಲೇಖನ

ವಿವೇಕಾನಂದರು ಯುವ ಜನರಿಗೆ ನೀಡಿದ ಸಂದೇಶವನ್ನು ನಿಮ್ಮ ಅಭಿಪ್ರಾಯಗಳೊಂದಿಗೆ ಕಿರುಲೇಖನ ರೂಪದಲ್ಲಿ ಬರೆಯಿರಿ.

## ಪದ ವಿಂಗಡಣೆ

ಕೆಳಗೆ ಕೊಡಲಾದ ಪದಗಳನ್ನು ವಿಂಗಡಿಸಿ ಬರೆಯಿರಿ

ಉದಾ: ಗೋಲಿಯಾಟ = ಗೋಲಿ + ಆಟ

ಭಕ್ತನೊಬ್ಬ =

ಎಲ್ಲರೆದುರಿನಲ್ಲಿ =

ದರ್ಶನವಾಯಿತು =

ನಾಶವಾಗದ =

## ಪರ್ಯಾಯ ಪದ

ಕೆಳಗೆ ನೀಡಲಾದ ಪದಗಳ ಪರ್ಯಾಯ ಪದಗಳನ್ನು ಬರೆಯಿರಿ.

ಉದಾ: ತಾಯಿ – ಮಾತೆ, ಅಮ್ಮ

ತಂದೆ -

ದೇಹ -

ಕಣ್ಣು -

ಮನೆ -

## ಭಾಷಣ ಸಂಗ್ರಹಿಸಿರಿ

ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣದ ಪ್ರಧಾನ ಅಂಶಗಳನ್ನು ಸಂಗ್ರಹಿಸಿ ಬರೆಯಿರಿ.

ಅಮೇರಿಕಾದ ಸಹೋದರ, ಸಹೋದರಿಯರೇ,

ನೀವು ನಮಗೆ ಪ್ರೀತಿ ಪೂರ್ವಕವಾಗಿ ಕೊಟ್ಟ ಸ್ವಾಗತಕ್ಕೆ ಉತ್ತರವನ್ನು ಹೇಳಬೇಕೆಂದು ಬಯಸಿದಾಗ ನನ್ನ ಹೃದಯ ಒಂದು ಅವರ್ಣನೀಯ ಆನಂದದಿಂದ ತುಂಬಿ ತುಳುಕಾಡುತ್ತಿದೆ. ........

# ಪದಕೋಶ

**ಅ**

ಅರಿಕೆ - ತಿಳಿಸುವಿಕೆ

**ಆ**

ಆರಂಭಗಾರರು - ಬೇಸಾಯಗಾರರು

ಆರು (ಆರ್) - ನೊಗವನ್ನು ಹೂಡಿದ ಎತ್ತುಗಳನ್ನು ಕಟ್ಟಿದ ನೇಗಿಲು

**ಉ**

ಉಡುಗು - ಬಾಗು, ಮುದುಡು

ಉದ್ಯಾನ - ತೋಟ

ಉಂಬಳಿ - ಉಚಿತವಾಗಿ ಭೂಮಿಯನ್ನು ಕೊಡುವುದು

**ಕ**

ಕಗ್ಗ - ಜಗಳ / ನೀರಸ ಭಾಷಣ

ಕಡಗ - ಬಳೆ

ಕಂದೀಲು - ಚಿಮಿಣಿ ಎಣ್ಣೆಯ ಲಾಟೀನು

ಕರುಳು - ಪ್ರೀತಿ ವಾತ್ಸಲ್ಯ

ಕರ್ಬೊ ಟಿಗಾರ - ಕಬ್ಬಿಣದ ಕೆಲಸ

ಕಲ್ಕುಡ - ಕಲ್ಲಿನ ಕೆಲಸ ಶಿಲ್ಪಿ

ಕವಳಿಗೆ - ವೀಳ್ಯದೆಲೆಯ ಕಟ್ಟು

ಕಸರತ್ತು - ವ್ಯಾಯಾಮ

ಕೀಟಲೆ - ತೊಂದರೆ

ಕುಳಿರ್ಗಾಳಿ - ತಂಪಾದ ಗಾಳಿ

ಕೇರಿ - ಓಣಿ

ಕೊಳರು - ತಂಪು

**ಗ**

ಗಗ್ಗರಿ - ಕಾಲಕಡಗ

ಗಂಡಾಂತರ - ಅಪಾಯ

ಗಡಿಗೆ - ಪಾತ್ರೆ

ಗಲ್ಲಿ - ಸಂದಿ, ಓಣಿ, ಕಿರುದಾರಿ

ಗಾಸಿ - ತೊಂದರೆ

ಗುಡಾಣ - ದೊಡ್ಡ ಹಂಡೆ
ಗುಣಿ - ಕುಳಿ, ಹೊಂಡ
ಗೆಣತಿ - ಗೆಳತಿ, ಸಖಿ, ಒಡನಾಡಿ
ಗೈಮೆ - ಕೆಲಸ

**ಚ**

ಚೆಂಬುಟಿಗಾರ - ತಾಮ್ರದ ಕೆಲಸ

**ಛ**

ಛಲ - ಹಠ

**ಜ**

ಜಂಘಾಬಲ - ಎದ್ದು ನಿಲ್ಲುವ ಶಕ್ತಿ
ಜೋಕಾಲಿ - ಉಯ್ಯಾಲೆ
ಜೋಡಿದಾರ - ಎರಡು ಹಳ್ಳಿಗಳ ಇನಾಮು ಭೂಮಿಯುಳ್ಳವ

**ತ**

ತಂಗಳು - ತಂಪಾದ ಆಹಾರ
ತುಪ್ಪಟ್ಟಿ - ಉಣ್ಣೆ
ತೊಗಲು - ಚರ್ಮ
ತೋಪು - ಮರಗಳ ಗುಂಪು

**ದ**

ದಟ್ಟಿ - ಸಣ್ಣಲುಂಗಿ
ದಿಗಿಲು - ಆಶ್ಚರ್ಯ
ದೂಷಣೆ - ನಿಂದಿಸು

**ನ**

ನಿರಾಳ - ನೆಮ್ಮದಿ, ಹಗುರವಾದ

**ಪ**

ಪಟಾಲಮ್ - ತಂಡ
ಪಡೆಯಕ್ಕಿ - ಊಟದ ಅಕ್ಕಿ
ಪರಡೆ - ಭಿಕ್ಷಾ ಪಾತ್ರೆ
ಪೊಳ್ಳು - ಪಡಗ
ಪ್ರಯಾಸ - ಕಷ್ಟ

ಫ

| | | |
|---|---|---|
| ಫರ್ಲಾಂಗು | - | 220 ಗಜ (1ಗಜ = 3 ಅಡಿ) |

ಬ

| | | |
|---|---|---|
| ಬಳವಿ | - | ಬೆಳೆಯುವುದು |
| ಬಾಹ್ಯಾಡಂಬರ | - | ತೋರಿಕೆಯ |
| ಬಿನ್ನಾಣ | - | ಸೌಂದರ್ಯ / ಸುಂದರ |
| ಬೆಡಗು | - | ಒಣ ಆಡಂಬರ |
| ಬೈರಸೂಡ | - | ಅರಸ |

ಮ

| | | |
|---|---|---|
| ಮಿಸುಕು | - | ಕದಲು |
| ಮುಗುಟ | - | ಬಟ್ಟೆ |
| ಮುಂದಲ | - | ಮುಂಭಾಗ |
| ಮುಸುಕಿ | - | ಮರೆಮಾಡು |
| ಮೆಲುಕು | - | ಹೇಳಿದ್ದನ್ನು ಮತ್ತೆ ಮತ್ತೆ ಹೇಳು |
| ಮೊಳ | - | 18 ಇಂಚು |
| ಮೌಖಿಕ | - | ಎದುರುಬದುರಾಗಿ |

ರ

| | | |
|---|---|---|
| ರಗಳೆ | - | ಹಾಳು ಹರಟೆ |
| ರಸಿಕ | - | ಸರಸವಾಗಿ ಮಾತನಾಡುವವ |

ಲ

| | | |
|---|---|---|
| ಲೇವಡಿ | - | ಅಪಹಾಸ್ಯ |

ಸ

| | | |
|---|---|---|
| ಸೆಟೆಯು | - | ತಲ್ಲಣ |
| ಸೋಕು | - | ಸ್ಪರ್ಶಿಸು |
| ಸೋಜಿಗ | - | ಕುತೂಹಲ, ಆಶ್ಚರ್ಯ, ಬೆರಗು |
| ಸೋಪಾನ | - | ಮೆಟ್ಟಿಲು |

ಹ

| | | |
|---|---|---|
| ಹಚ್ಚಡ | - | ಹೊದಿಕೆ |
| ಹತೋಟಿ | - | ನಿಯಂತ್ರಣ |
| ಹೊತ್ತಾರೆ | - | ಪ್ರಾತಃ ಕಾಲ |
| ಹೊಸಕು | - | ಉಜ್ಜುವುದು |

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ...ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

ಸಂಪರ್ಕಿಸಬೇಕಾದ ವಿಳಾಸ

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in